ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯದ ಹಿನ್ನಲೆ - ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಯ ಚರಿತ್ರೆ ಅಧ್ಯಯನದ ಎಂ. ಫಿಲ್
ಪದವಿಗಾಗಿ ಅರ್ಪಿಸುವ ನಿಬಂಧ

ಸಂಶೋಧಕರು
ರಾಜೇಶ್

ನೋಂದಣಿ ಸಂಖ್ಯೆ: 151107030057

ಮಾರ್ಗದರ್ಶಕರು
ಡಾ| ಡೆನ್ನಿಸ್ ಫೆರ್ನಾಂಡೀಸ್

೨೦೧೬

ಕರ್ನಾಟಕ ಥಿಯೊಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು- ೫೭೫೦೦೧

ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯದ ಹಿನ್ನಲೆ - ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ ಹಂಪಿಯ ಚರಿತ್ರೆ ಅಧ್ಯಯನದ ಎಂ. ಫಿಲ್
ಪದವಿಗಾಗಿ ಅರ್ಪಿಸುವ ನಿಬಂಧ

ಸಂಶೋಧಕರು
ರಾಜೇಶ್

ನೋಂದಣಿ ಸಂಖ್ಯೆ: 151107030057

ಮಾರ್ಗದರ್ಶಕರು
ಡಾ। ಡೆನ್ನಿಸ್ ಫೆರ್ನಾಂಡೀಸ್

೨೦೧೬

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು– ೫೭೫೦೦೧

ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯ-ಒಂದು ಅಧ್ಯಯನ

ಅಧ್ಯಾಯಗಳ ವಿವರ

ಯೋಗ್ಯತಾ ಪತ್ರ

ಶ್ರೀ ರಾಜೇಶ್ ರವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ 'ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯ' ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಎಂ.ಫಿಲ್. ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧ ಪಡಿಸಿರುತ್ತಾರೆ.

ಈ ಮಹಾ ಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಕ್ಷೇತ್ರಕಾರ್ಯ, ಅಭಿಪ್ರಾಯ ಸಂಗ್ರಹ, ಸಂದರ್ಶನ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಈ ಮಹಾ ಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ.

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ ಮಂಗಳೂರು – 575 001

ಡಾ. ಡೆನ್ನಿಸ್ ಫೆರ್ನಾಂಡೀಸ್

ಸಂಶೋಧನಾ ಮಾರ್ಗದರ್ಶಕರು

Dr. Denis Fernandes
Associate Professor of History
St. Aloysius College, (Autonomous)
Mangalore-575 003.

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಾದರ ಪಡಿಸುವ "ತುಳುನಾಡಿನಲ್ಲಿ ನಾಥಪಂಥದ ವಿಕಾಸ ಮತ್ತು ಜೋಗಿ ಸಮುದಾಯ" ಒಂದು ಅಧ್ಯಯನ ಎಂಬ ಈ ಒಂದು ಶೀರ್ಷಿಕೆಯ ಮಹಾ ಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದೆ. ಇದು ಸಂಶೋಧನಾ ಪರಿಶ್ರಮ, ವಿಶ್ಲೇಷಣೆ ಮತ್ತು ಸಮಗ್ರ ಅಧ್ಯಯನದ ಫಲೋದಯವಾಗಿದೆ. ಈ ಪ್ರಬಂಧವು ಮಂಗಳೂರಿನ ತಿಯೋಲಾಜಿಕಲ್ ಸಂಶೋಧನ ಕೇಂದ್ರದಲ್ಲಿ ಡಾ। ಡೆನ್ನಿಸ್ ಫೆರ್ನಾಂಡೀಸ್‌ರವರ ಮಾರ್ಗದರ್ಶದಲ್ಲಿ ಸಿದ್ಧ ಪಡಿಸಲು ಸಾಧ್ಯವಾಗಿರುತ್ತದೆ. ಈ ಮಹಾ ಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಬಿಡಿಯಾಗಿ ಇಲ್ಲವೇ ಪೂರ್ತಿಯಾಗಿ ಬಳಸಿ ಕೊಂಡಿಲ್ಲವೆಂದು ನಾನು ಈ ಮೂಲಕ ದೃಢ ಪಡಿಸುತ್ತೇನೆ.

ರಾಜೇಶ್
ಸಂಶೋಧಕರು
ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ ಮಂಗಳೂರು – 575 001

ಅಧ್ಯಾಯ – 1

ಐತಿಹಾಸಿಕ ಮತ್ತು ಪ್ರಾಚೀನ ವೈದಿಕ ಪುರಾಣ ಕಾಲದಿಂದ ಇಂದಿನ ವೈಜ್ಞಾನಿಕ ಯುಗದವರೆಗೂ ಜನ್ಮಭೂಮಿ ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಮೆರೆದಿದೆ. "ಬಿನ್ನರು ಬಿರ್ಹಿಲೋಕ" ಎಂಬ ಉಕ್ತಿಯಂತೆ ಲೋಕದ ಜನತೆ, ಜನಾಂಗ, ಅಭಿರುಚಿ, ಆಕಾರ, ಭಾವನೆ, ಅಂತರಂಗದ ಚಿಂತನೆಗಳಲ್ಲಿ ವ್ಯತ್ಯಾಸವಿದ್ದರೂ ಕೂಡಾ ಎಲ್ಲರೂ ಸಹಬಾಳ್ವೆಯಿಂದ ಬಾಳುತ್ತಿರುವುದು ಮಾನವ ಜೀವನದ ಸಂಸ್ಕೃತಿಯಾಗಿದೆ.

ಕರಾವಳಿ ಜಿಲ್ಲೆ ವಿಭಿನ್ನತೆಗಳ ನೆಲೆಬೀಡು. ಇಲ್ಲಿ ಪಂಚದ್ರಾವಿಡ ಭಾಷೆಗಳಿವೆ. ಸರ್ವಧರ್ಮಗಳ ತವರೂರಾಗಿರುವ ಇಲ್ಲಿನ ನೆಲದಲ್ಲಿ ವೈದಿಕ, ಬೌದ್ಧ, ಜೈನ, ನಾಥ ಎಂಬ ಸಂಪ್ರದಾಯವು ವಿಕಾಸಗೊಂಡಂತೆ ಶೈವ, ವೈಷ್ಣವ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಭಿನ್ನ ಧರ್ಮೀಯ ಭಾವನೆಗಳು ಮೊಳಕೆಯೊಡೆಯಿತು. ಮುಂದಕ್ಕೆ ವಿದೇಶಿಯರ ಆಗಮನದಿಂದ ಇಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಮತಗಳು ಬೆಳೆದು ನಿಂತು ಹೊಸ ಸಂಸ್ಕೃತಿಯ ವಿಕಸನಕ್ಕೆ ಮುನ್ನುಡಿಯಾಯಿತು. ಆದರೆ, ಈ ಎಲ್ಲಾ ಹೊಸತನದ ನಡುವೆಯೂ ನಾಥ ಪಂಥವೆಂಬ ಪುರಾತನ ಯೋಗ ಪಂಥವು ತನ್ನ ಸಾಧನಾ ಮಾರ್ಗದಿಂದಲೇ ಆಧ್ಯಾತ್ಮಿಕ ಪ್ರಪಂಚಕ್ಕೆ ತೆರೆದುಕೊಂಡು ಬೆಳೆದು ನಿಂತಿರುವುದು ಇತಿಹಾಸದ ಪುಟಗಳಿಂದ ತಿಳಿದು ಬರುವ ಸಂಗತಿ.

'ನಾಥ' ಎಂಬ ಶಬ್ಧಕ್ಕೆ ಆಶ್ರಯದಾತ ಇಲ್ಲವೇ ರಕ್ಷಕ ಎಂಬ ಅರ್ಥವಿದೆಯೆಂಬುದಾಗಿ 'ಅಥರ್ವವೇದ' ಹಾಗೂ 'ತೈತ್ತರೀಯ' ಬ್ರಾಹ್ಮಣದಲ್ಲಿ ಉಲ್ಲೇಖವಿದೆ.

ನಕಾರೋ ನಾದಿರೂಪಃ ಥಕಾರಃ ಸ್ಥಾಪ್ಸತೇಃ ಸದಾಃ ಭೂವನತ್ರಯಮೇವೈಕಃ ಶ್ರೀ ಗೋರಕ್ಷ ನಮೋಸ್ತುತೇಃ

'ನಾ' ಎಂದರೆ ಅನಾಧಿ 'ಥ' ಎಂದರೆ ತ್ರಿಲೋಕ ಸ್ಥಿತಿಗೆ ಕಾರಣಕರ್ತನಾದವ ಅವನೇ ನಾಥ ಎಂದು 'ರಾಜ ಗುಹ್ಯ' ಎಂಬ ಗ್ರಂಥದಲ್ಲಿ ಹೇಳಿದೆ.[೧] ಇದನ್ನೇ ಗುರು, ಆಶ್ರಯದಾತ, ರಕ್ಷಕ ಮಹಾದೇವನೆಂಬುದಾಗಿಯೂ ಅರ್ಥೈಸಿಕೊಳ್ಳಬಹುದು ಎಂದು ಗ್ರಂಥ ಕರ್ತರ ಅಭಿಪ್ರಾಯ.

ನಾಥ ಪಂಥೀಯರು ಯೋಗ ಮಾರ್ಗದಲ್ಲಿ ತಪೋ ಸಾಧನೆ ಮಾಡುತ್ತಿದ್ದವರಾದ್ದರಿಂದ ಅವರಿಗೆ ವನಮೂಲಿಕೆಗಳ ಪರಿಚಯವಿದ್ದಿತು. ಹಾಗಾಗಿಯೇ ಅವರು ರಸಾಯನವನ್ನು ಕಂಡು ಹಿಡಿದು ಅಮರತ್ವವನ್ನು ಸಂಪಾದಿಸುತ್ತಿದ್ದರು. ಈ ರಸಾಯನದ ಉಲ್ಲೇಖ ಪತಂಜಲಿಯಲ್ಲಿ ಲಭ್ಯವಿದೆ. ಹಾಗಾಗಿ ಈ ನಾಥ ಪಂಥದ ಮೂಲ ಪತಂಜಲಿಗಿಂತಲೂ ಹಿಂದಿನದು ಎನ್ನಬಹುದು.

ಕರಾವಳಿ ಜಿಲ್ಲೆಗಳಲ್ಲಿ ಮುಖ್ಯವಾಗಿ ಮಂಗಳೂರಿನ ಕದ್ರಿ, ವಿಟ್ಲ, ಕುಂದಾಪುರ, ಎಡಮೊಗ್ಗೆಯ ಹಲವರಿ, ಚಿತ್ರದುರ್ಗ, ಸೌದತ್ತಿ, ಕಾರ್ಕಳದ ಸೂಡ ಮುಂತಾದ ಕಡೆಗಳಲ್ಲಿ ನಾಥ ಪಂಥದ ಜೋಗಿಗಳು ಪ್ರಭಾವ ಶಾಲಿಯಾಗಿ ಕಂಡು ಬರುತ್ತಾರೆ. ಇದಕ್ಕೆ ಕಾರಣ ಬೇರೆ ಧರ್ಮಗಳು ಈ ಮಟ್ಟಿನಲ್ಲಿ ಪ್ರಭಾವವನ್ನು ಉಳಿಸಿಕೊಂಡಿಲ್ಲದಿರುವುದು.

ಭಾರತದಲ್ಲಿ ಮುಖ್ಯವಾಗಿ ಮೂರು ಝುಂಡಿ ಸಂಪ್ರದಾಯವಿದೆ. ಅವುಗಳೆಂದರೆ 1.ನೇಪಾಳದ ರತನ್‌ಪುರ ಮಠದಿಂದ ಹೊರಡುವ ಝುಂಡಿ 2.ಕಾಠ್ಮಂಡುವಿನ ಭ್ರಗಸ್ಥಲಿನಿಂದ ಹೊರಡುವ ಝುಂಡಿ 3.ತ್ರ್ಯಂಬಕೇಶ್ವರದಿಂದ ಕದಲೀಗೆ ಹೊಡುವ ಝುಂಡಿ.

ಭಾರತದ ಬೇರೆ ಬೇರೆ ಕಡೆಗಳಲ್ಲಿ ನಾಥ ಪಂಥೀಯ ಮಠಗಳು ಇದ್ದು, ಅದಕ್ಕೆ ಸಂಬಂಧಿಸಿದಂತೆ 'ಬಾರಹ ಪಂಥ ಯೋಗಿ ಮಹಾಸಭಾ'ದ ಮುಖ್ಯ ಕಾರ್ಯಾಲಯವು ಹರಿದ್ವಾರದಲ್ಲಿದೆ.

ಮತ್ಸ್ಯೇಂದ್ರನಾಥನ ಶಿಷ್ಯ ಗೋರಖನಾಥನೇ ನಾಥ ಪಂಥದ ಪ್ರವರ್ತಕನೆಂಬ ಊಹೆ ಕೆಲವರದ್ದಾದರೂ, ಈ ಬಗ್ಗೆ ಖಚಿತ ಆಧಾರಗಳಿಲ್ಲ. ಗೋರಕ್ಷನಾಥನಿಂದ ಪ್ರವರ್ತಿತ ಹನ್ನೆರಡು ಶಾಖೆಗಳು ಶಿವನ ಹದಿನೆಂಟು ಸಂಪ್ರದಾಯಗಳು ಪರಸ್ಪರ ಕಚ್ಚಾಡುತ್ತಿದ್ದುದನ್ನು ಕಂಡ ಗೋರಕ್ಷ ಇವುಗಳನ್ನು ವಿಲೀನಗೊಳಿಸಿ ಹನ್ನೆರಡು ಶಾಖೆಗಳಾಗಿ ವಿಭಾಗ ಮಾಡಿದನಂತೆ. ಈ ಪಂಥಗಳು ಹೀಗಿವೆ.

ಸಂಖ್ಯೆ	ಪಂಥ	ಪ್ರವರ್ತಕರು	ಮೂಲಸ್ಥಾನ
1	ಸತ್ಯನಾಥ್	ಬ್ರಹ್ಮಾಜಿ	ಪಾತಾಳಭುವನೇಶ್ವರ್ (ಒರಿಸ್ಸಾ)
2.	ಧರ್ಮನಾಥ್	ಧರ್ಮಪುತ್ರ ಯಾ ಯುದಿಷ್ಠಿರ	ದುಪ್ಲುದೇಲಕ್ ನೇಪಾಲ
3.	ರಾಮನಾಥ್	ಶ್ರೀ ರಾಮಚಂದ್ರ ಪಂಚಾರ ಗೋರಖ್‌ಪುರ	ಚೌಕತಪ್ಪೆ
4.	ನಠೇಶ್ವರಿ	ಲಕ್ಷ್ಮಣ	ಗೋರಖ್ ಟಿಲ್ಲಾ-ಪಂಜಾಬ್ (ಧರಿಯಾನಾಥ್)
5.	ಕನಡಿ (ಕಂಥಡ್)	ಶ್ರೀ ಗಣೇಶ್	ಮಾನ್‌ಫರಾ ಕಚ್
6.	ಕಪಲಾನಿ	ಕಪಿಲಮುನಿ	ಗಂಗಾಸಾಗರ್ ಬಂಗಾಳ
7.	ಬೈರಾಗ್	ರಾಜ ಭರ್ತ್ಯಹರಿ	ರಥಧೋಂಡ್ ಅಜ್ಮೀರ್ ಪುಷ್ಕರ್
8.	ಮಾನ್‌ನಾಥ್	ರಾಜಾಗೋಪಿಚಂದ್	ರಾಜಸ್ಥಾನ್
9.	ಆಯೀಪಂಥ್	ಭಗವತೀ ವಿಮಲಾದೇವಿ	ಜೋಗಿ ಗುಫಾ ದಿನಾಜ್‌ಪುರ ಬಂಗಾಳ
10.	ಪಾಗಲ್ ಪಂಥ್	ಚೌರಂಗಿನಾಥ್ (ಪೂರಣ ಭಗತ್)	ಅಭೋಹರ - ಪಂಜಾಬ್
11.	ಧ್ವಜಾಪಂಥ್	ಹನುಮಾನ್ ಜೀ	ಸರ್ವತ್ರ
12.	ಗಂಗಾನಾಥ್	ಬೀಷ್ಮ ಪಿತಾಮಹ ಗುರುದಾಸ್‌ಪುರ ಪಂಜಾಬ್	ಜಕ್ವಾರ್-

ಮಹಾರ್ವರ್ಣವ ತಂತ್ರದಲ್ಲಿ ನವನಾಥರ ಹೆಸರುಗಳು ಹೀಗಿವೆ.

1. ಗೋರಕ್ಷನಾಥ, 2. ಜಾಲಂದರ ನಾಥ, 3. ನಾಗಾರ್ಜುನ, 4. ಸಹಸ್ರಾರ್ಜುನ, 5. ದತ್ತಾತ್ರೇಯ, 6. ದೇವದತ್ತ, 7. ಜಡಭರತ, 8. ಆದಿನಾಥ, 9. ಮತ್ಸೇಂದ್ರ ನಾಥ.

ಯೋಗಿ ಸಂಪ್ರದಾಯ ವಿಷ್ಕೃತಿಯಲ್ಲಿ ನವನಾಥರ ಅವತಾರ		
1.	ಕವಿನಾರಾಯಣ	ಮತ್ಸ್ಯೇಂದ್ರನಾಥ
2.	ಕರಭಾಜನ ನಾರಾಯಣ	ಗಾಹನಿ ನಾಥ
3.	ಅಂತರಿಕ್ಷ ನಾರಾಯಣ	ಜ್ವಾಲೇಂದ್ರರ ನಾಥ (ಜಾಲಂಧರನಾಥ)
4.	ಪ್ರಬುದ್ಧ ನಾರಾಯಣ	ಕರಣಿಪಾನಾಥ (ಕನಿಪಾ)
5.	ಅವಿರ್ಹೋತ್ರ ನಾರಾಯಣ	ನಾಗನಾಥ
6.	ಪಿಪ್ಪಲಾಯನ ನಾರಾಯಣ	ಚರ್ಟಟನಾಥ (ಚರ್ಪಟಿ)
7.	ಚಮಸ ನಾರಾಯಣ	ರೇವನಾಥ (ರೇವಣ)
8.	ಹರಿನಾರಾಯಣ	ಭರ್ತೃನಾಥ (ಭರ್ತೃಹರಿ)
9.	ದ್ರವಿಲ ನಾರಾಯಣ	ಗೋಪಿ ಚಂದ್ರ

ಸುಧಾಕರ ಚಂದ್ರಿಕಾದಲ್ಲಿ ನವನಾಥರು ಹೆಸರುಗಳು

1.ಏಕನಾಥ 2.ಆಧಿನಾಥ 3.ಮತ್ಸೇಂದ್ರನಾಥ 4.ಉದಯನಾಥ 5.ದಂಡನಾಥ 6.ಸತ್ಯನಾಥ 7.ಸಂತೋಷನಾಥ 8.ಕೋರ್ಮನಾಥ 9.ಜಾಲಂಧರ ನಾಥ ಮಹಾರಾಷ್ಟ್ರೀಯ ಪರಂಪರೆಯಂತೆ ನವನಾಥರು.

1. ಆಧಿನಾಥ 2. ಮತ್ಸ್ಯೇಂದ್ರನಾಥ 3. ಗೋರಕ್ಷನಾಥ 4. ಜೌರಂಗಿನಾಥ 5. ಜಾಲಂಧರ ನಾಥ 6. ಚರ್ಪಟನಾಥ 7. ಗೌರಾಯಿ 8. ಗಂಗಾದೇವಿ 9. ಮುಕ್ತಾಯಿ ಅಥವಾ ಮಿರಾಯಿ. ಕೊನೆಯ ಮೂವರು ಯೋಗಿನಿಯರು ಸ್ಥಳದಲ್ಲಿ ಬೇರೆ ಹೆಸರುಗಳಿಂದಲೂ ಹೇಳೂವುದುಂಟು.

ದಿವ್ಯ ಚುಂಚನಗಿರಿ ಕ್ಷೇತ್ರ ಪುರಾಣದಲ್ಲಿ ನವನಾಥರು

ಈಶ್ವರನ ಕಪೋಲದಿಂದ ಸಿದ್ಧಯೋಗಿ ಅವತರಿಸಿದ. ಶಿವನು ತನ್ನ ಅವಾಸಸ್ಥಾನವನ್ನು ಅವನಿಗೆ ಬಿಟ್ಟು ಕೊಟ್ಟು ದ್ವಾದಶ ಶರೀರದೊಳಗೆ ಪೀಠಸ್ಥನಾದನು. ಶಿವನ ಕಪಾಲದಿಂದ ಉದ್ಭವಿಸಿದ ಸಿದ್ಧಯೋಗಿಯ ಪಂಥವೇ ಕಾಪಾಲಮತವಾಯಿತು. ದ್ವಾದಶನಾಥರ ಸಂಘಟನೆಗೆ ಬಾರಾನಾಥ್ ಪಂಥ್ ಎಂದು ಹೆಸರಾಯಿತು.

ದ್ವಾದಶನಾಥ ಐತಿಹ್ಯದಲ್ಲಿ ಹೀಗಿದೆ.

ವಿಷ್ಣುವು ಮೋಹಿನಿ ರೂಪ ತಾಳಿ ಭಸ್ಮಾಸುರನನ್ನು ಸಂಹಾರ ಮಾಡುತ್ತಾನೆ. ಈ ಸಂಧರ್ಭ ಮೋಹಿನಿಯ ರೂಪ ಕಂಡ ಶಿವನು ಅವಳೊಂದಿಗೆ ಮೋಹಿತನಾಗಲು ಅವನ ವೀರ್ಯವು

ಸ್ಖಲನವಾಗಿ ಸಮುದ್ರದಲ್ಲಿ ಬೀಳುತ್ತದೆ. ಅಲ್ಲಿದ್ದ ಮತ್ಸ್ಯವು ಅದನ್ನು ಪಾನಮಾಡಿದುದರಿಂದಾಗಿ ಅದರ ಗರ್ಭದಲ್ಲಿ ಯೋಗಿಗಳು ಹುಟ್ಟುತ್ತಾರೆ ಅವರೆಂದರೆ

1. ಸತ್ಯನಾಥರು 2. ಸ್ವತ್ತೋಲನಾಥರು 3. ಅನಾದಿಕನಾಥನು 4. ಆದಿನಾಥರು 5. ಅಕುಲೀನಾಥರು 6. ಮಾತುಂಗನಾಥರು 7. ಮತ್ಸ್ಯೇಂದ್ರ ನಾಥರು 8. ಯಂತ್ರಘಟನಾಥರು 9. ಗೋರಕ್ಷನಾಥರು ಎಂಬಿತ್ಯಾದಿ ಒಂಬತ್ತು ಮಂದಿ ನಾಥರು ಹುಟ್ಟಿದರು. ಇವರು ಯೋಗಿಗಳು ಶೃಂಗಕರ್ಣಾಭರಣಗಳನ್ನು ಧರಿಸಿ ಯೋಗ ನಿರತರಾಗಿ ಪಾಮರ ಜನರನ್ನು ಪರಿಶುದ್ಧ ಮಾಡಬೇಕೆಂದು ಉಪದೇಶಿಸಿದರು.

ಹಠಯೋಗ ಪ್ರದೀಪಿಕೆಯಲ್ಲಿ ನಾಥರು :

ಶ್ರೀ ಆಧಿನಾಥ ಮತ್ಸ್ಯೇಂದ್ರ – ಶಾಬರಾನಂದ – ಭೈರವಾಃ ।

ಚೌರಂಗೀ – ಮೀನ – ಗೋರಕ್ಷ – ವಿರೂಪಾಕ್ಷ – ವಿಲೇಶಯಾಃ ।

ಮಂಥಾನೋ ಭೈರವೋ ಯೋಗೀ ಸಿದ್ಧಿಃ ಬುದ್ಧಿಶ್ಚ ಕಂಥಡಿಃ ।

ಕೋರಂಟಕಃ ಸುರಾನಂದಃ ಸಿದ್ದಪಾದಶ್ಚ ಚರ್ಪಟಿಃ ।

ಕಾನೇರಿ ಪೂಜ್ಯ ಪಾದಶ್ಚ ನಿತ್ಯನಾಥೋ ನಿರಂಜನಃ ।

ಕಪಾಲಿ ಬಿಂದುನಾಥಶ್ವ ಕಾಕಚಂಡೀಶ್ವರಾಹ್ವಯಃ ।

ಅಲ್ಲಾಮ ಃ ಪ್ರಭುದೇವಶ್ಚ ಘೋಡಾಚೋಲಿ ಚ ಟಿಂಟಿಣಿಃ ।

ಭಾನುಕೀ ನಾಮದೇವಶ್ಚ ಖಂಡಃ ಕಾಪಾಲಕಸ್ತಥಾ।

ಇತ್ಯಾದಯೋ ಮಹಾಸಿದ್ಧಾಃ ಹಠಯೋಗ ಪ್ರಭಾವತಃ ।

ಖಂಡಯಿತ್ವಾ ಕಾಲದಂಡಂ ಬ್ರಹ್ಮಾಂಡೇ ವಿಚರಂತಿ ತೇ॥(ಹಠಯೋಗಿ ಪ್ರದೀಪಿಕಾ)

ಇಲ್ಲಿ ಕನ್ನಡ ನಾಡಿನ ಸಂತ ಅಲ್ಲಮಪ್ರಭು ಮತ್ತು ರೇವಣ ಸಿದ್ಧನ ಹೆಸರು ಉಲ್ಲೇಖವಾಗಿರುವುದು ಗಮನಿಸಬಹುದು.

ಗೋರಕ್ಷ–ಜಾಲಂಧರ–ಚರ್ಪಟಾಶ್ಚ–ಅಡಭಂಗ–

ಕನಪಾ–ಮಂಚ್ಚೇಂದ್ರಾದಯಾಃ


ಚೌರಂಗೋ– ರೇವಣಶ್ಚ ಭರ್ತೃಸಂಜ್ಞಾ

ಭೂಮ್ಯಾಂ ಬಭೂವ ನವನಾಥ ಸಿದ್ಧಾ: ॥ (ಹಠಯೋಗ ಪ್ರದೀಪಿಕಾ)


ಈ ರೀತಿ ಸಿದ್ಧರೂ ಚಿರಂಜೀವಿಗಳಾಗಿ ಬ್ರಹ್ಮಾಂಡದಲ್ಲಿ ಇಂದಿಗೂ ಸಂಚರಿಸುತ್ತಿದ್ದಾರೆ ಎಂದು ಮೇಲಿನ ವಿವರಣೆ ಹೇಳಿದೆ.

14ನೇ ಶತಮಾನದ ಮೈಥಿಲೀ ಗ್ರಂಥ ವರ್ಣರತ್ನಾಕರ

ಶ್ರೀ ಜ್ಞಾನೇಶ್ವರ ಚರಿತದಲ್ಲಿ ಜ್ಞಾನನಾಥನ ವರೆಗಿನ ಗುರು ಪರಂಪರೆಯನ್ನು ಪಂಡಿತ ಲಕ್ಷ್ಮಣ ರಾಮಚಂದ್ರ ಪಾಂಗಾರ್ಕರ್ ಈ ರೀತಿ ಗುರುತಿಸಿದ್ದಾರೆ.



'ಯೋಗಿ ಸಂಪ್ರದಾಯ ವಿಷ್ಕೃತಿ'ಯ ಪ್ರಕಾರ ಮತ್ಸ್ಯೇಂದ್ರನಾಥ ಮತ್ತು ಜಾಲಂಧರನಾಥರ ಶಿಷ್ಯ ಪರಂಪರೆ :



ಮೇಲಿನ ಈ ಎಲ್ಲಾ ಸೂಚ್ಯಗಳಿಂದ ಕಂಡು ಬರುವ ಸಂಗತಿಯೆನೆಂದರೆ ಮತ್ಸ್ಯೇಂದ್ರನಾಥ ಮತ್ತು ಜಾಲಂಧರನಾಥ ಆಧಿನಾಥನ ಶಿಷ್ಯರು. ಮತ್ಸ್ಯೇಂದ್ರನಾಥನ ಶಿಷ್ಯ ಗೋರಕ್ಷನಾಥ ಹಾಗೂ ಜಾಲಂಧರನಾಥನ ಶಿಷ್ಯ ಕಾನ್ಹಪಾ ಯಾ ಕೃಷ್ಣಪಾದ. ಇಲ್ಲಿ ಸಾಕ್ಷಾತ್ ಶಿವನೇ ಆಧಿನಾಥನಾದ್ದರಿಂದ ಅವನನ್ನು ಬಿಟ್ಟು ಉಳಿದ ನಾಲ್ವರು ಐತಿಹಾಸಿಕ ವ್ಯಕ್ತಿಗಳೆಂದು ತೋರುತ್ತದೆ.[೩]

ವಿಶೇಷವೆಂದರೆ, ಆದಿನಾಥ ಮತ್ಸ್ಯೇಂದ್ರನಾಥ, ಜಾಲಂದರನಾಥ ಮತ್ತು ಗೋರಕ್ಷನಾಥ ಹೆಸರುಗಳು ತಾಂತ್ರಿಕ ಸಿದ್ಧರಲೂ ಟಿಬೇಟಿನ ಪರಂಪರೆಯ ಸಹಜಯಾನೀ ಸಿದ್ಧರಲ್ಲೂ ಕಾಣಬರುತ್ತದೆ.

ನಾಥಪಂಥೀಯರಲ್ಲಿ ದೀಕ್ಷಾ ವಿಧಗಳು:-

ನಾಥ ಪಂಥೀಯ ಸಂಪ್ರದಾಯದ ದೀಕ್ಷೆಗೊಳಗಾದವರಲ್ಲಿ 'ಗ್ರಹಸ್ಥರು', 'ಅವಘಡ್' ಯೋಗಿಗಳು ಹಾಗೂ 'ದರ್ಶಿನಿ' ಯೋಗಿಗಳು ಎಂಬಿತ್ಯಾದಿ ವಿಧಗಳಿವೆ.

ಗ್ರಹಸ್ಥರಲ್ಲಿ ಗಂಡು ಮಕ್ಕಳು ಹನ್ನೆರಡನೇ ವಯಸ್ಸಿಗೆ ಬರುವಾಗ ಯಾಜ್ಞೋಪವೀತ ಧಾರಣೆ ಮಾಡಬೇಕು. ಯಜ್ಞೋಪವೀತ ಕುರಿಯ ಉಣ್ಣೆಯ ದಾರದಿಂದಲೇ ಮಾಡಿದಾಗಿದ್ದು, ಅದರ ತುದಿಗೆ ನಾದಿ ಪವಿತ್ರಿಯನ್ನು ಜೋಡಿಸಿರಬೇಕು. ಮುಂದಕ್ಕೆ ವಟುಗಳು ಗ್ರಹಸ್ಥಾಶ್ರಮಕ್ಕೆ ಕಾಲಿಟ್ಟರೂ ಇದನ್ನು ತ್ಯಜಿಸಬೇಕೆಂದಿಲ್ಲ. ಅವಘಡ್ ಯೋಗಿಗಳು ನಾದಿ ಪವಿತ್ರ ಸಹಿತ ಯಜ್ಞೋಪವೀತ ಧಾರಣೆ ಗುರುಪದೇಶ, ಕೇಶ ಮುಂಡನ, ಭಸ್ಮೀ ದೀಕ್ಷೆಗಳನ್ನು ಪಡೆಯಬೇಕು. ಕೊನೆಯ ಪಂಚಮ ದೀಕ್ಷೆಯೇ ಕರ್ಣಕುಂಡಲ ಧಾರಣೆ 'ದರ್ಶಿನಿ' ದೀಕ್ಷೆ. ಇಲ್ಲಿ ಅವಘಡ್ ದೀಕ್ಷೆ ಪಡೆದವರು ಸರ್ವಸಂಘ ಪರಿತ್ಯಾಗಿಗಳಾಗಿರಬೇಕು. ನಾಥ ಸಂಪ್ರದಾಯದ ಮಠಗಳಲ್ಲಿ ಅವರು ಗುರುಗಳ ಸೇವೆ ಮಾಡುತ್ತಾ ಉಳಿದುಕೊಳ್ಳಬೇಕು. ಮಠವಿಲ್ಲದ ಗುರುಗಳಾಗಿದ್ದಲ್ಲಿ ನಾಥಪಂಥದ ಮಠದಿಂದ ಮಠಕ್ಕೆ ಸಂಚರಿಸುತ್ತಾ ಇರಬೇಕು. ಇವರನ್ನು 'ರಮ್ತೇ' ಜೋಗಿಗಳೆಂದು ಕರೆಯುತ್ತಾರೆ. ಅವಘಡ್ ಮತ್ತು ದರ್ಶಿನಿ ದೀಕ್ಷೆಗಳನ್ನು ಪಡೆಯಲು ವಯಸ್ಸಿನ ಮಿತಿಯಿಲ್ಲ.[೪] ನಾಥ ಪಂಥದ ಯೋಗಿಗಳು ಈಗ ಹಿಂದಿನಂತೆ ಮನೆ ಮನೆಗೆ ಭಿಕ್ಷಾಟನೆಗೆ ಹೋಗುವ ಕ್ರಮವಿಲ್ಲ. ಅವರು ಮಠಗಳಲ್ಲೇ ಇದ್ದು ಸಂಪ್ರದಾಯದಂತೆ ನಿತ್ಯವಿಧಿಗಳನ್ನು ನಡೆಸುತ್ತಾರೆ. ಭಕ್ತರು ಪಾದ ಪೂಜೆಗೆ ಆಹ್ವಾನಿಸಿದರೆ ಹೋಗಿ ಆಶೀರ್ವಾದಿಸಿ ಬರುತ್ತಾರೆ.ನಾಥ ಪಂಥದ ಸಾಧು ಸನ್ಯಾಸಿಗಳು ಒಬ್ಬರನ್ನೊಬ್ಬರು ಬೇಟಿಯಾದಾಗ ಗುರುಗಳಿಗೆ, ದೇವರಿಗೆ ನಮಸ್ಕರಿಸುವಾಗ "ಆದೇಶ್, ಆದೇಶ್" ಎಂದು ಉಚ್ಚರಿಸುತ್ತಾರೆ.

ಜೋಗಿ ಜನಾಂಗಕ್ಕೊಂದು ಪೌರಾಣಿಕ ಹಿನ್ನೆಲೆಯಿದೆ. ಶಿವನು ಪಾರ್ವತಿಗೆ ಉಪದೇಶಿಸಿದ ಯೋಗ ಮಾರ್ಗದ ಸಿದ್ಧಾಂತವೇ ಜೋಗಿ ಮತ. ಹದಿನಾಲ್ಕು ಹದಿನೈದನೆಯ ಶತಮಾನದವರೆಗೂ ಇಲ್ಲಿ ಜೋಗಿ ಮತವು ವ್ಯಾಪಕ ಪ್ರಚಾರದಲ್ಲಿತ್ತು. ಇಲ್ಲಿದ್ದ ಅಸಂಖ್ಯಾತ ಶಿವಾಲಯಗಳು ಭಕ್ತ ಜನರ ಆರಾಧ್ಯ ಕೇಂದ್ರಗಳಾಗಿದ್ದವು.[೫] ಭೂತಾರಾಧಕರಾದ ತುಳುನಾಡಿನ ಮೂಲ ನಿವಾಸಿಗಳ ಪಾರ್ದ್ದಾನ ಮತ್ತು ಭೂತಗಳ ನುಡಿಗಟ್ಟುಗಳಲ್ಲಿ ನಾಥ ಪಂಥದ ಬಗ್ಗೆ ಸಾಕಷ್ಟು ಮಾಹಿತಿಗಳಿವೆ.[೬]

ಜನಪ್ರಿಯ ಕನ್ನಡಗ್ರಂಥ ಶ್ರೀ ನವನಾಥ ಭಕ್ತಿಸಾರ ಇದರಲ್ಲಿ ನವನಾಥರ ಅಲೌಕಿಕವಾದ ಹುಟ್ಟು, ಬೆಳವಣಿಗೆ, ಸಾಧನೆ, ಸಿದ್ಧಿ ಅವರು ಮೆರೆದ ಪವಾಡಗಳು, ಹಿಂದೂ ಧರ್ಮದ ದೇವಾದಿ ದೇವತೆಗಳನ್ನು ಚಿಟಿಕಿ ಭಸ್ಮ ಮತ್ತು ಶಾಬರ ಮಂತ್ರದ ಶಕ್ತಿಯಿಂದ ಸಂಕಷ್ಟಗೀಡು ಮಾಡುವ ಅದ್ಭುತ ರಮ್ಯಕಥೆಗಳು ನಮ್ಮ ಪುರಾಣಗಳಿಗಿಂತಲೂ ಹೆಚ್ಚು ಆಸಕ್ತಿದಾಯಕವಾಗಿ ಕಾಣುತ್ತದೆ.

12ನೇ ಶತಮಾನದಲ್ಲಿ ಬಾರಕೂರು ಮತ್ತು ಬಸ್ರೂರುಗಳಲ್ಲಿ ನಾಥ ಪಂಥದ ಅನುಯಾಯಿಗಳಿದ್ದರೆಂಬುದಾಗಿ ಶಾಸನಗಳಲ್ಲಿ ಆಧಾರವಿದೆ. ಕರಾವಳಿ ಜಿಲ್ಲೆಯ ಕದ್ರಿ ದೇವಳಗಳಲ್ಲಿ ಕ್ರಿ.ಶ. 1475ರ ಶಾಸನದಲ್ಲಿ ನಾಥ ಪಂಥಕ್ಕೆ ಸಂಬಂದಿಸಿದ ಪ್ರಮುಖ ಉಲ್ಲೇಖವಿದೆ.

ನಾಥ ಪಂಥದ ಯೋಗಿಗಳು ಪ್ರಯಾಗ, ವಾರಣಾಸಿ, ಅಯೋಧ್ಯೆ, ತ್ರ್ಯಂಬಕೇಶ್ವರ, ದ್ವಾರಕ, ಹರಿದ್ವಾರ, ಬದರೀ, ಕೇದಾರ ವೃಂದಾವನ, ರಾಮೇಶ್ವರ, ಪುಷ್ಕರ, ನೇಪಾಳ, ಕಾಶ್ಮೀರ ಮುಂತಾದ ತಾಣಗಳಲ್ಲಿ ಸಂಚರಿಸುತ್ತಾರೆ. ನಾಥಾಂದೋಳನ ಬರಿಯ ಉತ್ತರ ಭಾರತಕಷ್ಟೇ ಸೀಮಿತವಾಗಿರದೆ ಕರ್ನಾಟಕಕ್ಕೂ ಪಸರಿಸಿಕೊಂಡಿತ್ತು ಎಂಬುದಕ್ಕೆ ಸಾಕಷ್ಟು ಆಧಾರಗಳು ನಾಥಪಂಥದ ಕೃತಿಗಳಲ್ಲಿ ಲಭ್ಯವಾಗುತ್ತದೆ. ಸಿದ್ಧ ಯೋಗಿಗಳ ಅಧ್ಯಯನ ರೋಮಹರ್ಷಕ.

ಅಧ್ಯಯನ ವ್ಯಾಪ್ತಿ :

ಈ ಪ್ರಬಂಧದಲ್ಲಿ **"ತುಳುನಾಡಿನಲ್ಲಿ ನಾಥ ಪಂಥದ ವಿಕಾಸ ಮತ್ತು ಜೋಗಿ ಸಮುದಾಯ" ಒಂದು ಅಧ್ಯಯನ** ಎಂಬ ವಿಷಯವನ್ನು ಅಭ್ಯಾಸ ಮಾಡಿ ಪ್ರಸ್ತುತ ಪಡಿಸುವುದೇ ಮುಖ್ಯ ಉದ್ದೇಶವಾಗಿರುತ್ತದೆ. ಹರಿದು ಹಂಚಿ ಹೋಗಿರುವ ನಾಥ ಪಂಥದ ಮೂಲ ಶೋಧವನ್ನು ಹುಡುಕುತ್ತಾ ಹಲವು ಮೂಲಗಳಿಂದ ದಾಖಲೆಗಳನ್ನು ಸಂಗ್ರಹಿಸಿ ಭಾರತದ ಅತೀ ಪ್ರಾಚೀನವೆನ್ನಲಾದ ನಾಥ ಸಂಪ್ರದಾಯದ ವೈಶಿಷ್ಟತೆ ಮತ್ತು ವಿಕಾಸವನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ನಾಥ ಪಂಥಕ್ಕೆ ಸಂಬಂಧಿಸಿದಂತೆ ಕನ್ನಡ, ತುಳು, ತಮಿಳು, ಪಾರಸಿ ಮತ್ತು ಮರಾಠಿಯಲ್ಲಿ ಸಾಕಷ್ಟು ತಿಳುವಳಿಕೆಗಳು ಲಭ್ಯವಿದೆ ಅವನೆಲ್ಲ ಬಳಸಿಕೊಂಡು ಎಲ್ಲೆಡೆ ಪಸರಿಸಿರುವ ನಾಥ ಪಂಥದ ಬಗ್ಗೆ ತುಳುನಾಡು ಎನ್ನಲಾಗುವ ಪ್ರಾದೇಶಿಕ ಸೀಮೆಯನ್ನು ಕೇಂದ್ರೀಕರಿಸಿಕೊಂಡು ಸಾಹಿತ್ಯ ರಚನೆಗೆ ಮಾಡಲು ಹೊರಟರೆ ಅದರ ಚರ್ಚೆ ಭಾರತದ ಉಪಖಂಡದವರೆಗೂ ಇಳಿದುಕೊಂಡು ಹೋಗುತ್ತದೆ.

ಭಾರತದ ಅನುಭಾವಿ ಪಂಥಗಳು ಧಾರ್ಮಿಕ, ಪ್ರಾದೇಶಿಕ, ಸಾಮಾಜಿಕ ಹಾಗೂ ಭಾಷಿಕ ಗಡಿಗಳನ್ನು ದಾಟಿಕೊಂಡು ಯಾವುದೇ ಒಂದು ಸಮಾನ ಸಂಗತಿಗಾಗಿ ಬೆರೆಯುತ್ತಲೇ ಬಂದಿರುವುದು ತಿಳಿಯುತ್ತದೆ. ಹಾಗಾಗಿ ಕರ್ನಾಟಕದ ನಾಥವನ್ನು ಕಪಾಲಿಕ, ಸೂಫಿ, ದತ್ತ, ಶರಣ, ಶಾಕ್ತ, ವಾರಕರಿ, ಆರೂಢ ಮತ್ತು ವಜ್ರಯಾನಗಳ ನೆರವಿಲ್ಲದೆ ಅರ್ಥ ಮಾಡಿಕೊಳ್ಳುವುದು ತುಂಬಾ ಕಷ್ಟದ ಸಂಗತಿ. ಈ ಕಾರಣಕ್ಕೆ ನಾಥ ಸಂಪ್ರದಾಯವು ಭಾರತದ ಶಂಕರಶೀಲ ಪಂಥ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದರೆ, ಆಧುನಿಕ ಕಾಲಘಟ್ಟದಲ್ಲಿ ಸಮಾಜ, ಧರ್ಮ, ರಾಜಕಾರಣ, ಶೈಕ್ಷಣಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಾಗುತ್ತಿರುವ ಒತ್ತಡದ ಪರಿವರ್ತನೆಯಲ್ಲಿ ಈ ಪಂಥವನ್ನು ಪ್ರಮುಖವಾಗಿ ಅಧ್ಯಯನ ಮಾಡುವಾಗ ಹೊಸತೇ ಆದ ತಾತ್ವಿಕ ಚೌಕಟ್ಟಿನ ಅನಿವಾರ್ಯತೆಯು ಎದುರಾಗುತ್ತದೆ.

ಪೀಠಿಕೆಯ ನಂತರದಲ್ಲಿ ಬರುವ ಎರಡನೇ ಅಧ್ಯಯದಲ್ಲಿ ನಾಥ ಪಂಥದ ಉದಯ, ಹಿನ್ನೆಲೆ ಮತ್ತು ನೆಲೆ ಎಂಬ ವಿಷಯದ ಬಗ್ಗೆ ಸಮಗ್ರ ಅವಲೋಕನ ಮಾಡಲಾಗಿದೆ.

ಅಲ್ಲದೆ ಭಾರತದಲ್ಲಿ ವೈಧಿಕ, ಬೌದ್ಧ, ಜೈನ, ನಾಥ ಸಂಪ್ರದಾಯವು ವಿಕಾಸಗೊಂಡಂತೆ ಶೈವ, ವೈಷ್ಣವ, ದ್ವೈತ, ವಿಶಿಷ್ಟಾದ್ವೈತ ಎಂಬಂತಹ ಭಿನ್ನ ಧರ್ಮಗಳ ಮತೀಯ ಭಾವನೆಗಳು

ಜನಮಾನಸದಲ್ಲಿ ಹೇಗೆ ಮೊಳಕೆಯೊಡೆಯಿತು ಎಂಬ ಐತಿಹಾಸಿಕ ಬದಲಾವಣೆಯ ಸ್ವರೂಪದ ಮೇಲೂ ಕ್ಷಕಿರಣ ಹರಿಸಲಾಗಿದೆ.

ಪೌರಾಣಿಕ ಮಹಾ ಕಾವ್ಯಗಳು, ರಮ್ಯ ಕಥೆಗಳು, ಐತಿಹ್ಯ, ಜನಪದರು ಮತ್ತು ತುಳುನಾಡಿನ ಮೂಲ ನಿವಾಸಿಗಳ ಪಾರ್ದ್ದನ ಹಾಗೂ ಭೂತದ ನುಡಿಗಟ್ಟುಗಳಲ್ಲಿ ನಾಥ ಪಂಥದ ಕಾರ್ಣಿಕದ ಮಹಿಮೆಗಳು ಪ್ರಕಟವಾಗಿರುವುದು ತಿಳಿಯುತ್ತದೆ.

'ಕಲ್ಚರಲ್ ಹೆರಿಟೇಜ್ ಆಪ್ ಹಿಸ್ಟರಿ' ಪ್ರಕಾರ ಆದಿನಾಥನೇ ನಾಥ ಪಂಥದ ಮೂಲ ಪ್ರವರ್ತಕ. ಅವನ ಬೆವರಿನಿಂದ ಪತ್ನಿ ಕೆತಕಾ (ಮಾನಸ) ಹುಟ್ಟಿದಳು. ಆದಿನಾಥನ ಸಂಸರ್ಗವಿಲ್ಲದೆ ಗರ್ಭಿಣಿಯಾಗಿ ಬ್ರಹ್ಮ, ವಿಷ್ಣು, ಮಹೇಶ್ವರಿಗೆ ಜನ್ಮ ನೀಡಿದಳು. ಆದಿನಾಥ ತನ್ನ ಪತ್ನಿಯನ್ನೇ ಪರಮೇಶ್ವರನಿಗೆ ಮದುವೆ ಮಾಡಿದ ನಂತರ ಅವಳು ಗೌರಿಯಾದಳು ಎಂಬಿತ್ಯಾದಿ ನವನಾಥರ ಕುರಿತಾದ ಗ್ರಂಥಗಳಲ್ಲಿ ಉಲ್ಲೇಖವಿದೆ. ಜಾತಿ ಪಂಥದ ಯಾವುದೇ ನಿರ್ಬಂಧವಿಲ್ಲದೆ ವೈದಿಕ ಮಂತ್ರಗಳಿಂದ ತೀರಾ ಭಿನ್ನವಾದ ಆಡು ಭಾಷೆಯಲ್ಲಿರುವ ಸರಳ ಮಂತ್ರ ಸೂತ್ರಗಳು, ಮಾಯಾವಿದ್ಯೆಗಳು ಈ ಪಂಥವು ಭಾರತದಲ್ಲಿ ನೆಲೆಗೊಳ್ಳಲು ಕಾರಣವಾಗಿರಬಹುದೆಂದು ತಿಳಿಯುತ್ತದೆ.

ಭಾರತದಲ್ಲಿ 1924ರಲ್ಲಿ ನಡೆದ ಜನಗಣತಿಯ ಪ್ರಕಾರ ಏಳುವರೆ ಲಕ್ಷ ನಾಥಪಂಥದ ದೀಕ್ಷಾರ್ತಿ ದರ್ಶನಿ ಯೋಗಿಗಳು, ನಾಲ್ಕುನೂರ ಇಪ್ಪತ್ತೈದು ಯೋಗಿನಿಗಳದ್ದರು ಇವರೊಂದಿಗೆ ನಾಥ ದೀಕ್ಷೆ ಪಡೆದ ಗ್ರಹಸ್ಥ ಜೋಗಿಗಳು ಕೂಡಾ ಇದ್ದರೆಂದು ಉಲ್ಲೇಖವಿದೆ. ಡಾ। ಕಯ್ಯಾರ ಕಿಞ್ಞಣ್ಣ ರೈಯವರು ಕೂಡಾ 'ಸಿದ್ಧಶ್ರೀಗುರು ಸುಂದರನಾಥಜೀ' ಯವರ ಲೇಖನ ಮಾಲೆಯಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾರತ ಸೇರಿದಂತೆ ತುಳುನಾಡಿನಲ್ಲಿ ಒಂದು ಕಾಲದಲ್ಲಿ ಉತ್ತುಂಗದ ಸ್ಥಿತಿಯಲ್ಲಿದ್ದ ನಾಥಪಂಥಿಯ ಸಮುದಾಯದ ಬಗ್ಗೆ ನಿಖರವಾದ ಅಂಕಿ ಅಂಶಗಳು ಮತ್ತು ಅಧ್ಯಯನ ಕಾರ್ಯವು ತುರ್ತಾಗಿ ನಡೆಯಬೇಕಿದೆ.

ಮೂರನೇಯ ಅಧ್ಯಾಯವು "ಕರ್ನಾಟಕದಲ್ಲಿ ನಾಥ ಪಂಥ ಮತ್ತು ಜೋಗಿ ಸಮುದಾಯ" ಎಂಬ ವಿಷಯದ ಕುರಿತಾಗಿದ್ದು ತುಳುನಾಡಿಗೆ ಸಂಬಂಧಿಸಿದಂತೆ ಅಂದಿನ ದಕ್ಷಿಣ ಕನ್ನಡ ಜಿಲ್ಲೆ ಇಂದು ಉಡುಪಿ, ಕಾಸರಗೋಡು ಎಂಬ ತ್ರಿವಳಿ ಜಿಲ್ಲೆಗಳಾಗಿವೆ. 1956ರ ರಾಜ್ಯ ಪುನರ್ ವಿಂಗಡನೆಯ ಕಾಲದಲ್ಲಿ ಕಾಸರಗೋಡು ತಾಲೂಕು ಕೇರಳಕ್ಕೆ ಸೇರಿ ಆಮೇಲೆ ಜಿಲ್ಲೆಯಾಯಿತು. ಬಳಿಕ ದಕ್ಷಿಣ ಕನ್ನಡದಿಂದ ಉಡುಪಿ 1995ರಲ್ಲಿ ಪ್ರತ್ಯೇಕಿಸಲ್ಪಟ್ಟಿತು. ಆದರೆ, ತುಳುನಾಡು ಎಂಬುವುದು ಮಾತ್ರ ಮೂರು ಜಿಲ್ಲೆಗಳಲ್ಲೂ ವ್ಯಾಪಿಸಿಕೊಂಡಿದೆ. ತುಳುನಾಡಿನ ಜಾತಿ ವರ್ಗೀಕರಣ ಪಟ್ಟಿಯಲ್ಲಿ ಜೋಗಿ ಸಮುದಾಯವು ಹಿಂದುಳಿದ ಪಂಗಡದ ಪ್ರವರ್ಗ 1ರಲ್ಲಿ ಸೇರ್ಪಡೆಯಾಗಿರುವುದು ತಿಳಿಯುತ್ತದೆ.

ಸರಕಾರಿ ಜನಗಣತಿಯ ಇತ್ತೀಚಿನ ಪರಿಷ್ಕೃತ ಪಟ್ಟಿಯ ಕಾರ್ಯ ಇನ್ನೂ ಮುಕ್ತಾಯ ಹಂತದಲ್ಲಿರುವುದರಿಂದ ಅಧ್ಯಯನದ ಸಂದರ್ಭ ಜೋಗಿ ಸಮುದಾಯದ ಹಿರಿಯ ಸಂಘಟಕರಿಂದ ಸಮುದಾಯದ ಅಂಕಿ ಸಂಖ್ಯೆ ಕಲೆ ಹಾಕಲಾಗಿದೆ. ತುಳುನಾಡಿನ ಹಲವೆಡೆ ಇಂದಿಗೂ ನಾಥ ಜೋಗಿಗಳಿಗೆ ವಿಶೇಷ ದಿನಗಳಲ್ಲಿ ಮನೆಗೆ ಕರೆದು ಸತ್ಕಾರಿಸುವ ನೀಡುವ ಪರಿಪಾಠವಿದೆ. ಕದ್ರಿ ಮಂಜುನಾಥ ದೇವಸ್ಥಾನ ಸೇರಿದಂತೆ ಕೆಲವು ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಈಗಲೂ ನಾಥರ

ಉಪಸ್ಥಿತಿಯನ್ನು ನಾವು ಗಮನಿಸಬಹುದು. ಜೋಗಿ ಸಮುದಾಯದ ಮಂದಿಗಳ ಆಡು ಭಾಷೆ ವೃತ್ತಿ ಮತ್ತು ವ್ಯಾಪ್ತಿಯನ್ನು ಆಧರಿಸಿ ಈ ಕುರಿತಾಗಿಯೂ ಇಲ್ಲಿ ಬೆಳಕು ಚೆಲ್ಲಲಾಗಿದೆ.

ಕರ್ನಾಟಕದಾದ್ಯಂತ ಇರುವ ಜೋಗಿ ಮಠಗಳು ಮತ್ತು ಅದರ ಪರಂಪರೆ, ನಾಥ ಪಂಥೀಯರಿಗೂ ಇತರ ಧರ್ಮೀಯರಿಗೂ ಇರುವ ಸಂಬಂಧಗಳು ಎಂಥದ್ದು? ತುಳುನಾಡಿನ ಭೂತಾರಾಧನೆ ಮತ್ತು ಪಾರ್ದ್ದನಗಳಲ್ಲಿ ನಾಥ ಪಂಥದ ಬಗ್ಗೆ ಇರುವ ಉಲ್ಲೇಖಗಳೇನು? ನಾಸಿಕದ ತ್ರ್ಯಂಬಕೇಶ್ವರದಿಂದ ಕದ್ರಿಯ ಜೋಗಿ ಮಠಕ್ಕೆ ಆಯ್ಕೆಯಾಗಿ ಬರುವ ಪೀಠಾಧಿಪತಿಗಳು ಜೋಗಿ ಸಮುದಾಯದ ಮಂದಿಗಳ ಬದುಕಿನಲ್ಲಿ ಯಾವ ರೀತಿಯ ಪಾತ್ರ ವಹಿಸುತ್ತಾರೆ? ಎಂಬ ಬಗ್ಗೆಯೂ ಇಲ್ಲಿ ಚರ್ಚೆಯಿದೆ.

ಆಧುನಿಕ ಶಿಕ್ಷಣ ಪದ್ಧತಿ ಮತ್ತು ವಾಣಿಜ್ಯ ವ್ಯವಸ್ಥೆಗೆ ತೆರೆದುಕೊಂಡ ಜೋಗಿ ಸಮುದಾಯವು ತಮ್ಮ ಮೂಲ ಪಂಥದಲ್ಲಿ ಎಷ್ಟರ ಮಟ್ಟಿಗೆ ನಂಬಿಕೆ ಉಳಿಸಿಕೊಂಡಿದೆ? ಎಂಬ ಪ್ರಶ್ನೆಗಳಿಗೂ ಈ ಅಧ್ಯಾಯದಲ್ಲಿ ಉತ್ತರ ಸಿಗಬಹುದು.

ನಾಲ್ಕನೇಯ ಅಧ್ಯಾಯದಲ್ಲಿ ಜೋಗಿ ಸಮುದಾಯದ ಮಂದಿಗಳ ಹೆಸರಿನ ಜೊತೆಗೆ 'ನಾಥ' ಎಂಬ ಉಪನಾಮ ಬರಲು ಕಾರಣವೇನೆಂದು ತಡಕಾಡಲು ಹೊರಟ ಉಲ್ಲೇಖವಿದೆ. ಮತ್ಸ್ಯೇಂದ್ರನಾಥ ಮತ್ತು ಗೋರಖನಾಥರ ಯೋಗ ಮಾರ್ಗನುಯಾಯಿಗಳಾದ ಅನೇಕ ಗ್ರಹಸ್ಥ ಕುಟುಂಬಗಳು ನಾಥ ಸಂಪ್ರದಾಯದ ವಾಡಿಕೆಯಂತೆ ನಾಥ ಪಂಥದ ದೀಕ್ಷೆಯನ್ನು ಪಡೆದು ನಾಥಸಂಪ್ರದಾಯ ಸ್ಥರಾಗಿರುವುದು, ಮತ್ತು ತಮ್ಮ ಹೆಸರಿನ ಜೊತೆಗೆ 'ನಾಥ' ಎಂಬ ಉಪನಾಮವನ್ನು ಇಟ್ಟುಕೊಂಡಿರುವುದು ಈ ಬಗ್ಗೆಯೂ ಅಧ್ಯಯನ ಮಾಡಿ ಬೆಳಕು ಚೆಲ್ಲಲಾಗಿದೆ.

ದಕ್ಷಿಣಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ಜೋಗಿ ಜನಾಂಗದ ಮಂದಿಗಳಿಗೆ 'ಪುರುಷ' ಎಂಬ ಉಪನಾಮವಿದೆ. ಜೋಗಿ ಎಂಬ ಪದನಾಥ ಪಂಥದಿಂದಲೇ ಹೇಗೆ ಬಂತೆಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

ನಾಥ ಪಂಥವು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ? ಯಾವ ರೂಪದಲ್ಲಿ ನೆಲೆಸಿತ್ತು? ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವ ಜೋಗಿ ಸಮುದಾಯದ ಮಂದಿಗಳಿಗೆ ಹಿಂದಿನಿಂದ ಬಂದ ಸಂಪ್ರದಾಯಿಕ ಕುಲಕಸಬೆಂಬುವುದು ಏನಾದರೂ ಇತ್ತೇ?

ಜೋಗಿ ಸಮುದಾಯದಲ್ಲಿ ಅಂತರ್ಜಾತಿಯ ವಿವಾಹ ಮಾಡಿಕೊಂಡಿರುವವರ ಪಾಡೇನು? ಆಧುನಿಕ ಕಾಲದಲ್ಲಿ ಸಾಮಾಜಿಕ ಮುಜುಗರಗಳಿಂದ ಯುವ ಪೀಳಿಗೆ ಹೊರಬರಲು ಹವಣಿಸುತ್ತಿದೆಯೇ? ಹಿರಿಯ ತಲೆಮಾರು ನಾಥಾ ಪಂಥದ ಪರಂಪರೆಯನ್ನು ಮರಳಿ ಪಡೆಯಲು ಯತ್ನಿಸುತ್ತಿರುವುದು ಯಾಕೆ?

ತುಳುನಾಡಿನಲ್ಲಿ ಹೆಚ್ಚಾಗಿ ನಾಥ ಪಂಥದ ಅನುಯಾಯಿಗಳು ಶಕ್ತಿ ದೇವತೆ, ಕಾಳಬೈರವ ಮತ್ತು ಗೋರಕ್ಷನಾಥರನ್ನೇ ಪೂಜಿಸುವ ಹಿನ್ನಲೆಯೇನು? ಎಂಬಿತ್ಯಾದಿ ವಿಚಾರಗಳಿವೆ.

ಐದನೇ ಅಧ್ಯಾಯವು 'ತುಳುನಾಡ ಜೋಗಿಗಳ ಪ್ರಸ್ತುತ ಸ್ಥಿತಿಗತಿ'ಯ ಮೇಲೆ ತೆರೆದು ಕೊಳ್ಳುತ್ತದೆ. ಕರಾವಳಿಯ ನಾಥಪಂಥದ ಮಠಗಳಿಗೆ ಜೋಗಿಸಮುದಾಯವು ಯಾಕಿಷ್ಟು ಗುರು ಭಕ್ತಿಯಿಂದ ನಡೆದು ಕೊಳ್ಳುತ್ತದೆ?

ಉಡುಪಿ ಸೀಮೆಯ ಬಳೆಗಾರ ಜೋಗಿಗಳು ಇಂದಿಗೂ ತಮ್ಮ ಪಾರಂಪರಿಕ ಕಸುಬಾಗಿರುವ ಬಳೆ ವ್ಯಾಪಾರವನ್ನು ಮಾಡಿಕೊಂಡಿರುವುದು ಹಾಗೂ ಶಕ್ತಿ ದೇವತೆಗಳ ಗುಡಿಗಳಲ್ಲಿ ಇಂದೆಗೂ ಅರ್ಚಕ ವೃತ್ತಿಯಲ್ಲಿ ತೊಡಗಿಕೊಂಡಿರುವ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.ರಾಷ್ಟ್ರಕವಿ ರನ್ನನನ್ನು ಬಳೆಗಾರ ಜೋಗಿ ಸಮುದಾಯದವರು ತಮ್ಮವನೆಂದು ಹೆಮ್ಮೆಯಿಂದ ಹೇಳಿಕೊಂಡಿರುವುದರ ಹಿಂದಿರುವ ಕಾರಣ ವೇನೆಂಬುವುದನ್ನು ಕೂಡಾ ಚರ್ಚಿಸಿ ನೋಡಲಾಗಿದೆ.

ಶಿವನ ಶಾಪದಿಂದ ಪಾರ್ವತಿಯು ಬಳೆಗಾರನಿಗೆ ನೀಡಿರುವ ಮುತ್ತು ರತ್ನಗಳೆಲ್ಲ ಒಡೆದ ಕಾಜಿಗಳ ಹೋಳಾಗಿ ಪರಿವರ್ತನೆಯಾಗುವ ದೃಷ್ಟಾಂತದ ಐತಿಹ್ಯವನ್ನು ಕೂಡಾ ಈ ಅಧ್ಯಾಯನದಲ್ಲಿ ಹೇಳಲಾಗಿದೆ.

ಆರನೇಯ ಅಧ್ಯಾಯವು ತ್ರ್ಯಂಬಕೇಶ್ವರದಿಂದ ಕದಲೀಗೆ ಝುಂಡಿಯಾತ್ರೆ ಎಂಬ ವಿಷಯವನ್ನಾಧರಿಸಿದ್ದು ಹನ್ನೆರಡು ವರುಷಗಳಿಗೊಮ್ಮೆ ನಡೆಯುವ ಪರ್ಯಾಯ ರಾಜ ಪಟ್ಟಾಭಿಷೇಕದ ಆಯ್ಕೆ ಮತ್ತು ನಾಸಿಕ್‌ನಿಂದ ಇಲ್ಲಿಯ ತನಕವೂ ಪಾದಯಾತ್ರೆಯ ಮೂಲಕ ಸಾಗುತ್ತಾ ಬರುವ ಸನ್ಯಾಸಿಗಳ ವೈಶಿಷ್ಟ್ಯ ಪೂರ್ಣ ಚಿತ್ರಣವನ್ನು ಇಲ್ಲಿ ನೀಡಲಾಗಿದೆ. ದೇಹ ದಂಡನೆಯ ಮೂಲಕ ಕಾಣದ ದೇವರ ಹುಡುಕಲು ಹೊರಟ, ಈ ಸಮಾಜದಲ್ಲಿ ನಮ್ಮಂತೆ ಹುಟ್ಟಿ ಪ್ರತ್ಯೇಕವಾಗಿ ಬದುಕುತ್ತಿರುವ ಸಾಧು ಸಂತರ ಜೀವನಶೈಲಿ, ಪೀಠಾಧಿಪತಿಯ ಜಲಸಮಾಧಿ ಪದ್ಧತಿ, ಯೋಗಿ ಸಾಧುಗಳ ಹಠಯೋಗ ಸಾಧನೆ, ಯೋಗಿಗಳು ಧರಿಸುವ ಒಂದೊಂದು ಸಾದನಗಳ ವಿಶೇಷತೆ ಏನು? ಜೋಗಿ ದೀಕ್ಷಾ ಪದ್ಧತಿಗಳ ಅನುಷ್ಠಾನ ಕ್ರಮ ಹೇಗೆ? ಎಂಬ ವಿಷಯಾಧಾರಿತ ಮಾಹಿತಿ ಕಲೆ ಹಾಕಲಾಗಿದೆ.

ಕದ್ರಿ ಮಂಜುನಾಥನ ದೇವಾಲಯದಲ್ಲಿರುವ ಶಿಲ್ಪ ಮೂರ್ತಿಗಳು ಮತ್ತು ಶಾಸನಗಳ ಉಲ್ಲೇಖವು ಜೋಗಿ ಮಠಕ್ಕೂ ಮಂಜುನಾಥನ ಗುಡಿಗೂ ಸಂಬಂದ ಬೆಸೆಯುತ್ತದೆಯೇ?

ಕದ್ರಿಯ ಮಂಜುನಾಥ ಗುಡಿಯ ಅಧಿಕಾರವು ನಾಥರ ಕೈಯಿಂದ ಧಾರ್ಮಿಕ ದತ್ತಿ ಇಲಾಖೆಯ ಪಾಲಾಗಲು ಪ್ರಬಲ ಕಾರಣಗಳಿವೆಯೇ?

ಕದಲೀ ಕ್ಷೇತ್ರದ ಪಕ್ಕದಲ್ಲಿರುವ ಸ್ಥಳಕ್ಕೆ 'ಕೈಬಟ್ಟಲು' ಎಂದು ಹೆಸರು ಹೇಗೆ ಬಂತು? ದಾಖಲೆಯ ಪ್ರಕಾರ ಕದ್ರಿಯಲ್ಲಿ ಆಗಿ ಹೋಗಿರುವ ಅರಸರು ಯಾರ್ಯಾರು? ನಾಥ ಸಂಪ್ರದಾಯದ ತಳಕನಿಂದ ಕದ್ರಿಯ ಮಂಜುನಾಥ ದೇವಸ್ಥಾನವನ್ನು ಬೇರ್ಪಡಿಸಲಾಗಿರುವ ನೈಜತೆ ಏನು? ಈ ಎಲ್ಲಾ ವಿಷಯಗಳ ಕುರಿತಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಏಳನೇಯ ಅಧ್ಯಾಯವು ಈ ಮೇಲಿನ ಅಧ್ಯಯದಿಂದ ಹೊರ ಹೊಮ್ಮುವ ಚರ್ಚೆಯ ಉಪಸಂಹಾರವನ್ನು ಒಳಗೊಂಡಿದೆ.

ಸಂದರ್ಭ ಸೂಚಿ

೧ ಮ.ಸು.ಕೃಷ್ಣಮೂರ್ತಿ, ಸಿದ್ಧಸಾಹಿತ್ಯ, ವಿಶ್ವವಿದ್ಯಾನಿಲಯ ಮುದ್ರಣಾಲಯ ಮೈಸೂರು, 1982, ಪುಟ 149

೨ ಜೋಗಿ ಆನಂದನಾಥ್, ನಾಥ ಪಂಥಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003, ಪುಟ 5

೩. ಮ. ಸೂ. ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ, ಮಾನಸ ಗಂಗೋತ್ರಿ ಮೈಸೂರು, 1982, ಪುಟ (151–154)

೪. ಜೋಗಿ ಅಮರನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003, ಪುಟ – ೩

೫. ರಮನಾಥ್ ಕೋಟೆಕಾರ್, ಸ್ಮರಣ ಸಂಚಿಕೆ, ಸಿದ್ಧ ಸುಂದರನಾಥಜೀ ಪಟ್ಟಾಭಿಷೇಕ ಶತಮಾನೋತ್ಸವ ಸಮಿತಿ, 2007 ಪುಟ – 13

ಅಧ್ಯಾಯ –೨

ನಾಥ ಪಂಥದ ಉದಯ, ಹಿನ್ನಲೆ ಮತ್ತು ನೆಲೆ

ನಾಥ ಪಂಥದ ಉದಯ :

ನಾಥಪಂಥದ ವಿದ್ವಾಂಸರ ಪ್ರಕಾರ ಈ ಪಂಥವು ಜೈನ, ಬೌದ್ಧ ಮತಗಳಂತೆ ಪ್ರತ್ಯೇಕ ಮತವಾಗಿದೆ. ತಾಂತ್ರಿಕ ಬೌದ್ದ ರೂಪಕ್ಕೆ ಶೈವರೂಪ ಕೊಟ್ಟು ಬ್ರಹ್ಮಚರ್ಯೆ, ಯೋಗ, ಸಾಧನೆ ಮತ್ತು ಸಹಾನುಭೂತಿಗೆ ಎಲ್ಲಿಲ್ಲದ ಮಹತ್ವ ನೀಡಿ ಹಿಂದೂ ಧರ್ಮಕ್ಕೆ ಒಂದು ಹೊಸ ಕಾಯಕಲ್ಪ ನೀಡಿದ ಮಹಾ ಪಂಥವೇ ನಾಥ ಪಂಥ.[೧] 'ನಾಥಪಂಥವು ೧೦ನೇ ಶತಮಾನದ ಮಧ್ಯಭಾಗದಲ್ಲಿ ತುಳುನಾಡನ್ನು ಪ್ರವೇಶಿಸಿ ಕದ್ರಿಯಲ್ಲಿ ನೆಲೆಯೂರಿತು ಎಂದು ಡಾ। ಗುರುರಾಜ ಭಟ್ಟರು 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್' ಎಂಬ ಕೃತಿಯಲ್ಲಿ ಅಭಿಪ್ರಾಯ ಪಡುತ್ತಾರೆ. ಆದಿನಾಥನು ಗುರುಗಳಲ್ಲೇ ಪ್ರಥಮ ಶ್ರೇಷ್ಠ. ಆತನ ಬೆವರಿನಿಂದ ಪತ್ನಿ ಕೆತಕಾ (ಮಾನಸ) ಹುಟ್ಟಿದಳು. ಆದಿನಾಥನ ದೇಹ ಸಂಪರ್ಕವಿಲ್ಲದೆ ಗರ್ಭಿಣಿಯಾಗಿ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಜನ್ಮ ನೀಡಿದಳು. ಅವಳ ಬಾಯಿಯಿಂದ ಬ್ರಹ್ಮ, ಹಣೆಯಿಂದ ವಿಷ್ಣು ಮತ್ತು ಸಾಮಾನ್ಯರಂತೆ ಸಹಜ ರೀತಿಯಿಂದ ಮಹೇಶ್ವರ ಹುಟ್ಟಿದನು.

ಆದಿನಾಥ ತನ್ನ ಮಕ್ಕಳನ್ನು ಪರೀಕ್ಷಿಸಲು ನಾರುವ ಹೆಣವಾಗಿ ನದಿ ನೀರಿನಲ್ಲಿ ತೇಲಿಕೊಂಡು ಬಂದ. ಶವದ ವಾಸನೆ ಸಹಿಸಲಾಗದೆ ಬ್ರಹ್ಮ ಓಡಿದ ವಿಷ್ಣು ಅದನ್ನು ಅಲ್ಲಿಂದ ದೂರ ತಳ್ಳಿದ. ಆದರೆ, ಪರಮೇಶ್ವರ ತಂದೆಯ ಶವವನ್ನು ಗುರುತಿಸಿ ಪರಮಜ್ಞಾನಿ ಅನ್ನಿಸಿಕೊಂಡ. ನಂತರದಲ್ಲಿ ಮೂವರು ಮಕ್ಕಳು ಸೇರಿಕೊಂಡು ಜನ್ಮದಾತನ ಶವಸಂಸ್ಕಾರ ಮಾಡಿದರು. ಆಗ ಬೂದಿಯಿಂದ ಎದ್ದು ಬಂದವರೇ ನಾಥ ಪಂಥದ 'ಪಂಚ ಸಂತರು' ಹೊಕ್ಕಳಿನಿಂದ ಮೀನನಾಥ, ಶಿರದಿಂದ ಗೋರಕ್ಷನಾಥ, ಮೂಳೆಗಳಿಂದ ಜಾಲಂಧರನಾಥ, ಕಿವಿಯಿಂದ ಕನೀಪಾನಾಥ, ಕಾಲುಗಳಿಂದ ಚೌರಂಗಿನಾಥ ಜನ್ಮ ತಳೆದರು. ಆದಿನಾಥ ತನ್ನ ಪತ್ನಿ ಕೆತಕಾಳನ್ನೇ ಮಹೇಶ್ವರನಿಗೆ ಮದುವೆ ಮಾಡಿದ. ಅಲ್ಲಿಂದ ಮುಂದಕ್ಕೆ ಆಕೆ ಗೌರಿ ಎಂದು ಕರೆಸಿಕೊಂಡಳು. ಐವರು ಸಿದ್ಧ ಸಂತರು ಶಿವನ ಅನುಯಾಯಿಗಳಾದರು.[೨] ಇದು ನಾಥ ಪಂಥದ ಕುರಿತಾದ ಹುಟ್ಟಿನ ಐತಿಹ್ಯ.

ಬೌದ್ಧ ಸಿದ್ದರು ವಾಮಾಚಾರ, ಗುಹ್ಯ ಸಾಧನೆಗಳಲ್ಲಿ ಮುಳುಗಿದಾಗ ಅವರನ್ನು ಅದರಿಂದ ಮೇಲೆತ್ತಿ ಶುದ್ಧೀಗೊಳಿಸಲು ಉದಿಸಿದ ಹೊಸ ಪಂಥವೇ ನಾಥಪಂಥ. ಶೂದ್ರರಿಗೆ ವೇದಾಂತ ಮತಗಳಲ್ಲಾಗಲಿ, ಹಿಂದೂ ಧರ್ಮಗಳಲ್ಲಾಗಲಿ ಎಡೆ ಇರಲಿಲ್ಲ. ಈ ಸಂದರ್ಭದಲ್ಲಿ ಗಂಗಾನದಿ ತೀರದಲ್ಲಿರುವ ಗೌಡದೇಶ (ಬಿಹಾರ) ದಲ್ಲಿ ಮೂರು ಹೊಸ ಪಂಥಗಳು ಹುಟ್ಟಿಕೊಂಡವು. ಅವುಗಳೆಂದರೆ ಬೌದ್ಧಮತ, ಜೈನಮತ ಮತ್ತು ನಾಥ ಸಂಪ್ರದಾಯ.[೩]

ಈ ಮತವು ಮತ್ಸ್ಯೇಂದ್ರನಾಥನ ಕಾಲದಲ್ಲಿ ಉನ್ನತ ಸ್ಥಿತಿಗೆ ಬಂದಿತ್ತೆನ್ನಲಾಗಿದೆ. ಅವನು ತನ್ನ ಮತ ಪ್ರಸರಣೆ ಮಾಡಿಕೊಂಡು ಊರೂರು ಸಂಚರಿಸುತ್ತಿರುವಾಗ ಅಯೋಧ್ಯಾ ಪಟ್ಟಣದ ಹತ್ತಿರದ 'ಅಪೂರ್ವ ಪುಣ್ಯಪುರಿ' ಎಂಬ ಊರಿನಲ್ಲಿ ಗೋರಕ್ಷನಾಥ ಎಂಬ ಶಿಷ್ಯನು ಅವನಿಗೆ

ಸಿಕ್ಕಿದನು. ಇದಕ್ಕೆ ಸಂಬಂಧಿಸಿದಂತೆ ಒಂದು ಐತಿಹ್ಯವಿದೆ. ವಿಜಯಧ್ವಜನೆಂಬ ಅರಸನು ಆಳುತ್ತಿದ್ದ ಈ ಊರಿನಲ್ಲಿ ಸದ್ಬೋದನ ಮತ್ತು ಸದ್ವೃತ್ತಿ, ಎಂಬ ಶ್ರೀಮಂತ ಬ್ರಾಹ್ಮಣ ದಂಪತಿಗಳಿದ್ದರು. ದಾನ, ಧರ್ಮ, ಪರೋಪಕಾರದಲ್ಲಿ ಸದಾ ಮುಂದಿದ್ದ ಇವರಿಗೆ ಮಕ್ಕಳಿರಲಿಲ್ಲ.

ಒಂದು ದಿನ ಸದ್ಬೋದನ ಇಲ್ಲದ ಸಮಯ ಮತ್ಸ್ಯೇಂದ್ರನಾಥನು ಅವನ ಮನೆ ಬಾಗಿಲಿಗೆ ಬಂದು 'ಅಲಕ್' ಎಂದು ಹೇಳಲು, ಬ್ರಾಹ್ಮಣನ ಮಡದಿಯು ಯಾರೋ ಯೋಗೀಶ್ವರರು ಭಿಕ್ಷೆಗೆ ಬಂದಿದ್ದಾರೆಂದು ತಿಳಿದು ಭಿಕ್ಷೆಯನ್ನು ಕೊಡಲು ಮುಂದಾದಾಗ ಬಾಡಿದ ಅವಳ ಮುಖವನ್ನು ನೋಡಿ ನಿನ್ನ ಚಿಂತೆಗೆ ಕಾರಣವೇನೆಂದು ಕೇಳಿದನು. ಆಗ ಆಕೆಯು ತನಗೆ ಸಂತಾನ ಭಾಗ್ಯವು ಇಲ್ಲದಿರುವ ಕೊರಗನ್ನು ಮತ್ಸ್ಯೇಂದ್ರನಾಥರಲ್ಲಿ ತೋಡಿಕೊಳ್ಳಲು, ನಾಥರು ಅವಳಿಗೆ ತನ್ನ ಜೋಳಿಗೆಯಿಂದ ಸ್ವಲ್ಪ ವಿಭೂತಿಯನ್ನು ಕೊಟ್ಟು ಈಶ್ವರನ ಮೇಲೆ ಭಕ್ತಿಯಿಟ್ಟು ಅದನ್ನು ಸೇವಿಸಿದರೆ ನನಗೆ ಗಂಡು ಸಂತಾನವಾಗುವುದು ಎಂದು ಹರಸಿ ಹೊರಟರು.

ಸದ್ವೃತ್ತಿಯು ಅದನ್ನು ದೇವರ ಕೋಣೆಯೊಳಗೆ ಇಟ್ಟು ನಂತರ ನೆರೆಮನೆಯ ಹೆಂಗಸಿನತ್ತಿರ ಯೋಗಿಗಳು ಕೊಟ್ಟ ಈ ವಿಭೂತಿಯ ಸಂಗತಿಯನ್ನು ಹೇಳಿದಾಗ, 'ಯೋಗಿಗಳನ್ನು ನಂಬಬಾರದು' ಅದನ್ನು ಸೇವಿಸದೆ ಸೆಗಣಿಯ ರಾಶಿಗೆ ಬಿಸಾಡುವಂತೆ ಹೇಳಿದಳು. ಬ್ರಾಹ್ಮಣ ಹೆಂಗಸು ಆಕೆಯಂದಂತೆ ಯೋಗಿಗಳು ಕೊಟ್ಟ ಭಸ್ಮವನ್ನು ಸೆಗಣಿ ಗುಂಡಿಗೆ ಎಸೆದಳು. ಇದಾದ ಹನ್ನೆರಡು ವರುಷದ ಬಳಿಕ ಮತ್ಸ್ಯೇಂದ್ರನಾಥನು ಅದೇ ಊರಿಗೆ ಬಂದು ಆ ಬ್ರಾಹ್ಮಣನ ಮನೆಗೆ ಹೋದಾಗ ಮತ್ಸೆಂದ್ರನಾಥನ ಗುರುತನ್ನು ಹಿಡಿದ ಸದ್ವೃತ್ತಿಯು ಹೆದರಿ ಹೋದಳು. 'ಮತ್ಸ್ಯೇಂದ್ರನಾಥನು ನಿಮ್ಮ ಮಗನೆಲ್ಲಿದ್ದಾನೆಂದು' ಕೇಳಲು, ಬ್ರಾಹ್ಮಣನ ಹೆಂಡತಿಯು ತಾನು ವಿಭೂತಿಯನ್ನು ಸೆಗಣಿಯ ರಾಶಿಗೆ ಬಿಸಾಡಿದ್ದೇನೆಂದು ಹೇಳಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡಳು. ಆಗ ಅವನ ಸಗಣಿಯ ಗುಂಡಿಯನ್ನು ಅಗಿಸಲು, ಅದರಲ್ಲಿ ಹನ್ನೆರಡು ವರುಷದ ಸುಂದರ ಮೈಕಾಂತಿಯ ಬಾಲಕ ಯೋಗಸಾಧನೆಯಲ್ಲಿ ಕುಳಿತಿರುವುದು ಕಾಣಬಂತು. ಅವನನ್ನು ಮೇಲೆ ತೆಗೆದು ಗೋರಕ್ಷನಾಥ (ಗೋ+ರಕ್ಷ+ನಾಥ ದನದ ಸಗಣಿಯಲ್ಲಿ ರಕ್ಷಿಸಲ್ಪಟ್ಟವ) ಎಂಬ ಹೆಸರನ್ನಿಟ್ಟು ಹರಸಿದನು. ನಂತರ ಈತ ಸನ್ಯಾಸಿಯಾಗಿ ಮತ್ಸ್ಯೇಂದ್ರನಾಥನನ್ನು ಅನುಸರಿಸಿದನು.[೪] ಈ ಐತಿಹ್ಯದಿಂದ ಗೋರಕ್ಷನು ಸದ್ಬೋದ ಎಂಬ ಬ್ರಾಹ್ಮಣನ ಮಗನೆಂದು ನಂತರದಲ್ಲಿ ಇವನು ನಾಥ ಸಂಪ್ರದಾಯಸ್ಥನಾದನೆಂದು ಹೇಳಲಾಗಿದೆ.

ನಾಥಪಂಥದ ಹಿನ್ನಲೆ :

ಮಹರ್ಷಿ ಜಮದಗ್ನಿ ರೇಣುಕಾ ದಂಪತಿಗಳಿಗೆ ೪ನೇ ಮಗನಾಗಿ ಜನಿಸಿದ ಪರಶುರಾಮನು ವಿಷ್ಣುವಿನ ಆರನೇ ಅವತಾರ ಎಂಬುವುದು ಐತಿಹ್ಯ. ಈ ಪ್ರಕಾರ ಜಮದಗ್ನಿಯ ಕುಟೀರಕ್ಕೆ ಬಂದ ಕಾರ್ತವೀರ್ಯನೆಂಬ ರಾಜನು, ಸಕಲವನ್ನು ನೀಡಬಲ್ಲ ಕಾಮದೇನುವಿನ ಮಹತ್ವವನ್ನು ತಿಳಿದು ಅದನ್ನು ಅಪಹರಿಸಿದನು. ಕ್ರೋದಿತನಾದ ಜಮದಗ್ನಿಯು ತನ್ನ ಮಗ ಪರಶುರಾಮನನ್ನು ಕರೆದು ಕಾರ್ತವಿರ್ಯನನ್ನು ಸಂಹರಿಸುವಂತೆ ಆಜ್ಞಾಪಿಸಿದನು. ಅದರಂತೆ ಪರಶುರಾಮನು ಕಾರ್ತವೀರ್ಯನನ್ನು ಸಂಹರಿಸಿ ೨೧ ಬಾರಿ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯ ವಂಶವನ್ನೇ ನಿರ್ವಂಶ ಮಾಡಿದನು. ಮುಂದಕ್ಕೆ ತಪವನ್ನಾಚರಿಸಲು ಕರ್ಮವೆಸಗದ ಭೂಮಿಯನ್ನು ಹರಸುತ್ತಾ

ಸಹ್ಯಾದ್ರಿ ಪರ್ವತದ ತಪ್ಪಲಲ್ಲಿ ನಿಂತು ಪಶ್ಚಿಮ ದಿಕ್ಕಿಗೆ ನೋಡಲು ಸಮುದ್ರವು ಆವರಿಸಿದ್ದು ಕಂಡಿತ್ತು. ತಾನು ಕರ್ಮವೆಸಗದ ಭೂಮಿಯು ಸಾಗರದ ಗರ್ಭದಲ್ಲಿ ಮಾತ್ರ ಇರಲು ಸಾಧ್ಯವೆಂದು ತಿಳಿದು ಶಿವನನ್ನು ಪ್ರಾರ್ಥಿಸಿ ತನ್ನ ಕೈಯಲ್ಲಿದ್ದ ಪರಶುವನ್ನು ಬಲವಾಗಿ ಎಸೆದನು. ಸಮುದ್ರವು ಕೂಡಲೇ ಹಿಂದಕ್ಕೆ ಸರಿದು ಸಮುದ್ರದ ತಳವು ಕಾಣಿಸಿತ್ತು.[೫] ಹೀಗೆ ಪರಶುರಾಮನಿಗೆ ಒಲಿದು ಬಂದ ಭೂಮಿಯೇ ಪರಶುರಾಮ ಸೃಷ್ಟಿ ಎನ್ನುವ ಪ್ರತೀತಿ ಇದೆ.

ನಾಥಪಂಥೀಯರು ಅಭಿಪ್ರಾಯ ಪಡುವಂತೆ ಪರಶುರಾಮ ಸೃಷ್ಟಿ :

ಪಿತೃವಾಕ್ಯ ಪರಿಪಾಲನೆ ಮಾಡಿ, ಪಾಪ ಪರಿಹಾರಾರ್ಥವಾಗಿ 'ತಪೋ ಭೂಮಿ' ಹರಸಿ ನಡೆದ ಪರಶುರಾಮನು ನಾಸಿಕದ ತ್ರ್ಯಂಬಕೇಶ್ವರಕ್ಕೆ ತಲುಪುತ್ತಾನೆ. ಅಲ್ಲಿ ಶಿವನನ್ನು ಕುರಿತು ತಪವನ್ನಾಚರಿಸಲು ಶಿವಪಾರ್ವತಿಯರು ಪ್ರತ್ಯಕ್ಷರಾಗಿ ಆತನ ಪ್ರಾರ್ಥನೆಯಂತೆ 'ಪಾತ್ರ ದೇವತೆ' (ಅಕ್ಷಯ ಪಾತ್ರೆ)ಯನ್ನು ಅವನ ಕೈಗಿತ್ತು ನಿನ್ನ ಅವತಾರವು ಕೊನೆಯಾಗುವವರೆಗೂ ಇದಕ್ಕೆ ನಿತ್ಯ ಪೂಜೆಯನ್ನು ಮಾಡುತ್ತಿರು ಎಂದು ಹೇಳಿ ಆಶೀರ್ವದಿಸುತ್ತಾರೆ. ಈ ಪ್ರಕಾರವಾಗಿ ಅಕ್ಷಯ ಪಾತ್ರೆಯೊಂದಿಗೆ ದಕ್ಷಿಣಾಭಿಮುಖವಾಗಿ ಕ್ರಮಿಸುತ್ತಾ ಸಹ್ಯಾದ್ರಿಯ ಪರ್ವತಕ್ಕೆ ಬಂದ ಪರಶುರಾಮನು ತನ್ನ ತಪಸ್ಸಿಗೆ ಸರಿಯಾದ ಭೂಮಿ ಸಿಗದೆ ಗಂಗೆಯನ್ನು ಕುರಿತು ದನ್ಯತೆಯಿಂದ ಪ್ರಾರ್ಥಿಸಲು, ಗಂಗೆಯು ಒಲಿದು ಸಮುದ್ರವು ಹಿಂದೆ ಸರಿಯುತ್ತದೆ. ಪರಶುರಾಮ ತನ್ನ ಕೈಯಲ್ಲಿದ್ದ ಪಾತ್ರ ದೇವತೆಯನ್ನು ಆ ನೆಲದಲ್ಲಿ ಪ್ರತಿಷ್ಠಾಪಿಸಿ ತನ್ನ ಜನಕನ ನೆನಪಿಗಾಗಿ ಅಗ್ನಿ ಕುಂಡವೊಂದನ್ನು ನಿರ್ಮಿಸಿ ಅಲ್ಲಿಯೇ ತಪವನ್ನಾಚರಿಸುತ್ತಾನೆ.[೬] ಮುಂದೆ ಈ ಕ್ಷೇತ್ರವು ಕದಲೀವನವೆಂದು ಪ್ರಸಿದ್ಧಿ ಪಡೆಯಿತು. ಮುಕ್ತಿವನ ವೆಂಬ ಕದಲೀವನದಲ್ಲಿ ಶ್ರೀ ಮತ್ಸ್ಯೇಂದ್ರನಾಥನಿಗೆ ಶಿವನು ಮಂಜುನಾಥನಾಗಿ ಒಲಿದು ಶಿಷ್ಯ ಗೋರಕ್ಷನಾಥನಾಗಿ ಭೂವಿಯೊಳಗವತರಿಸಿ, ಯೋಗ ಮಾರ್ಗದಿಂದ ಮುಕ್ತಿಯನ್ನು ಹೇಗೆ ಪಡೆಯಬಹುದೆಂದು ಭೋದಿಸಿದ ಉಲ್ಲೇಖವಿದೆ.

ಕುಂಡಲಿನೀ ಯೋಗ ಸಾಧನೆಯಿಂದ ಮೋಕ್ಷವನ್ನು ಹೇಗೆ ಪಡೆಯಬಹುದೆಂಬ ವಿಷಯವನ್ನು ಶಿವನಿಂದ ಅರಿತುಕೊಳ್ಳುವ ಆದಿಮಾಯೆಯ ಕೌತುಕದ ಫಲವೇ ನಾಥ ಪಂಥದ ಮೊದಲ ಪುರುಷ ಶ್ರೀ ಮತ್ಸೆಂದ್ರನಾಥನ ಜನನಕ್ಕೆ ಕಾರಣವಾಯಿತು ಎಂದು ಹಲವು ಗ್ರಂಥಗಳಲ್ಲಿ ಉಲ್ಲೇಖವಿದೆ. ಮುಂದಕ್ಕೆ ಮತ್ಸೆಂದ್ರನಾಥರಿಂದ ಗೋರಕ್ಷನಾಥ ಚೌರಂಗಿನಾಥಾದಿ ನವನಾಥರು, ಚೌರಾಸಿ (ಎಂಬತ್ತನಾಲ್ಕು) ಸಿದ್ದ ಯೋಗಿಗಳಿಗೆ ಭೋದಿಸಲ್ಪಟ್ಟು ಜನ ಸಾಮಾನ್ಯರ ತಿಳುವಳಿಕೆಗೆ ತಲುಪುವಂತಾಯಿತು. ಈ ಯೋಗ ಮಾರ್ಗವು ನಾಥಯೋಗ ಪರಂಪರೆ ಎಂಬುದಾಗಿ ಗೋರಕ್ಷ ಸಿದ್ದ ಸಿದ್ಧಾಂತ ಪದ್ದತಿ, ಯೋಗ ಬೀಜ, ಅಮರೌಘ ಶಾಸನಂ, ಹಠಯೋಗ ಪ್ರದೀಪಿಕೆ ಮುಂತಾದ ಧರ್ಮಗ್ರಂಥಗಳಲ್ಲೂ ನಿರೂಪಿಸಲ್ಪಟ್ಟಿರುವುದು ತಿಳಿಯುತ್ತದೆ. ನಾಥ ಪಂಥದವರು ಯೋಗಿಗಳಾಗಲಿ, ಅಥವಾ ಗ್ರಹಸ್ಥರೇ ಆಗಲಿ ಯೋಗಾಭ್ಯಾಸದ ಮೂಲಕ ಶಿವನನ್ನು ಧ್ಯಾನಿಸಬೇಕೆಂದು ಈ ರೀತಿ ಯೋಗಾಭ್ಯಾಸ ಮಾಡುವವರು ಬಾಹ್ಯ ಸೂಚಕವಾಗಿ ಕಿವಿಗಳಲ್ಲಿ ಕುಂಡಲಿ, ಕಂಠದಲ್ಲಿ ರುದ್ರಾಕ್ಷಿ ಮಾಲೆ, ನಾದಿ ಪವಿತ್ರಿ ಸಹಿತ ಯಜ್ಞೋಪವೀತ ಧರಿಸಿಕೊಳ್ಳಬೇಕೆಂದು ನಾಥ ಪಂಥದ ಆದಿಗುರುಗಳಾದ ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರೇ ಉಪದೇಶಿಸಿದ್ದಾರೆಂದು ನಾಥರ ಕುರಿತಾದ ಗ್ರಂಥಗಳಲ್ಲಿ ಉಲ್ಲೇಖವಿದೆ.

ಕ್ರಿ.ಪೂ ೮ನೇ ಶತಮಾನದಲ್ಲಿ ಬಿಹಾರದಲ್ಲಿ ನಾಥ ಪಂಥಕ್ಕೆ ಸೇರಿದ ಪಾರ್ಶ್ವನಾಥನೆಂಬ ರಾಜಕುಮಾರನು ತನ್ನ ಪಂಥದ ಕ್ಷತ್ರಿಯರಿಗೋಸ್ಕರ ಒಂದು ಹೊಸ ಮತವನ್ನು ಸ್ಥಾಪಿಸಿದನು. ಅದೇ ನಾಥ ಸಂಪ್ರದಾಯ.[೬] ಇವನ ಮತದ ಉದ್ದೇಶವೇನೆಂದರೆ ಬಹಳ ಸುಖಃ ಸಂತೋಷದಲ್ಲಿದ್ದವರು, ವೈಭೋಗಗಳಲ್ಲಿ ಬಿದ್ದಿರುವ ಮನುಷ್ಯರನ್ನು ಅವರಲ್ಲಿಯೂ ಮುಖ್ಯವಾಗಿ ಅರಸರನ್ನು ಯೋಗೀಶ್ವರರನ್ನಾಗಿ ಮಾಡುವುದು. ಜಾತಿ ಭ್ರಷ್ಟರಾಗಿ ಕಷ್ಟದಲ್ಲಿ ಬಿದ್ದವರನ್ನು ಈ ಪಂಥಕ್ಕೆ ಸೇರಿಸಿ ಅವರನ್ನು ಉದ್ಧರಿಸುವುದು. ಈ ಮತಕ್ಕೆ ನಾಥ ಸಂಪ್ರದಾಯ ಎಂದು ಹೆಸರಾಯಿತು. ಯೋಗಿಗಳಾದವರು ಸಂಪ್ರದಾಯದಂತೆ ಕರ್ಣ ಕುಂಡಲಗಳನ್ನು ಧರಿಸಿ, ಜಟೆಯನ್ನು ಬೆಳೆಸಿ ಮೈಗೂ, ಜಟೆಗೂ ವಿಭೂತಿಯನ್ನು ಹಚ್ಚಿಕೊಂಡು, ಕಂಠ ಮತ್ತು ಕೈಗಳ ತೋಳುಗಳಿಗೆ ರುದ್ರಾಕ್ಷಿ ಮಾಲೆ ಸುತ್ತಿಕೊಂಡು, ಕಂಕುಳಲ್ಲೊಂದು ಜೋಳಿಗೆ ತೂಗಾಡಿಸಿ, ಉಣ್ಣೆಯ ಉಡಿದಾರ, ಕೌಪೀನ ಮಾತ್ರವೇ ಉಟ್ಟು, ಶೃಂಘಿ, ಶೌಲಿ, ತ್ರಿಶೂಲ ಮುಂತಾದುವುಗಳನ್ನು ಹಿಡಿದುಕೊಂಡು ಊರು, ದೇಶಗಳಲ್ಲಿ ತೀರ್ಥ ಸ್ನಾನ ಮಾಡುತ್ತಾರೆ. ನಂತರ ಬದರೀಕಾಶ್ರಮಕ್ಕೆ ಹೋಗಿ, ಅಲ್ಲಿ ನಾಥ ಸಂಪ್ರದಾಯದ ತತ್ವಗಳನ್ನು ಯೋಗೀಶ್ವರರಿಂದ ಕಲಿತುಕೊಂಡು ಮತ ಪ್ರಸರಣೆಗಾಗಿ ದೇಶದಲ್ಲಿ ಸಂಚರಿಸುತ್ತಾರೆ. ಇವರಲ್ಲಿ ಕೆಲವರು ಯೋಗ್ಯವಾದ ಸ್ಥಳಗಳನ್ನು ನೋಡಿ, ಯೋಗ ಸಾಧನೆಯಲ್ಲಿ ತಪೋನಿರತರಾಗುತ್ತಾರೆ. ಈ ಮತದವರು ಈಶ್ವರನನ್ನು ಆದಿನಾಥ ಅಥವಾ ಲೋಕೇಶ್ವರ ಎನ್ನುವ ಹೆಸರಿನಿಂದ ಪೂಜಿಸುವರು. ಅಲ್ಲದೆ ಶಕ್ತಿಯನ್ನು ಬೈರವನನ್ನು ಪೂಜಿಸುತ್ತಾರೆಂದು ತಿಳಿಯುತ್ತದೆ.

ಭಾರತದಲ್ಲಿ ಇವರ ಪ್ರಸ್ತಾಪವು ಹಲವು ಪ್ರದೇಶಗಳಲ್ಲಿ ಇದೆ ಎನ್ನುವುದು ಸಾಹಿತ್ಯ ಗ್ರಂಥಗಳಿಂದ ತಿಳಿಯುತ್ತಾದೆ. ಕಲ್ಯಾಣ ಚಳುವಳಿಗೆ ಅಲ್ಲಮ, ಬಸವರು ಹೇಗೆ ಕಾರಣ ಕರ್ತರೋ ಹಾಗೆಯೇ ನಾಥ ಪಂಥದಲ್ಲಿ ಮತ್ಸ್ಯೇಂದ್ರ ಗೋರಕ್ಷರಿಬ್ಬರು ಪ್ರಮುಖರು. ದೇಶದಾದ್ಯಂತ ಬೇರೆ ಬೇರೆ ಪ್ರದೇಶಗಳಲ್ಲಿ ನವನಾಥರ ಪಟ್ಟಿ ಸಿಗುತ್ತದೆ. ಆದರೆ, ವೈಯಕ್ತಿಕ ಜೀವನದ ಬಗ್ಗೆ ಸ್ಪಷ್ಟ ವಿವರಣೆಗಳು ಸಿಗುತ್ತಿಲ್ಲ.

ಗೋದಾವರಿ ತೀರದ ತ್ರ್ಯಯಂಬಕೇಶ್ವರದಲ್ಲಿ ಗೋರಕನಾಥನು ತಪೋಗೈದ ಗುಹೆ, ಅಖಾಡವಿದೆ. ಗೋರಕ್ಷ ಮತ್ಸ್ಯೇಂದ್ರರು ಮರಾಠಿ ಪರಂಪರೆಯಲ್ಲಿ ದತ್ತಾತ್ರಯನಿಂದ ಗುರುದೀಕ್ಷೆ ಪಡೆಯುತ್ತಾರೆ. ಈ ಆಧಾರದಲ್ಲಿ ಗೋರಕ್ಷ ತಮ್ಮವನೆಂದು ಮರಾಠಿ ಸಂಸ್ಕೃತಿಯಲ್ಲಿ ಹಕ್ಕು ಸಾಧಿಸುತ್ತಾರೆ. ಮತ್ಸ್ಯೇಂದ್ರನು ಹೋಗಿ ನೆಲೆಸಿದ ಸ್ತ್ರೀ ರಾಜ್ಯವು ಯಾವುದೆಂದು ವಿದ್ವಾಂಸರಲ್ಲಿ ಸಹಮತವಿಲ್ಲ. ಅದು ಸಿಂಹಳ ದ್ವೀಪವೆಂದೂ, ಅಸ್ಸಾಂಮಿನ ಕಾಮುಖ್ಯವೆಂದೂ ಕೌಳ ಪಂಥದ ಯೋಗಿನಿಯರು ಇದ್ದ ಶ್ರೀ ಶೈಲದ ಕದಲೀವನವೆಂದು ಮುಂದುವರಿದು ಅದು ಕೇರಳವೆಂದು ಹೀಗೆ ನಾಲ್ಕು ವಾದಗಳಿವೆ. ಆದರೆ, ಡೇರೆಯವರ ಪ್ರಕಾರ ಅದು ಶ್ರೀ ಶೈಲ ಎಂಬ ವಾದವಾಗಿದೆ. ಪೂರಕವಾಗಿ ಕರ್ನಾಟಕದ ಶ್ರೀ ಶೈಲ ಮಲ್ಲಿಕಾರ್ಜುನ ಗುಡಿಯ ಪ್ರಕಾರದಲ್ಲಿ ಮತ್ಸ್ಯೇಂದ್ರನ ಶಿಲ್ಪಗಳಿರುವುದು ಕಾಣುತ್ತದೆ.

ಮತ್ಸ್ಯೇಂದ್ರನಾಥನಿದ್ದ ಶ್ರೀ ಶೈಲವು ಕೇರಳವೆಂದು ಕದ್ರಿಯ ಸ್ಥಳ ಪುರಾಣಗಳು ಹೇಳುತ್ತವೆ. ಅಲ್ಲಿಂದ ಹೊರಟ ಮತ್ಸೇಂದ್ರನು ನೇತ್ರಾವತಿ ನದಿಯನ್ನು ದಾಟಿ ಕದ್ರಿಯ ಕದಲೀವನಕ್ಕೆ ಬಂದನೆಂದೂ ಅಲ್ಲಿ ತನ್ನ ಹೆಸರಿನಲ್ಲಿ 'ಮಂಜುನಾಥ' ದೇವರನ್ನು ಸ್ಥಾಪಿಸಿದನೆಂದೂ ಕದಲೀ ಮಂಜುನಾಥ ಮಹಾತ್ಮೆ ಹೇಳುತ್ತದೆ. ಕದ್ರಿಯ ಪರಿಸರವು ಈಗಲೂ ಮತ್ಸ್ಯೇಂದ್ರನ ಜೊತೆ ಗಾಢ ಸಂಬಂಧ

ಹೊಂದಿದೆ. ಕರಾವಳಿ ಸೀಮೆಯಲ್ಲಿ ಮೀನಿನ ಮೇಲೆ ಕುಳಿತ ಮತ್ಸ್ಯೇಂದ್ರನ ಹಲವಾರು ಮೂರ್ತಿಗಳು ಕಾಣಸಿಗುತ್ತವೆ. ಮತ್ಸ್ಯೇಂದ್ರನೇ ಕದ್ರಿ ಮಂಜುನಾಥನೆಂಬ ವಾದವಂತೂ ಬಲವಾಗಿದೆ. ಮಂಜುನಾಥನ ಗುಡಿ ಕಟ್ಟಿಸಿದ ಅಳುಪ ರಾಜನ ವಂಶದ ಚಿಹ್ನೆ ಮೀನು. ಬಹುಷ ಆರಂಭದಲ್ಲಿದ್ದ ಮೀನುಗಾರರ ಸಮಾಜವೇ ಮುಂದೆ ದೊರೆಗಳಾಗಿ ಮತ್ಸೇಂದ್ರನ ಗುಡಿ ಸ್ಥಾಪಿಸಿರುವ ಸಾಧ್ಯತೆಗಳು ಇಲ್ಲದಿಲ್ಲ. ಇದಕ್ಕೆ ಪೂರಕವಾಗಿ ಇಂದಿಗೂ ಮೊಗವೀರರು ಕಡಲಿಗೆ ಇಳಿಯುವ ಮೊದಲ ದಿನ ಕದ್ರಿಯ ಜೋಗಿ ಅರಸರನ್ನು ಆಮಂತ್ರಿಸಿ ಸಮುದ್ರಪೂಜೆ ಮಾಡಿಸುತ್ತಾರೆ. ಇದು ಒಂದರ್ಥದಲ್ಲಿ ಮತ್ಸ್ಯೇಂದ್ರನ ಪೂಜೆ ಕೂಡಾ. ಕರಾವಳಿಯುದ್ದಕ್ಕೂ ಈಗಲೂ ಕೂಡಾ ಮತ್ಸ್ಯೇಂದ್ರನ ಹೆಸರಿನ್ನಿಟ್ಟುಕೊಂಡವರಿದ್ದಾರೆ.

ಹಂಪಿಯ ವಿರೂಪಾಕ್ಷ ಗುಡಿಯಲ್ಲಿ ಮೀನ ರೂಢನಾದ ಮತ್ಸ್ಯೇಂದ್ರನಾಥನ ಶಿಲ್ಪ ಕಾಣಸಿಗುತ್ತದೆ. ಲುಂಕೆಮಲೆಯ ಬೈರವ ಗುಡಿಯ ಮುಂಭಾಗದ ಸಿಡಿಗಂಬದಲ್ಲಿ ಮೀನಿನ ಮೇಲೆ ಕುಳಿತ ಮತ್ಸ್ಯೇಂದ್ರನಾಥನ ಕೆತ್ತನೆಯಿದೆ. ಅಲ್ಲಮನ ಗುರು 'ಅನಿಮಿಷ' ಅಂದರೆ ಕಣ್ರೆಪ್ಪೆಯಿಲ್ಲದ್ದು ಅರ್ಥಾತ್ ಮೀನು.[೮] ಅಲ್ಲಮ ಪ್ರಭುವಿನ ಗುರು ಅನಿಮಿಷಯ್ಯನು ಮೂಲತ ಮತ್ಸ್ಯೇಂದ್ರನಾಥ ಎಂಬ ವಾದ ಕನ್ನಡದಲ್ಲಿ ಸಿಗುತ್ತದೆ.

ಕನ್ನಡದ ಕವಿಗಳು ತರುವ ಮುಖಾಮುಖಿಗಳಲ್ಲಿ ಗೋರಖನು ಅಲ್ಲಮನ ಜೊತೆ ಶ್ರೀ ಶೈಲದ ಕದಲೀವನದಲ್ಲಿ ವಾಗ್ವಾದ ಮಾಡುತ್ತಾನೆ. ರೇವಣ ಸಿದ್ದಯ್ಯನ ಜೊತೆ ಕೊಲ್ಲಾಪುರದಲ್ಲಿ ಪೈಪೋಟಿ ಮಾಡುತ್ತಾನೆ.

ಮರಳು ಸಿದ್ದನ ಜೊತೆ ಯುದ್ಧ ಮಾಡುತ್ತಾನೆ. ಇದರ ಜೊತೆಗೆ ಕನ್ನಡದಲ್ಲಿ ಗೋರಕ್ಷಕ ಪಾಲಪ್ರಭು ಎಂಬ ಅಂಕಿತವುಳ್ಳ ಗೋರಕ್ಷ ಎಂಬ ವಚನಕಾರರು ಇದ್ದಾರೆ. ಆದರೆ, ಕನ್ನಡ ಸಾಹಿತ್ಯ ಕಾಣಿಸುವ ಗೋರಖನು ಮಹಾನ್ ಯೋಗಿಯಲ್ಲ. ಇನ್ನು ಸಾಧನೆಯ ಹಂತದಲ್ಲಿರುವ ಸಿದ್ಧ ಎಂದು ತಿಳಿಯುತ್ತದೆ. ಕರ್ನಾಟಕದಲ್ಲಿ ಗೋರಖನ ಮೂರ್ತಿಗಳು ಜೋಗಿ ಮಠಗಳಲ್ಲಿಯೂ ಮಂಜುನಾಥ ಗುಡಿಗಳಲ್ಲೂ ಇವೆ. ಬಸವ ಕಲ್ಯಾಣ ತಾಲೂಕಿನ 'ಗೊರಾಟ' ಎಂಬ ಹಳ್ಳಿಯಲ್ಲಿ ವಿಶೇಷವಾಗಿ ಗೋರಕ್ಷನಾಥನ ದೊಡ್ಡ ಮೂರ್ತಿ ಇದೆ.[೯] ಉತ್ತರದಲ್ಲಿ ಗೋರಕನು ಕಬೀರನ ಜೊತೆ ಸಂವಾದ ಮಾಡುತ್ತಾನೆ. ಪಂಜಾಬಿನ ಗುರುನಾನಕ ಜೊತೆ ಗೋಷ್ಠಿ ನಡೆಸುತ್ತಾನೆ.

ರಸಾಲುವಿನ ಸಮಕಾಲೀನವನಾಗುತ್ತಾನೆ. ಇವರೆಲ್ಲ ಐದಾರು ಶತಮಾನಗಳ ನಂತರದಲ್ಲಿ ಬಂದವರು. ಇಷ್ಟು ದೀರ್ಘ ಕಾಲದಲ್ಲಿ ಒಬ್ಬ ಸಂತ ಬಾಳಿ ಬದುಕಿ ಸಂವಾದ ಮಾಡಲು ಸಾಧ್ಯವೇ? ಎಂಬ ಗೊಂದಲವಿದೆ. ಗೋರಖನು ನೇಪಾಳದ ಧಾರ್ಮಿಕ ನಾಯಕ. ಹಾಗೆಯೇ ನೇಪಾಳಕ್ಕೆ ಗೋರಕ ದೇಶವೆಂದು ಹೆಸರಿದೆ. ಅಲ್ಲಿನ ಜನರನ್ನು ಗೋರಕಖನೆಂದು ಕರೆಯಲಾಗಿದೆ. ನೇಪಾಳದಲ್ಲಿ ಗೋರಕ ಜಿಲ್ಲೆಯಿದೆ. ನೇಪಾಳದ ನಾಣ್ಯಗಳ ಮೇಲೆ ಶಿವ ಗೋರಕ್ಷನಾಥನ ಲಾಂಛನವಿದೆ. ಚಾರಿತ್ರಿಕವಾಗಿ ಗೋರಕ ಮತ್ಸ್ಯೇಂದ್ರರ ಮೂಲದ ಬಗ್ಗೆ ಯಾವುದೇ ಭಿನ್ನ ಮತವಿರಲಿ ಇವರಿಬ್ಬರು ನೇಪಾಳದ ಧಾರ್ಮಿಕ ಸಾಂಸ್ಕೃತಿಕ ನಾಯಕರೆಂಬುವುದು ತಿಳಿಯಬಹುದು.

ಮತ್ಸೇಂದ್ರನ ಹೆಸರಿನಲ್ಲಿ ನೇಪಾಳದಲ್ಲಿ ರಾಷ್ಟ್ರೀಯ ಹಬ್ಬ ಜರಗುತ್ತದೆ. ಅವನು ಫಲವಂತಿಕೆಯ ದೈವ. ಒಮ್ಮೆ ಗೋರಖನು ಮೋಡಗಳನ್ನೆಲ್ಲ ಹಾವುಗಳನ್ನಾಗಿ ಮಾಡಿ ಅವುಗಳ ಮೇಲೆ ಕುಳಿತು

ತಪಸ್ಸನ್ನು ಆಚರಿಸುವಾಗ, ದುಂಬಿಯಾಗಿ ಹೋಗಿ ಮತ್ಸ್ಯೇಂದ್ರನು ಮೋಡಗಳನ್ನು ಬಿಡುಗಡೆ ಮಾಡಿ ಮಳೆ ತರಿಸಿದ್ದನಂತೆ.[೧೦] ಈಗಲೂ ಮಳೆ ಬರದಿದ್ದರೆ ಮತ್ಸೇಂದ್ರನನ್ನು ಪೂಜಿಸುವ ಪದ್ಧತಿ ನೇಪಾಳದಲ್ಲಿದೆ.

ಮತ್ಸ್ಯೇಂದ್ರನು ಮೂಲದಲ್ಲಿ ಕೌಳ ಪಂಥೀಯನೆಂದು 'ಕೌಳಜ್ಞಾನ ನಿರ್ಣಯ' ಹೇಳಿದರೆ ಬೌದ್ಧ ಪರಂಪರೆಯಲ್ಲಿ ಮತ್ಸ್ಯೇಂದ್ರನು ಭೋದಿಸತ್ವನ ೪ನೇ ಅವತಾರವಾದ 'ಅವಲೋಕೀತೇಶ್ವರ' ಎಂದಿದೆ. ಆದರೂ ಬೌದ್ಧ ವಜ್ರಯಾನ ಪಂಥಕ್ಕೆ ಶೈವರೂಪ ಕೊಟ್ಟ ಕೀರ್ತಿ ಗೋರಖನಿಗೆ ಕೊಡಲಾಗಿದೆ. ನಾಥ ಪಂಥದ ಇನ್ನೊಂದು ಹೆಸರು ಗೋರಖ ಪಂಥ. ನಾಥರ ಆಚರಣೆಗಳಲ್ಲಿ ಹೇಳುವ ಮೊದಲ ಹೆಸರು ಗೋರಖನದ್ದು. ನಂತರದ ಸ್ಥಾನ ಮತ್ಸ್ಯೇಂದ್ರನದ್ದು ಹೀಗಾಗಿ ಭಾರತದ ಬಹುತೇಕ ನಾಥ ಮಠಗಳು ಗೋರಖನ ಹೆಸರಿನಲ್ಲಿರುವುದು ತಿಳಿಯುತ್ತದೆ. ಉಜ್ಜಯಿನಿ ದೊರೆ 'ಭೃರ್ತಹರಿ' ಮೊದಲಾದವರು ರಾಜ್ಯ ತ್ಯಾಗ ಮಾಡಿ ಗೋರಖನ ಶಿಷ್ಯರಾಗುತ್ತಾರೆ. ಕರ್ನಾಟಕದ ಎಷ್ಟೋ ಮಠಗಳು ಶೈವ ಸಂಪ್ರದಾಯದ ಇತರ ಜನಾಂಗಗಳ ಪಾಲಾಗಿದೆ. ಆದಿ ಚುಂಚನಗಿರಿ ಮಠವು ಒಕ್ಕಲಿಗ ಗೌಡ ಜನಾಂಗದ ವಶವಾದ ಬಗ್ಗೆ ನಾಥರ ಗ್ರಂಥಗಳಲ್ಲಿ ಉಲ್ಲೇಖವಿದೆ. ಈ ಎಲ್ಲಾ ಮತಗಳು ಮೂಲತ ನಾಥ ಸಂಪ್ರದಾಯದ ಆಚರಣೆಯಲ್ಲಿತ್ತು ಎಂದು ತಿಳಿಯುತ್ತದೆ. ಪ್ರಸ್ತುತ ಇಲ್ಲಿ ನಾಥ ಸಂಪ್ರದಾಯದ ಆಚರಣೆ ಇಲ್ಲ. ಆದರೆ, ನಾಥ ಸಂಪ್ರದಾಯದಂತೆ ಇಲ್ಲಿ ಕಾಶೀ ಕಾಳ ಭೈರವ, ಶಿವ, ಶ್ರೀಶಕ್ತಿ ದೇವತೆಗಳ ಆರಾಧನೆ ಇದೆ.

ಕೇದಾರನಾಥ, ಅಮರನಾಥ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ಯಾತ್ರೆಮಾಡಿ ಬರುತ್ತಿರುವ ರಮ್ತೇ ಸಾಧುಗಳಿಗೆ ಈಗಲೂ ಹಿಮಾಲಯದ ತಪ್ಪಲುಗಳಲ್ಲಿ ಯೋಗಾರೂಢರಾದ ಶ್ರೀ ಸುಂದರನಾಥಜೀಯುವರು ಕಾಣಸಿಗುತ್ತಾರೆಂದು ಹೇಳುತ್ತಾರೆ. ಕದ್ರಿ ಜೋಗಿ ಮಠದ ಪೀಠಾಧಿಪತಿಗಳಾಗಿದ್ದ ಇವರು ಮುಂಬೈಯ ಮಲಬಾರ್‌ಹಿಲ್ ಬಳಿಯಿರುವ ಬಾಬುಲ್‌ನಾಥ್‌ಎಂಬಲ್ಲಿ 'ಬಾಬುಲ್' ಎಂಬ ಮರದಡಿಯಲ್ಲಿ ಒಂದು ವರ್ಷದವರೆಗೆ ಯೋಗರೂಢರಾಗಿ ನಂತರ ಅಲ್ಲಿಂದ ಅಧೃಶ್ಯರಾದರಂತೆ. ಅಲ್ಲಿ ಅವರ ಸ್ಮಾರಕವೊಂದಿದೆ.[೧೧] ನಾಥಪಂಥಿಯರು ಅವರ ಮೇಲಿಟ್ಟಿರುವ ಅನನ್ಯ ಗೌರವ, ಭಯಭಕ್ತಿಯು ಅವರು ಇಂದಿಗೂ ಜೀವಂತವಾಗಿದ್ದಾರೆ ಎನ್ನಲು ಕಾರಣದಂತೆ ತೋರುತ್ತದೆ. ೧೯೨೧ನೇ ಇಸವಿಯಲ್ಲಿ ಪಾಂಡಿಚೇರಿ ಕಾಲೇಜಿನ ಪಂಡಿತರಾದ ಜಿ. ಜೊವಿಯಾದುಬ್ರೈಲ ಎಂಬವರು ಬರೆದ "ವೇದಿಕ್ ಎಂಟಿಕ್ವಿಟಿಸ್" ಎಂಬ ಪುಸ್ತಕದಲ್ಲಿ ಕೇರಳ ದೇಶದಲ್ಲಿ ಕಾಡುಗುಡ್ಡಗಳ ಮೇಲಿರುವ ಮುರಕಲ್ಲಿನ ಗವಿಗಳ ಒಳಗೆ ಕಮಾನಿನ ದ್ವಾರಗಳಿದ್ದು, ಒಳಗಡೆಯಲ್ಲಿ ಅಗ್ನಿಕುಂಡಗಳಿವೆ. ಈ ಅಗ್ನಿಕುಂಡಗಳ ಹತ್ತಿರವಿರುವ ಗೋಡೆಗಳಲ್ಲಿ ಒಂದೊಂದು ಕರಡಿಗೆ ಇದೆಯೆಂದೂ, ತ್ರಿಶೂಲಗಳೂ, ಚಿಮಿಟಿಗಳೂ, ಕತ್ತಿಗಳು ಇದ್ದು ತಾನು ಸ್ವತ: ನೋಡಿರುವುದಾಗಿ ಉಲ್ಲೇಖಿಸಿರುತ್ತಾರೆ. ಈ ಗವಿಗಳು ಆರ್ಯ ಬ್ರಾಹ್ಮಣರನ್ನು ಹೂತಿಟ್ಟ ಸ್ಥಳಗಳೆಂದು ಬರೆದಿರುತ್ತಾರೆ. ಆದರೆ, ನಂಬೂದಿರಿ ಬ್ರಾಹ್ಮಣರು ಹೆಣಗಳನ್ನು ಸುಡುತ್ತಾರಲ್ಲದೆ ಹೂತಿಡುವ ಕ್ರಮವು ಅವರಲಿಲ್ಲ ಎಂದು ತಿಳಿಯುತ್ತದೆ. ಈ ಗವಿಗಳನ್ನು ಮತ್ಸೇಂದ್ರನಾಥ ತನ್ನ ಮತವನ್ನು ಕೇರಳದಲ್ಲಿ ಭೋದಿಸುವ ಸಮಯದಲ್ಲಿಯೂ ಅದರ ನಂತರದಲ್ಲಿ ಸಿದ್ದ ಯೋಗಿಗಳು ಯೋಗಸಾಧನೆಯಲ್ಲಿ ಕುಳಿತುಕೊಳ್ಳಲು ಆಯಾ ಕಾಲದ ಅರಸರು ಕಟ್ಟಿಸಿಕೊಟ್ಟ ಗುಹೆಗಳಾಗಿರಬಹುದು.[೧೨] ದಕ್ಷಿಣ ಕನ್ನಡ ಜಿಲ್ಲೆಯ ಕುಂಬಳೆಯ ಹತ್ತಿರವಿರುವ 'ಪೊಸೊಡಿಗುಂಪೆ'

ಎಂಬ ಗುಡ್ಡದ ಬದಿಯಲ್ಲಿರುವ ಗವಿಗಳು, ವಿಟ್ಲದ ಜೋಗಿ ಮಠದ ಹತ್ತಿರದ ಗುಡ್ಡದಲ್ಲಿರುವ ಗವಿಗಳು, ಕದಿರೆ ಯೋಗೀಶ್ವರ ಮಠದಲ್ಲಿರುವ ಗವಿಗಳು, ಕುಟಚಾದ್ರಿಯಲ್ಲಿಯೂ ಸೂಡದಲ್ಲಿಯೂ ಇರುವ ಮಠ ಮತ್ತು ಗವಿಗಳ ಇದನ್ನೆಲ್ಲ ನೋಡಿದಾಗ ಮೇಲಿನ ಸಂಗತಿಯ ಖಚಿತವಾಗುತ್ತದೆ.

ಭಾರತದ ನಾಥ ಪಂಥ ಕ್ಷೇತ್ರದ ಪ್ರಮುಖ ಪುಣ್ಯ ಸ್ಥಳಗಳು

೧.ಗಿರಿನಾರ್	೧೩.ಹರಿದ್ವಾರ್	೨೫.ಹಂಡಿಬಡಂಗ್
೨.ತ್ರ್ಯಯಂಬಕೇಶ್ವರ	೧೪.ಬದ್ರಿನಾಥ್	೨೬.ಶ್ರೀ ಕದಲೀ ಕ್ಷೇತ್ರ
೩.ಆಂಜನೇರಿ ಪರ್ವತ	೧೫.ಕೇದಾರ್‌ನಾಥ್	೨೭.ಪಾತಾಳ ಭುವನೇಶ್ವರ್
೪.ಸಪ್ತ ಶೃಂಘ ಘಢ	೧೬.ಬೃಂದಾವನ್	೨೮.ದುಡ್ಲುದೇಲಕ್
೫.ವಜ್ರೇಶ್ವರಿ	೧೭.ರಾಮೇಶ್ವರ್	೨೯.ಚೌಕ್ ತಪ್ಪೆ ಪಂಚೌರಾ
೬.ವೃದ್ದೇಶ್ವರ್	೧೮.ನೇಪಾಳ್	೩೦.ಗೋರಖ್‌ಟಿಲ್ಲಾ
೭.ಗರ್ಭಗಿರಿ	೧೯.ಅಮರ್‌ನಾಥ್	೩೧.ಮಾನ್‌ಫರಾ (ಕಚ್)
೮.ಬತ್ತೀಸಿರಾಳ	೨೦.ಹಿಂಗ್ ಲಾಜ್	೩೨.ರಥದೋಂಡಾ (ಅಜಮೀರ್)
೯.ಉಜ್ಜೈನಿ	೨೧.ಪೇವಾ(ಕುರುಕ್ಷೇತ್ರ)	೩೩. ಗಂಗಾ ಸಾಗರ್ (ಬಂಗಾಳ)
೧೦.ಆಲಂದಿ	೨೨.ಪಾಲ್ವಾ	೩೪.ಜೋಗಿ ಗುಫಾ (ದಿನಾಜ್‌ಪುರ)
೧೧.ಅಯೋಧ್ಯಾ	೨೩.ನೆಹನ್ ಪಟ್ಟಣ	೩೫.ಅಭೋಹರ್ (ಪಂಜಾಬ್)
೧೨.ದ್ವಾರಕಾ	೨೪.ಪಾಯ್‌ಧೂನಿ	೩೬.ಜಕ್ವಾರ್ (ಗುರುದಾಸ್‌ಪುರ್)[೧೩]

ನೆಲೆ :

ಕದ್ರಿ ಮಠದ ನಾಥರಿಗೆ ಶಾಸನಗಳಲ್ಲಿ ಒಡೆಯ, ಪ್ರಭು ಎಂದು ಕರೆದಿದೆ. ನಾಥನೆಂದರೆ ಯೋಗ ಪರಿಭಾಷೆಯಲ್ಲಿ ಇಂದ್ರಿಯ ನಿಗ್ರಹಿಸಿಕೊಂಡವ. ಯೋಗ ಸಿದ್ಧಿಯ ಮೂಲಕ ವಾಯುವನ್ನು ಮೇಲ್ಮುಖಿಯಾಗಿ ಕಳಿಸಿ, ಮನಸ್ಸನ್ನು ನಿಶ್ಚಲಗೊಳಿಸಿ, ಅದರ ಮೇಲೆ ಹಿಡಿತ ಸಾಧಿಸುವುದು ಎಂದರ್ಥ. ನಾಥ ಸಂಪ್ರದಾಯದ ಬಗ್ಗೆ ಉಲ್ಲೇಖವಿರುವ ದಾರ್ಶನಿಕ ಗ್ರಂಥಗಳಾದ 'ಸಿದ್ಧ ಸಿದ್ಧಾಂತ ಪದ್ಧತಿ', 'ಅಮನಸ್ಕ ಯೋಗ', 'ಅಮರೌಘ ಶಾಸನ', 'ಅವಧೂತಗೀತಾ' 'ಹಠಯೋಗಾ ಪ್ರದೀಪಿಕಾ', 'ಗೋರಕ್ಷಸಂಹಿತಾ', 'ಗೋರಕ್ಷ ಪದ್ಧತಿ' ಮುಂತಾದ ಸಂಸ್ಕೃತ ಗ್ರಂಥಗಳು ಗೋರಖನ ಹೆಸರಿನಲ್ಲಿದ್ದರೆ, ಅವನ ತತ್ವಗಳನ್ನು ದಾಖಲಿಸಿರುವ ಜನಪ್ರಿಯ ದೇಶೀ ಭಾಷ ಕೃತಿ 'ಗೋರಖಬಾನ', ಗೋರಖ ತಿಪ್ಪೆಯಲ್ಲಿ ಹುಟ್ಟಿರುವ ಕುರಿತಾದ ಅವನ ಚರಿತ್ರೆಯ ಸಂಗ್ರಹವಾಗಿದೆ. ಯೋಗ ಸಾಧನೆಯ ತುತ್ತ ತುದಿಯ ಅವಸ್ಥೆಯಲ್ಲಿ ಸಾಧಕರು ಬೆಂಕಿ ಮತ್ತು ನೀರಿನಿಂದ ಕಬ್ಬಿಣ ಶುದ್ಧವಾಗುವಂತೆ ತಾನೇ ಶಿವರಾಗುವ ಕಾರಣ ಬೇರೆ ದೇವರ ಕಲ್ಪನೆ ನಾಥರಲ್ಲಿ ಇಲ್ಲ ಎಂದು 'ನಾಥ ದರ್ಶನ' ಹೇಳುತ್ತದೆ.

ಯೋಗಿಯಾದವನು ತಮ್ಮ ತರ್ಕವೇ ಹೆಚ್ಚು ಸಕಾಲಿಕವಾದುದು ಎಂದು ಪಂಡಿತರಂತೆ ವಿವಾದಮಾಡಬಾರದು ವೆಂದು ಗೋರಕ ಹೇಳುತ್ತಾನೆ. ವೇದ, ಸ್ಮೃತಿ, ಶಾಸ್ತ್ರ ಹಾಗೂ ಯೋಗಗಳನ್ನು ನಿರಾಕರಿಸುವ ವಿಷಯದಲ್ಲಿ ನಾಥವೂ ಭಾರತದ ಅನೇಕ ಅನುಭಾವಿ ಪಂಥಗಳು ಸಮಾನವಾಗಿದೆ. ನಾಥರಿಂದಲೇ ಇದು ಮುಂದೆ ದತ್ತ, ನಾನಕ, ಕಬೀರ ಪಂಥಗಳಿಗೆ ಹರಿದವು. ಹೀಗೆ ಭಾರತದ ಎಲ್ಲಾ ಅನುಭಾವಿ ಪಂಥಗಳು ನಾಡಿನುದ್ದಕ್ಕೂ ಹರಿದ ಒಂದೇ ನದಿಯ ನೀರನ್ನು ತಮ್ಮ ತಮ್ಮ ಊರ ದಡದಲ್ಲಿ ಕುಡಿದವು. ಆದರೆ, ಈ ದಾರ್ಶನಿಕ ನಿಲುವು ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಕಾರಣ ಸಹಜವಾಗಿ ನಾಥರೂ ಒಳಗೊಂಡಂತೆ ಯೌಗಿಕ ಪಂಥಗಳು ಸನಾತನವಾದಿಗಳ ದ್ವೇಷವನ್ನು ಕಟ್ಟಿಕೊಳ್ಳಬೇಕಾಯಿತು.

ಗೋರಕ್ಷ ಮತ್ಸ್ಯೇಂದ್ರ ಹುಟ್ಟಿದ ಸ್ಥಳ, ಕಾಲ, ಸೇರಿದ ಪಂಥಗಳ ಬಗ್ಗೆ ಬಹಳಷ್ಟು ಗೊಂದಲ ಹುಟ್ಟಿಸುವ ವಿವರಗಳಿವೆ. ಇವರು ನಮ್ಮ ಸೀಮೆಯಲ್ಲಿ ಹುಟ್ಟಿದವರು, ನಮ್ಮ ನಾಡಿಗೆ ಬಂದವರು ಎಂದು ಭಾರತದ ಹಲವಾರು ಪ್ರದೇಶಗಳು ಹಕ್ಕು ಸಾಧಿಸುತ್ತವೆ. ಕರ್ನಾಟಕವೂ ಇದರಲ್ಲಿ ಹಿಂದೆ ಬಿದ್ದಿಲ್ಲ. ಮತ್ಸ್ಯೇಂದ್ರನು ಬಂಗಾಳದ ಚಂದ್ರಗಿರಿಯಲ್ಲಿಯೂ ಗೋರಕ್ಷನು ನೇಪಾಳದಲ್ಲಿ ಹುಟ್ಟಿದವರು. ಇಬ್ಬರೂ ೧೦ನೇ ಶತಮಾನದಲ್ಲಿದ್ದವರು ಎಂದು ವ್ಯಾಪಕವಾಗಿ ನಂಬಲಾಗಿದೆ.

ಬ್ರಿಗ್ಸ್‌ನ ಪ್ರಕಾರ ಗೋರಕ್ಷ ಮತ್ಸೇಂದ್ರರು ಪಂಜಾಬ್ ಭಾಗದವರಾಗಿದ್ದು ನಂತರ ಬಂಗಾಳದ ಕಡೆ ಚಲಿಸಿದರು. ಗೋರಕ್ಷನು ದಕ್ಷಿಣ ಪಂಥದ 'ವಡವ' ದೇಶದಲ್ಲಿ ಅದರಲ್ಲೂ ಗೋದಾವರಿ ತೀರದ ಚಂದ್ರಗಿರಿಯಲ್ಲಿ ಹುಟ್ಟಿದವನು ಎಂದು ಕೆಲವು ನಾಥ ಪಠ್ಯಗಳು ಹೇಳುತ್ತವೆ.[೧೪] ಕವಿರಾಜ ಮಾರ್ಗದ ಪ್ರಕಾರ ಕನ್ನಡ ನಾಡು ಗೋದಾವರಿವರೆಗೆ ಇತ್ತಾದರಿಂದ ಗೋರಕ್ಷನು ಕನ್ನಡಿಗ ಎಂದು ಊಹಿಸಲಾಗಿದೆ.

ಲೌಕಿಕ ಸುಖ ಭೋಗಗಳಿಗಾಗಿ ಹಂಬಲಿಸದ ಯೋಗಿಗಳು ಊರ್ದ್ವರೇತಸ್ಕ ಸಾಧನೆ ಮಾಡುತ್ತಾರೆ. ಅರ್ಥಾತ್ ಕುಂಡಲಿನಿ ಮಲಗಿರುವಾಗ ಮೂಲಾಧಾರ ಚಕ್ರದಲ್ಲಿರುವ ಅಮೃತವೆಲ್ಲ ಚಂಚಲವಾದ ಮನವನ್ನು ಹೀರುತ್ತದೆ. ಜಾಗೃತಗೊಂಡ ಕುಂಡಲಿನಿಯು ಆಗ ಅಮೃತ ಪಾಶನ ಮಾಡುವಂತಾಗಬೇಕು. ಇದು ಯೋಗಿ ಪಡೆಯುವ ಮಹದಾನಂದ. ಬಿಂದು ನಾಶವನ್ನು ದೊಡ್ಡ ನಷ್ಟ ಎನ್ನುವ ನಾಥವು ಬ್ರಹ್ಮಚರ್ಯೆ ಹಾಗೂ ಸನ್ಯಾಸದ ಪರ, ಎಂಬುವುದು ಸ್ಪಷ್ಟವಾಗುತ್ತದೆ. ನದಿತೀರದಲ್ಲಿರುವ ಮರ, ನಾರಿ ಸಂಗದಲ್ಲಿರುವ ಪುರುಷ ಎರಡೂ ನಾಶವಾಗುವ ಸಾಧ್ಯತೆ ಹೆಚ್ಚು ಎಂಬ ಸೂಚನೆ ಸಿದ್ಧ ಸಾಹಿತ್ಯದಲ್ಲಿದೆ. ಈ ತಾತ್ವಿಕ ಚಿಂತನೆ ನಾಥ ಯೋಗಿಗಳಲ್ಲಿ ಯಾವೆಲ್ಲ ಸಾಧ್ಯತೆಗಳನ್ನು ಮೇಳೈಸಿದವು? ಯಾವೆಲ್ಲ ಇತಿ ಮಿತಿಗೆ ತಳ್ಳಿದವು? ಇದನ್ನು ಶೋಧಿಸಬೇಕಿದೆ.

ಯಾವ ಕೋನದಿಂದ ನೋಡಿದರೂ ಎಲ್ಲಾ ಧರ್ಮ ಹಾಗೂ ಪಂಥಗಳಲ್ಲೂ ತತ್ವ ಹಾಗೂ ಆಚರಣೆಗಳ ನಡುವೆ ಬಿರುಕು ಇರುವುದು ಸಾಮಾನ್ಯ. ಇದಕ್ಕೆ ಕಾರಣ ದರ್ಶನವು ನೋಡುವ ಲೋಕದ ದೃಷ್ಟಿ. ಮೂಲ ದರ್ಶನಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬಂದು ಸೇರುವ ಸೇರ್ಪಡೆಗಳು, ಹೊಸ ಚಾರಿತ್ರಿಕ ಸನ್ನಿವೇಶಗಳು ಮೂಲದರ್ಶನವನ್ನು ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳಲು ಒತ್ತಡ ಹಾಕುತ್ತದೆ. ಹೀಗಾಗಿ ಪಂಥವೊಂದರ ದರ್ಶನವು ಪರಿವರ್ತನೆಗೆ

ಒಳಗಾಗುತ್ತ ಹೋಗುತ್ತದೆ. ನಾಥದರ್ಶನ ಎನ್ನುವುದು ಒಂದಲ್ಲ ಅನೇಕ ಧಾರೆಗಳ ಸಂಗಮ. ಹಲವು ದಿಕ್ಕುಗಳಿಂದ ಬಂದು ಸೇರಿಕೊಂಡ ದರ್ಶನ ಹಾಗೂ ಪಂಥಗಳು ನಾಥ ಸಂಪ್ರದಾಯದೊಳಗೆ ಬೆರೆತವು. ಅಷ್ಟು ಮಾತ್ರವಲ್ಲದೆ ತಂತಮ್ಮ ಕುರುಹುಗಳನ್ನು ಪ್ರತ್ಯೇಕವಾಗಿ ಉಳಿಸಿಕೊಂಡವು. ಶ್ರೀ ಕಾಶೀ ಕಾಳಬೈರವನು ನಾಥ ಪಂಥದ ಆರಾಧ್ಯ ಮೂರ್ತಿಯಾಗಿ ಉಳಿದಿರುವುದು ಕಪಾಲಿಕರ ಕುರುಹು. ತ್ರಿಶೂಲ ಹಾಗೂ ಶಕ್ತಿದೇವತೆಯ ಉಪಾಸನೆ ಶಾಕ್ತರ ಕುರುಹು. ದೇಪ, ವಜ್ರದ ಪ್ರಸ್ತಾಪ ಬರುವುದು ವಜ್ರಯಾನದ ಸಂಕೇತ. ಆದರೂ ಈ ಎಲ್ಲಾ ಪಂಥಗಳ ಒಳಗಿದ್ದ ಅತಿರೇಕಗಳನ್ನು ಬದಿಗಿಟ್ಟು ಅವುಗಳಲ್ಲಿ ತನಗೆ ಬೇಕಿದ್ದ ಅಂಶಗಳನ್ನು ಇರಿಸಿಕೊಂಡು ಗೋರಕನು ನಾಥ ಪಂಥವನ್ನು ಸಂಘಟಿಸಿದನು ಎನ್ನಬಹುದು. ಈ ಕಾರಣಕ್ಕಾಗಿಯೇ ಅವನಿಗೆ ಅನೇಕ ಪಂಥಗಳ ಜೊತೆ ಸ್ನೇಹ-ಸಂಘರ್ಷ ಎರಡನ್ನು ಮಾಡಬೇಕಾಗಿ ಬಂದಿರುವುದು ಸಹಜ.

ಖ್ಯಾತ ಚಿಂತಕ ಪುಣೇಕರ್ ಹೇಳುವಂತೆ ಗೋರಖನೊಬ್ಬ ಚತುರ ಸಂಘಟಕ. ಅವನು ಅನೇಕ ಪ್ರಬಲ ಮತ್ತು ದುರ್ಬಲಗೊಂಡ ಪಂಥಗಳನ್ನು ಸಂಕರಗೊಳಿಸಿ ನಾಥ ಪಂಥವು ಭರತ ಖಂಡದ ತುಂಬಾ ಹರಿದಾಡುವಂತೆ ಮಾಡಿದ. ನಾಥ ಪಂಥವು ಆಫಘಾನಿಸ್ಥಾನ, ಕಾಶ್ಮೀರ, ಬಂಗಾಳ, ಸಿಂದ್, ಪಂಜಾಬ್ ಪ್ರಾಂತ್ಯಗಳಲಿದ್ದ ಸೂಫಿ ಪಂಥದಿಂದ ಪಡೆದುಕೊಂಡಿದ್ದು, ಒಂದು ಕಾಲದಲ್ಲಿ ನಾಥರ ಝುಂಡಿಯು ನೇಪಾಳದಿಂದ ಮೆಕ್ಕಾದವರೆಗೂ ಹೋಗುತ್ತಿತ್ತು ಎಂದು ವಿದ್ವಾಂಸರು ಉಲ್ಲೇಖಿಸುತ್ತಾರೆ.

ನಾಥಪಂಥದ ಐತಿಹ್ಯ ಪ್ರಕಾರ ಸ್ತ್ರೀ ರಾಜ್ಯದ ರಾಣೀ ಪಿಂಗಳೆಗೆ ಆರೋಗ್ಯವಂತ ಗಂಡು ಸಂತಾನ ಪಡೆಯಬೇಕೆಂಬ ಹಂಬಲವಾಯಿತು. ಇದನ್ನು ಬ್ರಹ್ಮಚಾರಿಯಾದ ಹನುಮಂತನಲ್ಲಿ ಹೇಳಲು ಅವನು ಒಬ್ಬ ತೇಜಸ್ವಿಯಾದ ಪುರುಷವನ್ನು ನಿನ್ನಲ್ಲಿಗೆ ಬರುವಂತೆ ಮಾಡುವೆ ಎಂದು ಹೇಳಿ ಮತ್ಸ್ಯೇಂದ್ರನಮ್ಮು ಅಲ್ಲಿಗೆ ಹೋಗುವಂತೆ ಮಾಡುತ್ತಾನೆ. ಅಲ್ಲಿ ರಾಣಿಯ ಮೋಹ ಪಾಶಕ್ಕೆ ಸಿಲುಕಿದ ಮತ್ಸ್ಯೇಂದ್ರನಾಥನು ಮೇನಿನಾಥ ಮತ್ತು ಪಾರ್ಶ್ವನಾಥ ಎಂಬಿಬ್ಬರು ಮಕ್ಕ ಜನನಕ್ಕೆ ಕಾರಣವಾಗುತ್ತಾನೆ.

ತನ್ನ ಸಾಧನೆಯಲ್ಲವನ್ನು ಮರೆತು ಬಿಟ್ಟು ಸಂಸಾರ ಬಂದನದಲ್ಲಿ ಸಿಲುಕಿದ್ದ ಗುರುವನ್ನು ಎಚ್ಚರಿಸಲು ಗೋರಖನು 'ಮುದ್ದಲೆ'ಯವನಾಗಿ ಹೋಗಿ ಜಾಗೋ ಮತ್ಸ್ಯೇಂದ್ರ ಗೋರಖ ಆಯಾ' ಎನ್ನಲು ಮತ್ಸ್ಯೇಂದ್ರನಿಗೆ ಎಚ್ಚರವಾಗಿ ಗೋರಕ್ಷನೊಡನೆ ಹೊರಡುತ್ತಾನೆ. ಮಂದೆ ಪಿಂಗಳೆಯ ಸಮೇತರಾಗಿ ಮಂಗಳೂರಿನ ಉಳ್ಳಾಲದ ಹತ್ತಿರದ ನೇತ್ರಾವತಿ ನದಿದಾಟಿ ಬೋಳಾರದ ಗೋರೆಯ ದಂಡೆಗೆ ಬರುತ್ತಾರೆ. ಪಿಂಗಳೆಯನ್ನು ಮಂಗಳೆ ಎಂಬ ಹೆಸರಿನಿಂದ ಬೋಳಾರದಲ್ಲಿ ಈಗ ಮಂಗಳಾದೇವಿ ಇರುವ ಸ್ಥಳದಲ್ಲಿ ಶಕ್ತಿಯನ್ನಾಗಿ ಸ್ಥಾಪಿಸುತ್ತಾನೆ.[೨೫] ಈ ದೇವಸ್ಥಾನವು ೪೦೬೮ರಲ್ಲಿ (ಕ್ರಿ.ಶ.೯೬೮) ರಾಜಕುಂದವರ್ಮ ಜೀರ್ಣೋದ್ದಾರ ಮಾಡಿಸಿದ ಎಂದು ಶಾಸನಗಳು ಹೇಳುತ್ತವೆ.

ಈ ಹಿನ್ನಲೆಯಲ್ಲಿ ಮಕರ ಸಂಕ್ರಾಂತಿಯ ಹಿಂದಿನ ದಿನ ಜೋಗಿ ಅರಸನು ಮಂಗಳಾದೇವಿಗೆ ಪಟ್ಟೆ ಪೀತಾಂಬರವನ್ನು ಅರ್ಪಿಸಿ ಪುಷ್ಪಲಂಕಾರ ಪೂಜೆ ಮಾಡಿಸುವ ಆಚರಣೆ ಇಂದಿಗೂಇದೆ ಎಂದು ತಿಳಿಯುತ್ತದೆ.

ಅಲ್ಲಿಂದ ಕದಲೀ ವನವನ್ನು ಹರಸುತ್ತಾ ಗೋರಖ ಮಚ್ಚೇಂದ್ರರು ದಟ್ಟವಾದ ವನಗಳಿಂದ ಕೂಡಿದ ಎತ್ತರವಾದ ಬೆಟ್ಟ ಪ್ರದೇಶಕ್ಕೆ ಬಂದು 'ಅಲ್ಲಿ ಪರಶುರಾಮನ ಸೃಷ್ಟಿಯ ಸಂಕೇತವಾದ ಧುನಿಯನ್ನು ಕಂಡು, ಮಠ ನಿರ್ಮಿಸಿ ನೆಲೆ ನಿಲ್ಲುತ್ತಾರೆ ಎಂದು ದಾರ್ಶನಿಕ ಗ್ರಂಥಗಳು ಹೇಳುತ್ತದೆ.

ಗೋರಕ ಮಚ್ಚೇಂದ್ರ ಮಳಯಾಳ ರಾಜ್ಯದಿಂದ ಮಂಗಳೂರಿಗೆ ಬಂದಿದ್ದರು ಎಂಬ ಐತಿಹ್ಯವಿದೆಯಷ್ಟೆ. ಗೋರಖನು ನೇತ್ರಾವತಿ ನದಿದಾಟಿದ ಬಳಿಕ ಕೆಲಕಾಲ ತಂಗಿದ್ದನು ಎಂದು ಹೇಳಲಾಗುವ ಜಾಗದಲ್ಲಿ 'ಗೋರಕ ದಂಡ'ದ ಆರಾಧನೆ ಇದ್ದು, ಇದನ್ನು ಮಳಯಾಳಿ ಬಿಲ್ಲವರು ಮಾಡುತ್ತಾರೆ. ಪ್ರತೀ ವರ್ಷವು ಇಲ್ಲಿನ ಜಾತ್ರೆ ಸಂದರ್ಭದಲ್ಲಿ ಕದ್ರಿ ಜೋಗಿ ಮಠದ ನಾಥರು ಇಲ್ಲವೇ ಅರ್ಚಕರು ಬಂದು ಪೂಜೆ ಮಾಡುವ ವಾಡಿಕೆ ಇದೆ. ಇದೀಗ ಗುಡಿಯು ನವೀಕರಣಗೊಂಡಿದೆ.

ಮೂಲದಲ್ಲಿ ಇಲ್ಲಿದ್ದ ದಂಡ ಕಟ್ಟಿಗೆಯದ್ದಿರಬಹುದು. ಆದರೆ, ಈಗ ಕಲ್ಲಿನಲ್ಲಿ ದಂಡ ಶಿಲ್ಪವಿದೆ. ಅದರ ಪ್ರತಿಷ್ಠಾಪನೆಯನ್ನು ೧೯೫೭ರಲ್ಲಿ ಕದ್ರಿ ಮಠದ ಚಮೇಲಿನಾಥರು ಮಾಡಿದ್ದಾರೆ. ಇದು ನಾಥ ಪಂಥದ ಕೇರಳದ ರೂಪಾಂತರದಂತೆ ಕಂಡು ಬರುತ್ತದೆ.

ನಾಥರ ಐತಿಹ್ಯದ ಪ್ರಕಾರ ಮತ್ಸ್ಯೇಂದ್ರನಾಥರಿಗೆ ಕಾಶಿಯಲ್ಲಿರುವ ಶಿವಲಿಂಗವನ್ನು ಕದಲೀಗೆ ತಂದು ಸ್ಥಾಪಿಸಿ, ಪೂಜಿಸಿ ಮೋಕ್ಷ ಪಡೆಯಬೇಕೆಂಬ ಬಯಕೆಯಾಯಿತು. ಅವರು ಈ ಮಹತ್ಕಾರ್ಯವನ್ನು ತನ್ನ ಶಿಷ್ಯ ಗೋರಕ್ಷನಾಥನಿಗೆವಹಿಸಿಕೊಟ್ಟನು. ಗೋರಕ್ಷನು ಈ ಪ್ರಕಾರವಾಗಿ ಕಾಶಿಗೆ ತೆರಳಲು ಮತ್ಸ್ಯೇಂದ್ರನಾಥರು ಶಿವನನ್ನು ಕುರಿತು ಅಖಂಡ ಹಠಯೋಗದಲ್ಲಿ ಕುಳಿತನು. ಹಲವು ವರುಷಗಳ ಬಳಿಕ ಬ್ರಾಹ್ಮೀ ಮುಹೂರ್ತದಲ್ಲಿ ಶಿವನು ಪ್ರತ್ಯಕ್ಷವಾಗಿ "ನಾನೇ ಗೋರಕ್ಷನಾಥನಾಗಿ ನಿನ್ನ ಜೊತೆಯಿರಲು ಮತ್ತೆ ನನ್ನನ್ನು ಕರೆತರಲು ಗೋರಕ್ಷನನ್ನೇಕೆ ಕಳುಹಿಸಿದೆ? ಎನ್ನಲು, ಆಗ ಮತ್ಸ್ಯೇಂದ್ರನಾಥನು ಯೋಗ ಮಾರ್ಗದಿಂದ ಮುಕ್ತಿಯನ್ನು ಪಡೆಯಲು ನನಗೆ ಉಪದೇಶಿಸಿ ನನ್ನ ಮೋಕ್ಷ ಸಮಯದಲ್ಲಿ ನೀನು ನನ್ನೊಂದಿಗಿರಬೇಕೆಂಬ ಮಹದಾಸೆಯಿಂದ ಹೀಗೆ ಮಾಡಿದೆನೆಂದು ತನ್ನ ಉದ್ದೇಶ ಸಾಧನೆಯನ್ನು ವ್ಯಕ್ತಪಡಿಸಿದನು. ಆಗ ಶಿವನು "ನೀನು ನಿತ್ಯ ಸ್ನಾನಕ್ಕೆ ಹೋಗುತ್ತಿರುವ ಸ್ಥಳದಲ್ಲಿ ಹರಿಯುತ್ತಿರುವ ಪವಿತ್ರವಾದ ಗಂಗೆಯಲ್ಲಿ ಮಂಜು ಕವಿದ ಗುಪ್ತ ನೆಲೆಯೊಳಗೆ ನಾನು ಲಿಂಗರೂಪನಾಗಿ ನಿನಗೆ ಕಾಣಿಸಿಕೊಳ್ಳುವೆನು. ಮುಂದಕ್ಕೆ ನೀನು ನನ್ನನ್ನು 'ನಾಥ' ಎಂದು ಪೂಜಿಸುವಂತವನಾಗು ಎಂದು ಹೇಳಿ ಅದೃಶ್ಯನಾದನು. ಅದರಂತೆಯೇ ಮತ್ಸ್ಯೇಂದ್ರನಾಥನು ಪವಿತ್ರವಾದ ಗಂಗೆಯಲ್ಲಿ ಶಿವನ ಧ್ಯಾನಿಸಿ ಮುಳುಗಿ ಏಳಲು ದಟ್ಟವಾಗಿ ಮುಸುಕು ಕವಿದಿದ್ದ ಮಂಜುವಿನೊಳಗಿಂದ ತನ್ನ ನಾಥನ ದರ್ಶನವಾಯಿತು. ಈ ಪ್ರಕಾರವಾಗಿ ಉದ್ಭವಿಸಿದ ಶಿವನನ್ನು ಮತ್ಸ್ಯೇಂದ್ರನಾಥನು 'ಮಂಜುನಾಥ' ಎಂದು ಸಂಭೋದಿಸಿ ನಿತ್ಯ ಪೂಜಿಸತೊಡಗಿದನು.

ಇತ್ತ ಶಿವನು ಕಾರ್ಯಾರ್ಥವಾಗಿ ಬಂದವರು ಬರಿಗೈಯಲ್ಲಿ ಹಿಂದಿರುಗಬಾರದೆಂದು ಗೋರಕ್ಷನಾಥನಿಗೆ ತನ್ನ ಮಹಿಮಾ ಶಕ್ತಿಯ ಲಿಂಗವೊಂದನ್ನು ಕೊಟ್ಟು ಹರಸಿದನು. ಗೋರಕ್ಷನಾಥನು ಅದನ್ನು ತೆಗೆದುಕೊಂಡು ಕದ್ರಿಗೆ ತಲುಪುವಾಗ ಮೇಲಿನ ಘಟನೆಯು ನಡೆದು ಹೋಗಿದ್ದು, ತಾನು ತಂದ ಲಿಂಗವನ್ನು ಉದ್ಭವ ಲಿಂಗದ ಉತ್ತರಕ್ಕೆ ಮೇಲ್ಗಡೆ ಹರಿಯುವ ಪವಿತ್ರ ಗಂಗೆಯಲ್ಲಿ ಇರಿಸಿದನು ಎನ್ನಲಾಗಿದೆ.[೯] ಈ ಲಿಂಗವು ಮುಂದಕ್ಕೆ ಅಣ್ಣಪ್ಪನಿಂದ ಧರ್ಮಸ್ಥಳಕ್ಕೆ ಒಯ್ಯಲ್ಪಟ್ಟು ವಾದಿರಾಜ

ಸ್ವಾಮಿಗಳಿಂದ ಅಲ್ಲಿ ಪ್ರತಿಷ್ಠಾಪಿಸಲ್ಪಟ್ಟು ಪೂಜಿಸಲಾಯಿತು ಎನ್ನಲಾಗಿದೆ. ಆದರೆ, ಶ್ರೀ ವಾದಿರಾಜ ಸ್ವಾಮಿಗಳು ಧರ್ಮಸ್ಥಳ (ಕುಡುಮೆ)ಕ್ಕೆ ಹೋದಾಗ ಭಿಕ್ಷೆಗೆ ಅನರ್ಹವಾದ ಸ್ಥಳವೆಂದು ಹೇಳಿದುದರಿಂದ ಬೆಳಗಾಗುವುದರೊಳಗೆ ಮಂಜುನಾಥನನ್ನು (ಶಿವಲಿಂಗವನ್ನು) ತಂದು ಪ್ರತಿಷ್ಠಿತ ಶಿವಾಲಯವೆಂದೆನ್ನಿಸಿ ಮಾಧ್ವ ಮತದ ಗುರುಗಳಿಗೆ ಭಿಕ್ಷೆ ಸ್ವೀಕರಿಸುವುದಕ್ಕೆ ಯೋಗ್ಯ ಸ್ಥಳವೆಂದು ಮಾಡಿದರೆಂಬ ಕೇವಲ ಕಲ್ಪನೆಯಾಗಿದೆ. ಇದೆಲ್ಲ ಮಾಧ್ವರಾದ ಅರ್ಚಕ ಬ್ರಾಹ್ಮಣರ ಆತ್ಮ ತೃಪ್ತಿಯ ಕಲ್ಪನೆಗಳೆಂದು ತಿಳಿಯಬೇಕು ಎಂದು ಖ್ಯಾತ ಚಿಂತಕ ಕಡವ ಶಂಭು ಶರ್ಮ ೧೯೭೦ ರಲ್ಲಿ ಪ್ರಕಟಗೊಂಡ 'ತುಳುದೇಶ ಭಾಷಾ ವಿಚಾರ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಶ್ರೀ ಧರ್ಮಸ್ಥಳದ ಅಣ್ಣಪ್ಪ ದೈವ ಕೂಡಾ ಜೋಗಿ ಜನಾಂಗದವನೆಂದು ಖ್ಯಾತ ಸಾಹಿತಿ ಡಾ॥ ಕಯ್ಯಾರ ಕಿಂಞಣ್ಣ ರೈಯವರು ಶ್ರೀ ಸಿದ್ದಗುರು ಸುಂದರನಾಥಾಜೀಯವರ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಮಕರ ಸಂಕ್ರಾಂತಿಯ ಶುಭ ದಿನ ಶ್ರೀ ಶಿವಗೋರಕ್ಷನಾಥರು ತನ್ನ ಗುರುಗಳಾದ ಮತ್ಸ್ಯೇಂದ್ರನಾಥರಿಗೆ ಪ್ರಕಟವಾಗಿ ಶಿವಲಿಂಗದಲ್ಲಿ ಐಕ್ಯರಾದರು ಎನ್ನಲಾಗಿದೆ. ಮುಂದೆ ದೇಶದಲ್ಲೇ ಕದ್ರಿಯು ಮಹತ್ವ ಪೂರ್ಣ ಕ್ಷೇತ್ರವೆಂದು ಪರಿಚಿತಗೊಂಡಿತು. ಮತ್ಸೇಂದ್ರನಾಥರ ಬಳಿಕ ಗೋರಕ್ಷನಾಥರ ಶಿಷ್ಯರಾದ ಚೌರಂಗಿನಾಥರು ಈ ಸ್ಥಳದಲ್ಲಿದ್ದು ಮಂಜುನಾಥನನ್ನು ಪೂಜಿಸತೊಡಗಿದರು. ಅವರು ೧೮ ತರದ ಗಿಡಮೂಲಿಕೆಗಳನ್ನು ಕಂಡು ಹಿಡಿದರು ಎಂಬುವುದು ನಾಥ ಸಂಪ್ರದಾಯದ ಕೃತಿಗಳಲ್ಲಿ ಉಲ್ಲೇಖವಿದೆ.

ಖ್ಯಾತ ಲೇಖಕ ಜೋರ್ಜ್ ವೆಸ್ಟನ್ ಬ್ರಿಗ್ಸ್ ೧೯೩೮ರಲ್ಲಿ ಬರೆದ 'ಗೋರಖ್‌ನಾಥ್ ಎಂಡ್ ದಿ ಖಾನ್‌ಪಟ್ ಯೋಗೀಸ್" ಎಂಬ ಗ್ರಂಥದಲ್ಲಿ ಹಿಂದೂಸ್ಥಾನದಲ್ಲಿ ೧೮೯೧ ನೇ ಇಸವಿಯಲ್ಲಿ ಸುಮಾರು ೨,೧೪,೫೦೦ ಮಂದಿ ನಾಥ ಸಂಪ್ರದಾಯದ ದೀಕ್ಷೆಗೊಳಪಟ್ಟಿದ್ದರು. ಅವರಲ್ಲಿ ದರ್ಶಿನಿ ಯೋಗಿಗಳು ಇದ್ದರೆಂದು, ಅಲ್ಲದೆ ಸುಮಾರು ೫೭ ಯೋಗಿನಿಯರೂ ಇದ್ದು ಈ ಪಂಥವು ಬೆಳೆದು ನಿಂತಂತೆ ಕ್ರಿ.ಶ. ೧೯೧೧ ರಲ್ಲಿ ಸುಮಾರು ೮,೧೪,೩೫೦ ಜೋಗಿಗಳು ಇದ್ದರೆಂದು ತಿಳಿಸಿದ್ದಾನೆ.[೧೭]

ಕಾಲಾನುಕ್ರಮದಲ್ಲಿ ಬೇರೆ ಬೇರೆ ವಂಶದ ಅರಸರು ಬಾರ್ಕೂರಿನಲ್ಲೇ ನೆಲೆಯೂರಿ ಮಂಗಳೂರನ್ನು (ಮಂಗಳಾಪುರ) ಆಳುತ್ತಿದ್ದಾಗ ಮಂಜುನಾಥನ ದೇವಸ್ಥಾನದ ಮೇಲಿನ ಒಂಬತ್ತು ಕೆರೆಗಳು ಅಲೂಪ ರಾಜನ ಆಡಳಿತದ ಕಾಲದಲ್ಲಿ ನಿರ್ಮಿಸಲ್ಪಟ್ಟಿತ್ತು ಎಂದು ನಾಥ ಪಂಥ ಕ್ಷೇತ್ರ ಜೋಗಿಮಠ ಎಂಬ ಕೃತಿಯಲ್ಲಿ ಉಲ್ಲೇಖವಿದೆ. ಅರಸನ ಹೆಸರು ಕಾಲಮಾನ ತಿಳಿದು ಬರುವುದಿಲ್ಲ.

ಶಕವರ್ಷ ೧೩೦೦ ರ ಸಮಯದಲ್ಲಿ ಶ್ರೀ ವೀರ ಹರಿಹರ ಮಹಾರಾಜನು ಶ್ರೀ ಮಂಜುನಾಥನ ನಿತ್ಯ ಸೇವೆಗೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸಿಕೊಡುತ್ತಿದ್ದನು.

ಶಕವರ್ಷ ೧೩೦೫ ನೇಯ ಕ್ಷಯ ಸಂವತ್ಸರದ ಸಂಕ್ರಾಂತಿ ದಿನದಂದು ಮುಂದಕ್ಕೆ ಈ ಸೇವೆಯು ಆಚಂದ್ರಾರ್ಕವಾಗಿ ನಡೆಯಲಿ ಎಂದು ದೇವಸ್ಥಾನದ ಚತುಸ್ಸೀಮೆಗಳನ್ನು ಶಿಲಾಶಾಸನದ ಮೂಲಕ ದಾನ ಬರೆದು ಕೊಟ್ಟನು. ಶಕವರ್ಷ ೧೩೪೫ ನೇಯ ಸಂವತ್ಸರದಲ್ಲಿ ಶ್ರೀ ಪ್ರತಾಪ

ವಿಜಯ ಭೂಪತಿರಾಜರು ರಾಜಾಭ್ಯುದಯಕ್ಕಾಗಿ ಆಯುಷ್ಯಭಿವೃದ್ಧಿಗಾಗಿ ಶ್ರೀ ದುರ್ಗೆಯ ಜಪ ಮಾಡಲು ಶಾಸನ ಬರೆಸಿದನು. ಶಕ ವರ್ಷ ೧೩೭೭ ರಲ್ಲಿ ಆಲೂಪ ವಂಶದ ವಿಟ್ಟರಸವೊಡೆಯರು ಬಾರಕೂರಿನಲ್ಲೇ ಇದ್ದು ಮಂಗಳೂರನ್ನು ಆಳುತ್ತಿರುವ ಕಾಲದಲ್ಲಿ ವೀರ ಪ್ರತಾಪ ಪ್ರಹುಡ ವಿರೂಪಾಕ್ಷ ಮಹಾರಾಜರು ಆಗಮಿಸಿದ ಸಮಯ ಅವರ ಸಮಕ್ಷಮದಲ್ಲಿ ವರ್ತಮಾನ ಮನ್ಮಥ ಸಂವತ್ಸರದ ಶುದ್ಧ ೧ ಗುರುವಾರದಂದು ಶ್ರೀ ಕ್ಷೇತ್ರಕ್ಕೊಳಪಟ್ಟ ಸ್ಥಾನಕ, ರಾವಳಪಳಿಯ, ಗುಣಪಾಣಾಳ್ವ ಮಹಾರಾಜರ ಸೇನಬೊವ, ಗೊಮ್ಮನ ಸೆನಬೊವ, ಹೀಗೆ ನಾಲ್ಕು ಜನ ಸೇರಿ ಆಗಿನ ಕದಲೀ ಶ್ರೀ ಜೋಗಿ ಮಠದ ಪೀಠಾದಿಪತಿಗಳಾಗಿದ್ದ ಮಂಗಲ ನಾಥಜಿಯವರಿಗೆ ಮಂಗಳೂರಿನ ಕೇಂದ್ರ ಕದ್ರಿಯಿಂದ ನಾಲ್ಕು ಸೀಮೆಗಳನ್ನು ವಿಸ್ತರಿಸಿ ಶಿಲಾಶಾಸನದ ಮೂಲಕ ದಾನ ಮಾಡಿದರು. ಮುಂದಕ್ಕೆ ಶ್ರೀ ಮಂಗಲನಾಥಜೀಯವರು ಸೇರಿದಂತೆ ನಾಥಯೋಗಿ ಪರಂಪರೆಯವರೇ ಮಂಗಳೂರಿನ, ಅರಸರಾಗಿರಲಿ ಎಂದು ರಾಜ್ಯಾಭಿಷೇಕವನ್ನೂ ಮಾಡಿಸಿದರು. ಅಂದಿನಿಂದ ಮಂಗಳೂರಿನ ಕದಲೀ ಕ್ಷೇತ್ರದ ನಾಥಪೀಠಕ್ಕೆ 'ರಾಜ' ಯಾ 'ಅರಸು' ಪೀಠ ಎಂದು ಹೆಸರಾಯಿತು.[೧೮]

ಪೌರಾಣಿಕ ಕಥೆಗಳು ಆದಿನಾಥನನ್ನು ಶಿವನೊಂದಿಗೆ ಸಮೀಕರಿಸಿ ಮಾಯಾಶಕ್ತಿ, ಶಾಬರ ಮಂತ್ರ, ಸಿದ್ಧ ವೈದ್ಯ ಪದ್ಧತಿ, ಯೋಗ ಸಾಧನೆಯಂತಹ ಬಹುಮುಖ ಲಕ್ಷಣಗಳನ್ನು ಬೆಸೆದ ನಾಥ ಪಂಥದ ಆಚರಣೆ ಮತ್ತು ಪ್ರಚಾರ ಎಲ್ಲಕ್ಕಿಂತ ಹೆಚ್ಚಾಗಿ ತೀರಾ ಭಿನ್ನವಾಗಿಯೂಮತ್ತು ಆಡುಭಾಷೆಯಲ್ಲಿದ್ದು ಮಾಯವಿದ್ಯೆ, ಮಂತ್ರ ತಂತ್ರಗಳ ಪ್ರಯೋಗ ತಕ್ಷಣ ಫಲ ಕೊಡುವುದನ್ನು ಅರಿತ ಜನರು ಈ ಪಂಥದ ಕಡೆಗೆ ಹೆಚ್ಚು ಹೆಚ್ಚು ಆಕರ್ಷಿತರಾಗುವಂತಾಯಿತು ಎಂದು ತಿಳಿಯುತ್ತದೆ.

ಸಂದರ್ಭ ಸೂಚಿ

1. ಕಡವ ಶಂಭು ಶರ್ಮ. ಕದಲೀ ಮಂಜುನಾಥ ಮಹಾತ್ಮ್ಯೆ, ಕಡವ ಶಂಭು ಶರ್ಮ ಸ್ಮಾರಕ, ಪುತ್ತೂರು 2003, ಪುಟ–9
2. ತರಂಗ ವಾರಪತ್ರಿಕೆ, ಮಣಿಪಾಲ ಟೆಕ್ನಾಲಜೀಸ್ ಲಿಮಿಟೆಡ್, ಹಳೆ ಪಾರ್ಮಸಿ ಕಾಲೇಜಿ ಕಟ್ಟಡ, ಮಣಿಪಾಲ, 2016, ಪುಟ–15
3. ಎಂ. ಗಣಪತಿರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟಕವಿ ಗೋವಿಂದ ಪೈ ಸಂಶೋದನಾ ಕೇಂದ್ರ ಉಡುಪಿ, 1923, ಪುಟ–51
4. ಎಂ. ಗಣಪತಿರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟಕವಿ ಗೋವಿಂದ ಪೈ ಸಂಶೋದನಾ ಕೇಂದ್ರ ಉಡುಪಿ, 1923, ಪುಟ–53
5. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–6
6. ಅದೇ, 2003 ಪುಟ–6
7. ಎಂ. ಗಣಪತಿರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟಕವಿ ಗೋವಿಂದ ಪೈ ಸಂಶೋದನಾ ಕೇಂದ್ರ ಉಡುಪಿ, 1923, ಪುಟ–51
8. ರೆಹಮತ್ ತರೀಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪುಟ–19
9. ರೆಹಮತ್ ತರೀಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪುಟ–20
10. ಅದೇ 2006 ಪುಟ–20
11. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–39
12. ಮಂಜೇಶ್ವರ ಗೋವಿಂದ ಐಗಳ್, ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, 1923 ಪುಟ–55
13. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–5
14. ರೆಹಮತ್ ತರೀಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006, ಪುಟ–18
15. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–13
16. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–15
17. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–16
18. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003 ಪುಟ–17

ಅಧ್ಯಾಯ-೩

ಕರ್ನಾಟಕದಲ್ಲಿ ನಾಥಪಂಥ ಮತ್ತು ಜೋಗಿ ಸಮುದಾಯ

ತುಳುನಾಡಿನ ನಾಥ ಸಂಪ್ರದಾಯದ ಗ್ರಹಸ್ಥ ಜೋಗಿಗಳು ಒಂದು ಭದ್ರ ಬುನಾದಿಯ ಧಾರ್ಮಿಕ ಪರಂಪರೆಯ ಹಿನ್ನಲೆಯಿಂದ ಬಂದವರು. ಈ ಸಮುದಾಯದ ಜನಸಂಖ್ಯೆಯು ಬೇರೆ ಸಮುದಾಯಕ್ಕೆ ಹೋಲಿಸಿದರೆ ತುಂಬಾ ಕಡಿಮೆ. ಹಾಗಾಗಿಯೇ ಸರ್ಕಾರವು ಜಾತಿ ವರ್ಗೀಕರಣ ಪಟ್ಟಿಯಲ್ಲಿ ಈ ಸಮುದಾಯವನ್ನು ಪ್ರವರ್ಗ ೧ ರಲ್ಲಿ ಸೇರ್ಪಡಿಸಿದೆ. ತುಳುನಾಡು ಸೇರಿದಂತೆ ಕರ್ನಾಟಕದಾದ್ಯಂತವಿರುವ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ನಡೆಯುವ ಉತ್ಸವಗಳ ಸಂದರ್ಭದಲ್ಲಿ ಇವರಿಗೆ ವಿಶೇಷ ಗೌರವ ಸಲ್ಲುತ್ತದೆ. ಅಲ್ಲದೆ ಕೆಲವು ಜನಾಂಗದವರು ತಮ್ಮ ಮನೆಗಳಲ್ಲಿ ನಡೆಯುವ ಶುಭ ಕಾರ್ಯಗಳಲ್ಲಿ ಹಿರಿಯ ಜೋಗಿಯೊಬ್ಬರನ್ನು ಮನೆಗೆ ಕರೆದು ಅವರ ಪಾದಪೂಜೆಯನ್ನು ಮಾಡಿ ಫಲತಾಂಬೂಲ ಕೊಟ್ಟು ಆಶೀರ್ವಾದ ಪಡೆಯುವ ಪದ್ಧತಿಯೂ ಇದೆ.

ನಾಥ ಪಂಥೀಯ ಸಮುದಾಯಗಳಾದ ಜೋಗಿಗಳು ಕರ್ನಾಟಕದಾದ್ಯಂತ ಸುಮಾರು ೨ ಲಕ್ಷಕ್ಕೂ ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆಂಬುವುದು ಲೇಖಕರ ಅಭಿಪ್ರಾಯ. ಇವರನ್ನು ಜೋಗಿ, ಜೋಗೇರ, ಬಿಲ್, ಬಿಲ್‌ಜೋಗಿ, ಹಣಗಿ, ಬುವ, ರಾವಲ್‌ಬಿಲ್, ಕಪಾಲಿ, ಬ್ರಹ್ಮ ಕಪಾಲಿ, ಬ್ರಹ್ಮ ಕಪಾಲಿ ಕ್ಷತ್ರಿಯ, ಕಪಾಲಿ ಕ್ಷತ್ರಿಯ, ನಾಥಪಂಥಿ, ನಾಥಪಂಥಿ ಜೋಗಿ, ರಾವಳ, ರಾವಳೀಯ, ರಾವಳ ಜೋಗಿ, ಮಠಪತಿ, ಶಿವಜೋಗಿ, ಬಳೆಗಾರ ಜೋಗಿ, ಕಟ್ಲೇರಿ ಜೋಗೊ, ನೇಕಾರ ಜೋಗಿ, ಮರಾಠಿಜೋಗಿ, ಕಿನ್ನರಿ ಜೋಗಿ ಮುಂತಾದ ಹೆಸರಲ್ಲಿ ಗುರುತಿಸಲಾಗುತ್ತದೆ. ಇವರಲ್ಲಿ ಕಿನ್ನರಿ ಜೋಗಿಗಳಲ್ಲಿ ಹಂಡಿ ಜೋಗಿ, ಮಣಿರ್ಜೋಗಿ, ಎಣ್ಣೆಜೋಗಿ, ಡಬ್ಬಾ ಜೋಗಿ ಮುಂತಾದ ಒಳ ಪಂಗಡಗಳಿವೆ. [೧]

ಕರ್ನಾಟಕ ಸರಕಾರದ ಹಿಂದುಳಿದ ಜಾತಿ ಮೀಸಲಾತಿ ಪಟ್ಟಿಯ ಜೋಗಿ ಎಂಬ ವಿಭಾಗದಲ್ಲಿ ಗಂಟೆ ಜೋಗಿ, ಗೊರವ ಮುಂತಾದ ಉಪಪಂಗಡಗಳಿವೆ. ಕರ್ನಾಟಕದ ಬುಡಕಟ್ಟು ಅಲೆಮಾರಿ, ಅರೆ ಅಲೆಮಾರಿ ಜನ ಸಮುದಾಯದ ಪಟ್ಟಿಯಲ್ಲಿ ಜೋಗಿ, ಜೋಗೆರ್, ಜೋಗತಿನ್, ಸಾನ್‌ಜೋಗಿ, ಬ್ರಹ್ಮಕಪಾಲಿ, ಕಪಾಲಿ ರಾವಲ್, ರವಾಲಿಯಾ, ಸನ್ಯಾಸಿ ಎಂಬಿತ್ಯಾದಿ ಪಂಗಡಗಳನ್ನು ಗುರುತಿಸಲಾಗಿದೆ. ಇವು ಒಂದಲ್ಲಾ ಒಂದು ವಿಧದಲ್ಲಿ ನಾಥ ಪಂಥಕ್ಕೆ ಸೇರಿದ ಸಮುದಾಯಗಳೇ. ಆದರೆ, ಇಲ್ಲಿ ಗಮನಿಸತಕ್ಕ ಸಂಗತಿಯೆಂದರೆ ಬಳ್ಳಾರಿ ಮತ್ತು ಬೆಂಗಳೂರು ಕಡೆ ಇರುವ ಹಂಡಿ ಜೋಗಿಗಳು ತೆಲುಗು ಮೂಲದವರಾಗಿದ್ದು, ಅವರಿಗೂ ನಾಥ ಪಂಥಕ್ಕೂ ಸಂಬಂಧ ಕಂಡು ಬರುವುದಿಲ್ಲ. ಅದಕ್ಕೆ ಕಾರಣ ಇವರಲ್ಲಿ ನಾಥಪಂಥೀಯ ಆಚರಣೆ ಇಲ್ಲದಿರುವುದು. ವಸಾಹತು ಶಾಹಿ ಆಡಳಿತಗಾರರು ಪಂಥೀಯ ಹಿನ್ನಲೆಗಿಂತ ಸಾಮಾಜಿಕ ಸ್ಥಾನ ಮಾನಗಳನ್ನು ಆಧರಿಸಿ ಇವರನ್ನು ಕೆಳಸ್ತರದವರೆಂದು ವಿಂಗಡಿಸಿದರೆ ಹೊರತು. ಅವರ ಧಾರ್ಮಿಕ ಹಾಗೂ ಪಂಥೀಯ ಹಿನ್ನಲೆಯನ್ನು ಗಮಸಲಿಲ್ಲ. ಕೆಲವೆಡೆ ಫಕೀರ ಹಾಗೂ ಜೋಗಿಗಳನ್ನು ಅವರು 'ಡಿಸ್ ರೆಪ್ಯೂಟೆಬಲ್ ವಾಗ್ರಂಟ್ಸ್' ಎಂದು ದಾಖಲಿಸಿಕೊಂಡಿದ್ದರು.[೨] ಫಕೀರ, ದಾಸ ಮುಂತಾದ ಧಾರ್ಮಿಕವಾಗಿ ಭಿಕ್ಷಾಟನೆ ಮಾಡುವ ಬಹುತೇಕ ಗುರುಪಂಥದ ಸಮುದಾಯಗಳಿಗೆ ಈ ಅವಸ್ಥೆಯೇ ಇದೆ.

ಸವದತ್ತಿ ಎಲ್ಲಮ್ಮನ ದೀಕ್ಷೆ ಪಡೆದುಕೊಂಡವರನ್ನು ಜೋಗಪ್ಪ ಎನ್ನಲಾಗುತ್ತದೆ. ಇಂದ್ರಜಾಲ ಮಾಡುವವರನ್ನು ಕೂಡಾ ಜೋಗಿ ಎನ್ನಲಾಗುತ್ತದೆ. ನೇಮಿಚಂದ್ರನ 'ಲೀಲಾವತಿ ಪ್ರಬಂಧ'ದಲ್ಲಿ 'ಮಾಯಾಭುಜಂಗ'ನೆಂಬ ಜೋಗಿಯು, ಅವನ ಜೋಗಿಣಿಯರು ಬರುತ್ತಾರೆ.

ಹಿರೇ ಮಗಳೂರಿನಲ್ಲಿ ಜಡೆಮುನಿ ಎನ್ನಲಾಗುವ ವಿಶಿಷ್ಟ ಮೂರ್ತಿಯಿದೆ. ಈ ಜಡೆಜೋಗಿಗಳು ನಾಥರೇ ಎಂದು ಧೃಡವಾಗಿ ನಿರ್ಧರಿಸಲಾಗುವುದಿಲ್ಲ. ಫಲಾಹಾರ ಮಠದ ಶಾಸನವು (ಕಿ.ಶ. ೧೭೦೨) ಜಡೆ ಜೋಗಿಗಳು ಈ ಮಠದ ಶಿಷ್ಯರು ಎಂದು ಹೇಳುತ್ತದೆ.

ಜಗಳೂರ ಶಾಸನದಲ್ಲಿ (ಕಿ.ಶ.೧೨೭೮) ಒಬ್ಬ ಸಿದ್ಧನನ್ನು 'ಮಹೇಂದ್ರ ಜಾಲ ಪರಮೇಖಳಾದಿ ಪ್ರಪಂಚ ವಿದ್ಯಾಸಿದ್ಧನುಂ' ಎಂದು ವರ್ಣಿಸಿದ್ದಾರೆ. ಟಿಬೇಟಿನ ಪತ್ರ್ಯಗಳಲ್ಲಿ ನಾಥರು ಮಹೇಂದ್ರ ಜಾಲ ಮಾಡುತ್ತಿದ್ದರು ಎಂಬ ದಾಖಲೆಯಿದೆ. ಜನಪದ ಹಾಲುಮತ ಮಹಾಕಾವ್ಯದಲ್ಲಿ ಬರುವ ಗೋರಖನು ತನ್ನ ಶಿಷ್ಯನಿಗೆ ಮಾಟವಿದ್ಯೆ ಕಲಿಸುತ್ತಾನೆ.

ಶಿವಯೋಗಿಯ 'ವಿವೇಕ ಚಿಂತಾಮಣಿ'ಯು ನಾಥರು ಮಾಟಮಂತ್ರದ ವಿದ್ಯೆ ತಿಳಿದವರು ಎನ್ನುತ್ತದೆ. ದರೋಜಿ ಈರಮ್ಮ ಹಾಡಿನ 'ಕೃಷ್ಣಗೊಲ್ಲರ ಮಹಾಕಾವ್ಯ' ದಲ್ಲಿ ಬರುವ ರಾಮಜೋಗಿ ಒಬ್ಬ ಮಾಟಗಾರ.[೩]

ಬೆಂಗಳೂರು, ಹಾಸನ, ಮಂಡ್ಯ, ತುಮಕೂರು, ಚಿತ್ರದುರ್ಗ, ಧಾರವಾಡ, ಬಾಗಲಕೋಟೆ, ಬೆಳಗಾವಿ ಹಾಗೂ ಉಡುಪಿ ಜಿಲ್ಲೆಗಳಲ್ಲಿ; ಕನ್ನಡ ಮಾತನಾಡುವ ಜೋಗಿಗಳು, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತುಳು ಜೋಗಿಗಳು, ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ ಜಿಲ್ಲೆಗಳಲ್ಲಿ ಮರಾಠಿ ಜೋಗಿಗಳು, ಕಾಸರಗೋಡು, ಕುಂಬಳೆ, ಬದಿಯಡ್ಕ ಮುಂತಾದ ಕಡೆಗಳಲ್ಲಿ ಮಳಯಾಳ ಜೋಗಿಗಳು ಇದ್ದಾರೆ. ಸಾಂಸ್ಕೃತಿಕ ದೃಷ್ಟಿಯಿಂದ ಜೋಗಿಗಳನ್ನು ಆಯಾ ಮಠದ ಸೀಮೆಯ ಸಂಪ್ರದಾಯಗಳ ಆಧಾರದಲ್ಲಿ ಚುಂಚನಗಿರಿಯ ಸೀಮೆಯ ಜೋಗಿಗಳು, ಉಡುಪಿ ಸೀಮೆಯ ಜೋಗಿಗಳು, ಕದ್ರಿ ಸೀಮೆಯ ಜೋಗಿಗಳು ಎಂದು ನೋಡುವುದು ಹೆಚ್ಚು ಸೂಕ್ತವಾಗಿದೆ. ಇದರಿಂದಾಗಿ ಆಯಾ ಮಠಗಳ ವ್ಯಾಪ್ತಿಯಲ್ಲೇ ರೂಪುಗೊಂಡ ನಾಥ ಪಂಥದ ಅನನ್ಯತೆಯನ್ನು ಕೂಡಾ ಇಲ್ಲಿ ಗಮನಿಸಬಹುದು.

ಆದಿ ಚುಂಚನಗಿರಿ ಸೀಮೆಯ ಹಳ್ಳಿಗಳಲ್ಲಿ ಕಪಾಲಿಕರು, ಬ್ರಹ್ಮ ಕಪಾಲಿಕರು ಎಂದು ಕರೆಸಿಕೊಳ್ಳುವ ಸಮುದಾಯವಿದೆ. ಊರ ಜನ ಇವರನ್ನು ಜೋಗಿಗಳೆಂದೇ ಕರೆಯುತ್ತಾರೆ. ಇವರಿಗೂ ಲುಂಕೆಮಲೆ ಸೀಮೆಯ ಕಪಾಲಿಕರಿಗೂ ವೈವಾಹಿಕ ಸಂಬಂಧಗಳೇರ್ಪಟ್ಟಿವೆ. ಕದ್ರಿಯ ಜೋಗಿಗಳಲ್ಲೂ ಲುಂಕೆ ಮಲೆಯ ಜೋಗಿಗಳಲ್ಲೂ ನೆಂಟಸ್ತಿಕೆ ಸಂಬಂಧ ನಡೆದಿದೆ. ಲುಂಕೆ ಮಲೆ ಕಪಾಲಿಕರು ಬ್ರಾಹ್ಮಣ ಹಾಗೂ ಮುಸಲ್ಮಾನರನ್ನು ಬಿಟ್ಟು ಕೆಳಜಾತಿಯ ಕೆಲವರಿಗೆ ಜೋಗ ದೀಕ್ಷೆ ಕೊಡುತ್ತಾರೆ. ಬೆಳಗಾವಿ ಬಾಗಲಕೋಟೆ ಜಿಲ್ಲೆಗಳಲ್ಲಿರುವ ರಾವುಳರು ಪಂಡಿಬಡಗನಾಥ ಮಠದ ಶಿಷ್ಯರು. ಈ ಮಠದ ಮೂಲ ಪುರುಷರು ಅಫಘಾನಿಸ್ಥಾನದವರು. ನೇಕಾರಿಕೆ ಇರುವ ಕಡೆ ರಾವುಳರು ಇದ್ದಾರೆ. ರಾವುಳರು ತಮ್ಮನ್ನು ಬ್ರಾಹ್ಮಣರಂತೆ ಗುರುಸ್ಥಾನದಲ್ಲಿರುವವರು ಅಂದುಕೊಂಡಿದ್ದಾರೆ. ಇವರು ಎಲ್ಲಾ ಬಗೆಯ ಜೋಗಿಗಳ ಜತೆ ಸೇರಿಕೊಂಡು ಮಾಡುತ್ತಿರುವ ಸಾಮಾಜಿಕ, ರಾಜಕೀಯ ಸಂಘಟನೆಗಳು ಎಲ್ಲಿ

ಮಹತ್ವ ಮತ್ತು ವೈಶಿಷ್ಟ್ಯಗಳನ್ನು ಕಳೆದುಕೊಳ್ಳುತ್ತದೋ ಎಂಬ ಅಳುಕನ್ನು ಇವರು ಹೊಂದಿರುವಂತೆ ಕಾಣುತ್ತದೆ. ಹಾಗಾಗಿಯೇ ಹುಬ್ಬಳ್ಳಿಯ ಮಧೂರ್‌ಕರ್‌ರ ಜೊತೆ ಇವರು ಜೋಗಿ ಸಮಾಜ ಸುಧಾರಕ ಸಂಘದಲ್ಲಿ ಸೇರಿಕೊಂಡಿಲ್ಲ ಎಂದು ಕಾಣುತ್ತದೆ. [೪]

ಲೇಖಕ ಬ್ರಿಗ್ಸನು ಮುಸ್ಲಿಮರಿಗೂ ನಾಥಪಂಥಕ್ಕೂ ಸೂಫಿಗಳ ಮೂಲಕ ಏರ್ಪಟ್ಟ ಸಂಪರ್ಕ ಕ್ಷೀಣಿಸಲು ಪ್ರಮುಖ ಕಾರಣಗಳೇ ಬ್ರಿಟೀಷ್ ಕಾಲದಲ್ಲಿ ಶುರುವಾದ ಕೋಮುಗಲಭೆ, ದೇಶದ ವಿಭಜನೆ, ಅಯೋಧ್ಯೆಯ ಪ್ರಕರಣ ಮುಂತಾದ ಕಹಿ ಆಘಾತಗಳು ಮುಸ್ಲಿಮರಲ್ಲಿ ನಾಥ ದೀಕ್ಷೆ ಪಡೆಯುವವರ ಸಂಖ್ಯೆ ಕ್ಷೀಣಿಸಲು ಕಾರಣವಾಯಿತು. ಅದರೂ ಕೂಡಾ ನಾಥರ ಆಚರಣೆಯಲ್ಲಿ ಪರೋಕ್ಷವಾಗಿ ಮುಸ್ಲಿಂ ಪ್ರವೇಶ ನಿಂತಿಲ್ಲ. ಮಹಾರಾಷ್ಟ್ರದಲ್ಲಿ ಏಕನಾಥ ಪರಂಪರೆಯಲ್ಲಿ ಶೇಖ್ ಸುಲ್ತಾನ್ ಎಂಬ ನಾಥನಿದ್ದಾನೆ. ಮುಂಬೈಯ ಬೊರಿವೆಲಿ ನಾಥ ಮಠದಲ್ಲಿ ಗುಲಾಭ್‌ನಾಥ್‌ನಿದ್ದಾನೆ. ಉತ್ತರ ಭಾರತದಲ್ಲಿ ನೇಕಾರ 'ಜುಗಿ' ಮುಸ್ಲಿಮರು ನಾಥ ಪಂಥೀಯರು. ರಾಜಸ್ಥಾನದ ಗೋರಕ್ ಟಿಲ್ಲಾ ಎಂಬಲ್ಲಿ 'ಜಾಫರ್ ಪೀರ್' ಎಂಬ ಮುಸ್ಲಿಂ ಯೋಗಿ ಇದ್ದಾನೆ.[೫] ಇವೆಲ್ಲಾ ಧಾರ್ಮಿಕ ಹಾಗೂ ದಾರ್ಶನಿಕ ಸಮುಧಾಯಗಳ ನಡುವೆ ಸಂಬವಿಸಿರುವ ಅನು ಸಂಧಾನಗಳನ್ನು ಸೂಚಿಸುತ್ತದೆ.

ಭಾರತದಲ್ಲಿ ನಾಥ ಪಂಥೀಯ ಸಮುದಾಯಗಳು ಹಲವು ಹೆಸರಿನಲ್ಲಿ ಪಂಗಡ, ಜಾತಿ, ಭಾಷೆ, ವೃತ್ತಿ ಹಾಗೂ ವರ್ಣದ ಆಧಾರದ ಮೇಲೆ ವಿಂಗಡಣೆಯಾಗಿದೆ. ಕರ್ನಾಟಕದಲ್ಲಿಯೂ ಬೇರೆ ಬೇರೆ ಸಮುದಾಯಗಳ ಸಾಮಾಜಿಕ, ಧಾರ್ಮಿಕ ಬದುಕಿನಲ್ಲಿ ನಾಥಪಂಥವು ಬೆಸುಗೆಯಾಗಿದೆ. ದಕ್ಷಿಣಕನ್ನಡ ಜಿಲ್ಲೆಯ ಮೂಲೆ ಮೂಲೆಗಳಲ್ಲೂ ತುಳು ಮನೆಮಾತಿನ ಜೋಗಿಗಳಿದ್ದಾರೆ. ಸರಕಾರಿ ಗಣತಿಯ ಅಂಕಿ ಸಂಖ್ಯೆಗಳ ಇತ್ತೀಚಿಗಿನ ಪರಿಷ್ಕೃತ ಪಟ್ಟಿಯ ಸಿದ್ಧತೆ ಕಾರ್ಯವು ಇನ್ನು ಕೂಡಾ ಅಂತಿಮ ಹಂತದಲ್ಲಿರುವುದರಿಂದಾಗಿ ಈ ಅಧ್ಯಯನದ ಕ್ಷೇತ್ರಕಾರ್ಯದ ಸಂದರ್ಭ ಕರ್ನಾಟಕ ಜೋಗಿ ಸಮಾಜ ಸುಧಾರಕ ಸಂಘದ ಹಿರಿಯ ಮುಂದಾಳುಗಳಾದ ಶ್ರೀ ರಾಮಚಂದ್ರ ಎಂ. ಡಾ। ಕೇಶವನಾಥ ಜೋಗಿ ಹಾಗೂ ಉಡುಪಿಯ ಹರೀಶ್ ಜೋಗಿಯವರಿಂದ ಪಡೆದ ಮಾಹಿತಿ ಪ್ರಕಾರ ಕರಾವಳಿ ಜಿಲ್ಲೆಗಳಲ್ಲಿ ಈ ಸಮೂದಾಯದ ಒಟ್ಟು ಸಂಖ್ಯೆಯು ಸುಮಾರು ಹದಿನೆಂಟು ಸಾವಿರಗಳೆಂದು ಅಂದಾಜಿಸಬಹುದಾಗಿದೆ.

ಕರಾವಳಿಯ ಹಳೇ ತಲೆಮಾರಿನ ಹೆಚ್ಚಿನ ಜೋಗಿಗಳಿಗೆ ಆಧುನಿಕ ವಿದ್ಯಾಭ್ಯಾಸವಿಲ್ಲ. ಆದರೆ, ಹೊಸ ತಲೆಮಾರಿನ ಅನೇಕರು ಸುಶೀಕ್ಷಿತರು. ಉನ್ನತ ಶಿಕ್ಷಣ ಪಡೆದು, ಸಾಮಾಜದ ಬೇರೆ ಬೇರೆ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಅಲ್ಲದೆ ಇವರು ಅನೇಕ ವೃತ್ತಿಗಳಲ್ಲಿ ಹಂಚಿ ಹೋಗಿರುವುದು ಕಂಡು ಬರುತ್ತದೆ.

ಕದ್ರಿ ಜೋಗಿ ಮಠದ ನಾಥನಿಗೆ ಒಂದು ಕಾಲದಲ್ಲಿ ಜೋಗಿ ಸಮುದಾಯದ ಬದುಕಿನಲ್ಲಿ ವ್ಯಾಪಕ ಪಾತ್ರವಿತ್ತು. ಅವನು ತಂಟೆ, ತಕರಾರನ್ನು ಪರಿಹರಿಸುವ ನ್ಯಾಯಾಧೀಶನಾಗಿಯೂ ಕೆಲಸ ಮಾಡುತ್ತಿದ್ದನು. ಆಯಾ ಪ್ರದೇಶದ ಜೋಗಿ ಸಮಾಜದ ಗುರಿಕಾರನನ್ನು ಅರಸನೇ ಆಯ್ಕೆ ಮಾಡುತ್ತಿದ್ದನು. ಗುರಿಕಾರರಿಗೆ ಮಠದ ಉಂಬಳಿಯಿದ್ದಿತು. ಅರಸನು ಸರ್ಕೀಟು ಹೊರಟಾಗ ಮಠದ ಹಿತ್ತಾಳೆ ಬಿಲ್ಲೆಯ ಕೆಂಪು ಅಡ್ಡಪಟ್ಟಿ ಧರಿಸಿ ಮಠದ ಬಿರುದು ಬಾವಲಿ ಛತ್ರಿ ಚಾಮರಗಳನ್ನು ಒಯ್ಯಬೇಕಾಗುತ್ತಿತ್ತು. ಈಗ ಆ ಪದ್ಧತಿಗಳು ಮಾಯವಾಗಿದೆ.[೬]

ಕದ್ರಿ ಸೀಮೆಯ ಜೋಗಿಗಳು ಜೋಗಿ ಸಮಾಜ ಸುಧಾರಕ ಸಂಘ, ಗೋರಕ್ಷನಾಥ ಯುವ ವೇದಿಕೆ, ಕರ್ನಾಟಕ ಜೋಗಿ ಸಮಾಜ ಸಂಘ, ಗೋರಕ್ಷನಾಥ ಯುವ ವೇದಿಕೆ, ಕರ್ನಾಟಕ ಜೋಗಿ ಸಮಾಜ ಮಹಿಳಾ ಘಟಕ, ನಾಥ ಸಂಪ್ರದಾಯ ಪ್ರಚಾರ ಸಮಿತಿ ಮುಂತಾದ ಸಂಘಟನೆಗಳನ್ನು ಕಟ್ಟಿಕೊಂಡಿದ್ದಾರೆ. ಬಹಳ ಹಿಂದೆಯೇ ಆಧುನಿಕ ಶಿಕ್ಷಣ ಮತ್ತು ವಾಣಿಜ್ಯ ಸಂಸ್ಕೃತಿಗೆ ಮಂಗಳೂರು ನಗರವು ತೆರೆದುಕೊಂಡಿದ್ದರ ಫಲವಾಗಿ ಇಲ್ಲಿರುವ ಹೆಚ್ಚಿನ ಜೋಗಿಗಳು ಶೈಕ್ಷಣಿಕ, ಆರ್ಥಿಕವಾಗಿ ಮುಂದುವರಿದಿದ್ದಾರೆ.

ಉಡುಪಿ ಜಿಲ್ಲೆಯ ಹಲವರಿ ಮಠಕ್ಕೆ ನಡೆದುಕೊಳ್ಳುವ ಬಳೆಗಾರ ಜೋಗಿಗಳು ಕಾಪು, ಕುಂದಾಪುರ, ಉದ್ಯಾವರ, ಮೆಕ್ಕೆಕಟ್ಟೆ, ಕೋಟ, ಬಸರೂರು, ಬಾರಕೂರು, ಕೋಟೇಶ್ವರ, ಬೈದೆಬೆಟ್ಟು, ಕೌಡೂರು, ಕಮಲಶಿಲೆ, ಅಜೆಕಾರು, ಮಂದಾರ್ತಿ, ಮಿಜಾರು, ಕಂಡ್ಲೂರು ಮುಂತಾದ ಕಡೆ ನೆಲೆಸಿದ್ದಾರೆ. ಬಳೆ ವ್ಯಾಪರ ಹೊರತು ಪಡಿಸಿ ಇವರಿಗೆ ಅನ್ಯ ವೃತ್ತಿ ಎಂಬುವುದು ಇರಲಿಲ್ಲ ಇಂದಿಗೂ ಇವರು ಬಳೆಯ ಮಲಾರ ಹೊತ್ತುಕೊಂಡು ಹಳ್ಳಿ ಹಳ್ಳಿಗಲ್ಲಿ ತಿರುಗಾಡುವುದು ಕಾಣುತ್ತದೆ. ಇವರು ಶೈಕ್ಷಣಿಕವಾಗಿ ಹೆಚ್ಚು ತೆರೆದುಕೊಳ್ಳದೆ, ಅನ್ಯವೃತ್ತಿಯಲ್ಲೂ ತೊಡಿಸಿಕೊಳ್ಳಲಾಗದೆ ಬಳೆ ವ್ಯಾಪಾರವನ್ನೇ ನಂಬಿ ಬದುಕಬೇಕಾದ ಪರಿಸ್ಥಿತಿ ಇವರಲ್ಲಿ ಇದ್ದುದುರಿಂದಾಗಿಯೇ ಇವರು ತುಳು ಜೋಗಿಗಳಿಗೆ ಹೋಲಿಸಿದರೆ ಆರ್ಥಿಕವಾಗಿ ಅಷ್ಟು ಪ್ರಬಲರಲ್ಲ ಎಂದು ತಿಳಿಯುತ್ತದೆ. ಹಿಂದಿನ ಕಾಲದಲಿ ಬಳೆಗಾರ ಸಮುದಾಯವೊಂದು ಸಂಪೂರ್ಣವಾಗಿ ನಾಥ ಮತಕ್ಕೆ ಪಂಥಾಂತರವಾಗಿರುವ ಸಾದ್ಯತೆಯನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ತ್ರ್ಯಯಂಬಕೇಶ್ವರದಿಂದ ಝುಂಡಿಯು ಘಟ್ಟವಿಳಿದು ಕರಾವಳಿಗೆ ಬರುವಾಗ ಮೊದಲ ಸ್ವಾಗತವೇ ಬಳೆಗಾರ ಜೋಗಿಗಳದ್ದು. ಹಲವರಿಯಲ್ಲದೆ ಬಾರಕೂರಿನ ಸದಾನಂದ ಮಠ ಕೂಡಾ ಬಳೆಗಾರರದ್ದು. ಅವರ ಕೆಲವು ಮಠಗಳು ಪಾಳು ಬಿದ್ದಿದ್ದವು.

ಕರಾವಳಿಯಲ್ಲಿ ಕಿನ್ನರಿ ಜೋಗಿಗಳು ಕಾಣ ಸಿಗುವುದು ತೀರಾ ವಿರಳ. ಇವರು ಚಂದ್ರಗುತ್ತಿ ಮತ್ತು ಲುಂಕೆಮಲೆಯ ನಾಥ ಮಠದ ಶಿಷ್ಯರು. ಇವರ ಮನೆ ಮಾತು ಮರಾಠಿ. ಇವರು ಭಿಕ್ಷಾಟನೆಯಿಂದ ಜೀವನ ಮಾಡಲು ಹಿಂದೆ ಮಠದ ಅಧಿಕಾರ ಪತ್ರ ಅನಿವಾರ್ಯವಾಗಿತ್ತು. ಸಾಮಾಜಿಕವಾಗಿ ಕೆಳಸ್ಥರದಲ್ಲಿರುವ ತೀರಾ ಹಿಂದುಳಿದ ಕಿನ್ನರಿಯರು ತಮ್ಮನ್ನು ಹಂಡಿ ಜೋಗಿಗಳೆಂದು ಕರೆಸಿಕೊಳ್ಳಲು ಬಯಸುತ್ತಾರೆ. ಇದು ಅವರ ಸಂಪ್ರದಾಯಿಕ ಹೆಸರಲ್ಲದಿದ್ದರೂ ಸರಕಾರಿ ಮೀಸಲಾತಿಗಾಗಿ ಪ್ರಮಾಣ ಪತ್ರ ಪಡೆದು ಸವಲತ್ತುಗಳನ್ನು ಗಿಟ್ಟಿಸಿಕೊಳ್ಳಲು ಅವರು ಹೀಗೆ ಮಾಡುತ್ತಾರೆ.[೬] ಇವರಲ್ಲಿ ಹೆಚ್ಚಿನವರು ಪೊಲೀಸ್ ಹಾಗೂ ಶಿಕ್ಷಕರಾಗಿ ನೌಕರಿ ಮಾಡಿಕೊಂಡಿದ್ದಾರೆ. ಇವರು ವಾದ್ಯ ನುಡಿಸುವ ಕಾರಣ ಇವರಲ್ಲಿ ಸಹಜವಾದ ಸಂಗೀತ ನಾಟಕ ಕಲೆಯೂ ಕಂಡು ಬರುತ್ತದೆ.

ಒಕ್ಕಲಿಗರು ಹಾಗೂ ಅವರ ಶಿಷ್ಯರಾಗಿರುವ ಚುಂಚನಗಿರಿ ಮಠವು ಕೂಡಾ ನಾಥಪಂಥಕ್ಕೆ ಬಹಳ ಮುಖ್ಯವಾಗಿತ್ತು. ಚುಂಚನಗಿರಿ ಒಕ್ಕಲಿಗರಲ್ಲಿ ಪರದೇಶಿ ಗೌಡ, ಜೋಗಿ ಗೌಡ ಎಂಬ ಹೆಸರುಗಳು ಕಂಡು ಬರುತ್ತದೆ. ಇದು ನಾಥ ಯೋಗಿಗಳಿಗೆ ಜನರು ಪ್ರೀತಿಯಿಂದ ಇಟ್ಟ ಹೆಸರು. ಇವರ ಶವ ಸಂಸ್ಕಾರದಲ್ಲಿ ನಾಥರ ಆಚರಣೆಗಳು ಕಂಡು ಬರುತ್ತದೆ.

ಕರ್ನಾಟಕದ ಕುರುಬರು ಪ್ರಧಾನವಾಗಿ ಶೈವರು. ಹಾಲು ಮತ ಪುರಾಣದಲ್ಲಿ ಇರುವ ಐತಿಹ್ಯದಂತೆ ಶಿವಪಾರ್ವತಿಯರು ಕುರಿ ಕಾಯುವ ಕೆಲಸಕ್ಕಾಗಿ ಇವರನ್ನು ಸೃಷ್ಟಿಸುತ್ತಾರೆ. ಕುರುಬರು ಭೈರವಾರಾಧಕರು. ಕುರುಬರ ಬೀರೇಶ್ವರನು ಕೈಲಾಸಕ್ಕೆ ತೆರಳಿದ ಭಾನುವಾರ ಇವರಿಗೆ ಪವಿತ್ರ, ನಾಥರಿಗೂ ಈ ದಿನ ಪವಿತ್ರ, ಕುರುಬರಿಗೂ ಸಿದ್ಧ ಪಂಥಕ್ಕೂ ಬಿಡಿಸಲಾಗದ ನಂಟಿದೆ. ಆದರೆ, ಕುರುಬರಲ್ಲಿರುವ ಸಿದ್ಧ ಸಂಪ್ರದಾಯವು ನಾಥವಲ್ಲ. ಕುರುಬರ ರೇವಣ ಸಿದ್ಧನು ಕೊಲ್ಲಾಪುರದಲ್ಲಿ ಗೋರಖನೊಡನೆ ಸಂಘರ್ಷ ಮಾಡುವ ಉಲ್ಲೇಖ. ಇಷ್ಟರ ಮೇಲೂ ಕುರುಬರಿಗೆ ನಾಥರೊಂದಿಗಿನ

ಸಂಬಂಧವೆಂದರೆ ರೇವಣ ಸಿದ್ದನು ಚೌರಾಸಿ ನಾಥರಲ್ಲಿ ಒಬ್ಬನಾಗಿ ಬರುವುದು. ಕುರುಬರ ನಾಯಕ ಬಿಲ್ಲಾಳ ಶಾಮರಾಯ ಗೋರಕನಿಂದ ಬಾವನ್ನ ವಿದ್ಯೆ ಕಲಿಯುವುದು.[೮] ಇದು ಬೈರವ ಹಾಗೂ ಬೀರಪ್ಪನ ನಡುವಿನ ಸಾಮ್ಯಗಳು. ಮತ್ತೊಂದು ವಿಚಾರವೆಂದರೆ ಹಿಂದೆ ಕದ್ರಿ ಜೋಗಿ ಮಠಕ್ಕೆ ಅರಸನಾಗಿ ಬಂದವರು ಸಂಧ್ಯಾನಾಥಜೀಯವರು. ಪಶುಪಾಲಕ ಸಮುದಾಯ ಹಿನ್ನಲೆಯಿಂದ ಬಂದಿರುವ ಇವರ ಪಟ್ಟಾಭಿಷೇಕದ ಸಂದರ್ಭ ಕುರಿಯ ಉಣ್ಣೆಯಿಂದ ತಯಾರಿಸಿದ ದಾರದ ತಲೆಯುಡಿಯನ್ನು ಇವರಿಗೆ ತೊಡಿಸಲಾಗಿತ್ತು. ನಾಥರು ಪೂಜಿಸುವ ಪಾತ್ರದೇವತೆಯ ಕಂಠಕ್ಕೂ ಕುರಿದಾರ ಸುತ್ತಲಾಗಿತ್ತು. ನಾಥ ಪಂಥೀಯರಲ್ಲಿ ಕುರಿದಾರಕ್ಕೆ ಬಹಳ ಮಹತ್ವವಿದೆ. ನಾಥರು ದೀಕ್ಷೆಯಲ್ಲಿ ಬಳಸುವ ದಾರ ಕುರಿ ಉಣ್ಣೆಯಿಂದಲೇ ಮಾಡಿರಬೇಕು. ಇದು ಶಿವನು ಬ್ರಹ್ಮಹತ್ಯೆಯ ದೋಷದಿಂದ ಪಾರಾಗಲು ಕೂದಲ ಜನಿವಾರ ಧರಿಸಿ ಕಪಾಲ ಮೋಕ್ಷಕ್ಕಾಗಿ ತೀರ್ಥಯಾತ್ರೆ ಹೊರಟ ಸನ್ನಿವೇಶವನ್ನು ಪ್ರತಿಬಿಂಬಿಸುತ್ತದೆ.

ಭಾರತದ ತುಂಬ ಬೆಸ್ತರಿಗೂ ನಾಥ ಪಂಥಕ್ಕೂ ಸಂಬಂಧಗಳಿವೆ. ಶಿವನ ಶಿಷ್ಯನಾದ ಮತ್ಸ್ಯೇಂದ್ರನು ಗಂಗೆಯ ಮಕ್ಕಳಾದ ಬೆಸ್ತರಿಗೆ ಸಾಂಸ್ಕೃತಿಕ ನಾಯಕ.

ಮಂಗಳೂರಿನ ಸಾರಸತ್ವ ಬ್ರಾಹ್ಮಣರಲ್ಲಿ ಕೆಲವರು ಸ್ವಇಚ್ಛೆಯಿಂದ ಕದ್ರಿ ಜೋಗಿ ಮಠದ ಭಕ್ತರಾಗಿದ್ದಾರೆ. ಅವರಲ್ಲಿ ಖ್ಯಾತ ಉದ್ಯಮಿ ಪುತ್ತು ವೈಕುಂಠ ಶೇಟ್ ಕೂಡಾ ಒಬ್ಬರು. ಶೇಟ್‌ರವರು ಬೀಡಿ ಉದ್ಯಮ ಶುರು ಮಾಡಲು ಅಂದು ಕದ್ರಿ ಮಠದ ಪೀಠಾದಿಪತಿಗಳಾಗಿದ್ದ ಶ್ರೀ ಸುಂದರ ನಾಥಜೀ (೧೯೦೮-೧೯೨೧) ಪ್ರೇರಣೆ ನೀಡಿದರೆಂಬ ಉಲ್ಲೇಖವಿದೆ. ಜೋಗಿ ಮಠದಲ್ಲಿರುವ ಒಂದು ಹಳೆಯ ಕಾಲದ ಫೋಟೋದಲ್ಲಿ ಜೋಗಿ ಚಮೇಲಿನಾಥರು ಹಾಗೂ ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಅವರ ಜೊತೆ ಪಿ.ವಿ. ಶೇಟ್‌ರವರು ಕೂಡಾ ಇದ್ದಾರೆ. ನಾಥ ಪಂಥ ಕ್ಷೇತ್ರ ಜೋಗಿಮಠದಲ್ಲಿ ಉಲ್ಲೇಖವಿದೆ. ಬೀಡಿ ಉದ್ಯಮದಲ್ಲಿ ಶೇಟ್‌ರವರು ದೊಡ್ಡ ಸಾಧನೆ ಮಾಡಲು ಅಂದು ಸುಂದರನಾಥರು ಅವರಿಗೆ ಕೊಟ್ಟ ಒಂದು ಬೀಡಿಯ ಎಲೆಯೇ ಕಾರಣವಾಯಿತಂತೆ. ನಾಥರಿಗೆ ತಂಬಾಕು ಸೇದುವ ಹವ್ಯಾಸವಿರುವುದರಿಂದ ಪುತ್ತು ಶೇಟರ ಸಂಪರ್ಕ ಕದ್ರಿ ಮಠದ ಜೊತೆಗೆ ಆಗಿರಬಹುದೆಂದು ತಿಳಿಯುತ್ತದೆ. ಇಂದಿಗೂ ಈ ಮಠಕ್ಕೆ ಬರುವ ರಾಜಸ್ಥಾನಿ ಭಕ್ತರು ತಂಬಾಕು, ಗಾಂಜಾ ತಂದು ಅರಸರಿಗೆ ಭಕ್ತಿಯಿಂದ ಅರ್ಪಿಸುತ್ತಾರೆ. ಪಿ.ವಿ. ಶೇಟ್‌ರವರು ಕದ್ರಿ ದೇವಸ್ಥಾನದ ಕೆರೆಗಳ ಮೇಲಿನ ಭಾಗದಲ್ಲಿ ಸಂಚಾರಿ ನಾಥರು ತಂಗಲು ಅನುಕೂಲವಾಗುವಂತೆ ಛತ್ರ ಕಟ್ಟಿಸಿಕೊಟ್ಟರು. ಅರಸರ ಕಟ್ಟೆ ನಿರ್ಮಿಸಿದರು, ತಮ್ಮ ವಾಸದ ಮನೆಯ, ಅಂಗಳದ ತೋಟದಲ್ಲಿ ಸುಂದರನಾಥಜೀಯವರ ಪ್ರತಿಮೆಯನ್ನು ಸ್ಥಾಪಿಸಿದರು. ಇಂದಿಗೂ ಬಾರಹಾ ಪಂಥದ ಝುಂಡಿ ಬರುವಾಗ ಕೊಡಿಯಲ್‌ಬೈಲ್ ಬಳಿಯಿರುವ ಅಶ್ವತಕಟ್ಟೆಯಲ್ಲಿ ಅವರನ್ನು ಸ್ವಾಗತಿಸಿ ಪಾನಕ ನೀಡುವ ಪದ್ಧತಿ ಸಾರಸತ್ವ ಬ್ರಾಹ್ಮಣ ಬಾಂಧವರದಾಗಿದೆ.

ಕರ್ನಾಟಕದಲ್ಲಿರುವ ರಾಜಸ್ಥಾನೀ ಮೂಲದ ಮಾರ್ವಾಡಿಗಳು ಶ್ವೇತಾಂಬರ ಜೈನರು. ರಾಜಸ್ಥಾನದ ನಾಕೋಡ್‌ನಲ್ಲಿ ಇರುವ ಬೈರವನಾಥನು ಇವರ ಮನೆದೈವ. ರುಂಡ ಮಾಲೆ ಧರಿಸಿರುವ ಉಗ್ರದೈವವಾದ ಬೈರವನನ್ನು ಅಹಿಂಸಾ ಮಾರ್ಗಿಗಳಾದ ಜೈನರು ಪೂಜಿಸುವುದು ವಿಚಿತ್ರವಾಗಿದೆ. ನಾಕೋಡ

ಬೈರುನಾಥನಿಗೆ ನಾಯಿ, ರುಂಡಮಾಲೆ, ನಗ್ನರೂಪ ತೆಗೆದು ಶಿಷ್ಟಗೊಳಿಸಲಾಗಿದೆ. ಆದರೆ, ಕಪಾಲಪಾತ್ರೆ, ಕತ್ತಿ, ತ್ರಿಶೂಲಗಳಿವೆ.[೯]

ಹಿಂದೆ ಮಂಗಳೂರಿನಲ್ಲಿ ಜವುಳಿ ವ್ಯಾಪಾರ ಮಾಡುತ್ತಿದ್ದ, ಸಿಂಧ್ ಪ್ರಾಂತ್ಯದ ಗೋಕುಲದಾಸ್ ಎಂಬವರು ಕದ್ರಿ ಜೋಗಿ ಮಠದ ಶಿಷ್ಯರಾಗಿದ್ದರು. ಅವರು ಕದಲೀ ಮಂಜುನಾಥ ಮಹಾತ್ಮೆಯನ್ನು ಆ ಕಾಲಕ್ಕೆ ಮೂವತ್ತು ಸಾವಿರ ರೂಪಾಯಿ ವ್ಯಯಿಸಿ ಮಾಡಿದ್ದರಂತೆ. ತಮ್ಮ ಅಂಗಡಿಯಲ್ಲಿ ವ್ಯಾಪಾರ ಮಾಡಿದವರಿಗೆಲ್ಲ ಅವರು ಈ ಕೃತಿಯ ಪ್ರತಿ ಹಂಚುತ್ತಿದ್ದರು ಎನ್ನಲಾಗಿದೆ. ಕರ್ನಾಟಕದ ಮಠಗಳಿಗೆ ರಾಜಸ್ಥಾನದ ನಾಥರೇ ಹೆಚ್ಚು ನೇಮಕವಾಗುತ್ತಲಿದ್ದಾರೆ. ರಾಜಸ್ಥಾದ ಶ್ರೀ ಬಪ್ಪಾರಾವಳರು ಶ್ರೀ ಗೋರಕ್ಷನಾಥರಆಶೀರ್ವಾದದಿಂದ ಮೇವಾಡದ ರಾಜ್ಯವನ್ನು ಕಟ್ಟಿದರೆಂಬ ಉಲ್ಲೇಖವಿದೆ. ರಾಜಸ್ಥಾನದ ರಾಜ ಮಾನಸಿಂಗನು ಗುರುದಕ್ಷಿಣೆಯಾಗಿ ಕಾಶಿಯಲ್ಲಿ ಗೋರಕಟಿಲ್ಲಾವನ್ನು ಅರಮನೆ ರೂಪದಲ್ಲಿ ಕಟ್ಟಿಸಿ ಅಲ್ಲಿ ನಾಥ ಯೋಗಿಗಳ ನೇತೃತ್ವದಲ್ಲಿ ಸಂಸ್ಕೃತ ಪಾಠಶಾಲೆ ಆರಂಭಿಸಿದನೆಂದು ಹೇಳಲಾಗಿದೆ.[೧೦]

ಹಿಂದಿನ ಅವಧಿಯಲ್ಲಿ ಕದ್ರಿ ಯೋಗಿಶ್ವರ ಮಠಕ್ಕೆ ಅಧಿಪತಿಯಾಗಿದ್ದವರು ರಾಜಸ್ಥಾನ ಮೂಲದ ಸಂಧ್ಯಾನಾಥಜೀಯವರು. ಅವರಿಗಿಂತ ಹಿಂದೆ ಇಲ್ಲಿ ಇದ್ದು ಅಧಿಕಾರ ಮಾಡಿ ಹೋದ ಮೋಹನನಾಥ್‌ಜೀ ಕಪಲಾನಿಯೂ. ರಾಜಸ್ಥಾನದವರ ವಿಶೇಷವೆಂದರೆ, ಈಗ ಬಂದಿರುವ ರಾಜ ನಿರ್ಮಲಾನಾಥರು ಕೂಡಾ ಅಲ್ಲಿಯವರೇ. ಮೋಹನ್ ನಾಥಜೀ, ಹಾಗೂ ಸಂಧ್ಯಾನಾಥ್‌ಜೀಯವರ ಕಾಲದಲ್ಲೇ ಇಲ್ಲಿನ ಜೋಗಿ ಮಠ ಪೂರ್ತಿ ರಾಜಸ್ಥಾನೀ ಭಕ್ತರಿಂದಲೇ ತುಂಬಿ ಹೋಗಿತ್ತು.

ಕರ್ನಾಟಕದ ನಾಥ ಮಠಗಳಲ್ಲಿ ಬಹು ಮಟ್ಟಿಗೆ ಆಡಳಿತ ಭಾಷೆ ಹಿಂದಿ. ನಾಥರಿಗೆ ಸಂಬಂಧಿಸಿದ ಕೆಲವು ಶಾಸನಗಳು ಹಿಂದಿಯಲ್ಲಿದೆ. ಆದರೆ, ನಾಥ ಮಠಗಳ ಪರಿಸರದಲ್ಲಿ ಹಿಂದಿಯಿಲ್ಲ. ಕದಿ ಮತ್ತು ವಿಟ್ಲ ಜೋಗಿ ಮಠಗಳಲ್ಲಿ ತುಳು, ಕನ್ನಡ, ಮಲಯಾಳವಿದೆ. ಹಂಡಿ ಬಡಗದಲ್ಲಿ ಕನ್ನಡ, ಮರಾಠಿ ಲುಂಕೆ ಮಲೆಯಲ್ಲಿ ಕನ್ನಡ ಮತ್ತು ತೆಲುಗು ಇದೆ. ಬಹುಶ ಕನ್ನಡ ಮಾತ್ರ ಇರುವ ಮಠವೆಂದರೆ ಅದು ಹಲವರಿ ಮಠ ಮಾತ್ರ. ಹೀಗಾಗಿ ನಾಥ ಮಠಗಳಲ್ಲಿ ಹಿಂದಿ, ಮರಾಠಿಗಳು, ದ್ರಾವಿಡ ಭಾಷೆಗಳಾದ ತುಳು, ಕನ್ನಡ, ತೆಲುಗುಗಳ ಜೊತೆ ಬೆರೆಯುವ ಪ್ರಕ್ರಿಯೆ ಇದೆ.

ಕದ್ರಿ, ಹಾಗೂ ವಿಟ್ಲ, ಮಠಗಳಲ್ಲಿ ಸಾಕಷ್ಟು ತುಳುವೀಕರಣವಾಗಿದೆ. ಆದರೂ ಕೂಡಾ ಅಲ್ಲಿ ಹಿಂದಿಯಿದೆ. ಹನ್ನೆರಡು ವರುಷಕ್ಕೊಮ್ಮೆ ಬರುವ ನಾಥರು ತಮಗೆ ಅವಕಾಶವಿದ್ದರೂ ಹೆಚ್ಚಿನ ಸಮಯ ಸ್ಥಳೀಯ ಭಾಷೆ ಕಲಿಯುವ ಗೋಜಿಗೆ ಹೋಗುವುದಿಲ್ಲ. ಹಿಂದಿಯು ಅವರಿಗೆ ಅನಿವಾರ್ಯ. ಅಲ್ಲದೆ ನಾವು ನಿಮಗಿಂತ ಭಿನ್ನರು, ನಿಮ್ಮ ಅಧಿಕಾರಿಗಳು ಎಂಬ ಯಜಮಾನಿಕೆ ಪ್ರದರ್ಶನ ಸ್ವಲ್ಪ ಮಟ್ಟಿಗೆ ಇಲ್ಲಿ ಕೆಲಸ ಮಾಡಿದಂತೆ ತೋರುತ್ತದೆ. ಆದರೆ, ಈ ಹಿಂದಿದ್ದ ವಿಟ್ಲದ ಲೀಲಾನಾಥರು ಮತ್ತು ಹಲವರಿಯ ಸೋಮನಾಥರು ಕನ್ನಡವನ್ನು ಮಾತನಾಡಲು ಕಲಿತ್ತಿದ್ದರು.

ಸ್ಥಳೀಯ ಭಾಷೆ ತಿಳಿದುಕೊಳ್ಳುವುದೆಂದರೆ ಅಲ್ಲಿನ ಪರಿಸರದ ಭಾಗವಾಗುವುದು ಎಂದರ್ಥ. ಸ್ಥಳೀಕರಣ ಪ್ರಕ್ರಿಯೆ ಭಾಷಾ ಬಳಕೆಗೆ ನಿಲ್ಲುವುದಿಲ್ಲ. ಇಲ್ಲಿನ ಜನರ ಮಟ್ಟಿಗೆ ಈ ಭಾಷೆಗಳು ದೊಡ್ಡ ತೊಡಕಾದಂತೆ ಕಾಣಿಸುತ್ತಿಲ್ಲ. ಆದರೆ, ಭಾಷೆಗಳು ನಾಥ ಪಂಥರ ರೂಪಾಂತರದಲ್ಲಿ ತಮ್ಮದೇ

ಆಟ ಆಡಿವೆ, ಹಾಗಾಗಿ ಈ ಪಂಥದ ಅಧ್ಯಯನಕ್ಕೆ ಕನ್ನಡವೊಂದೇ ಸಾಲದು ಬದಲಾಗಿ ಸಂಸ್ಕೃತ, ತುಳು, ಮಳಯಾಳ, ಮರಾಠಿ, ಹಿಂದಿ, ಉರ್ದು ಮತ್ತು ಫಾರಸಿ ಭಾಷೆಗಳನ್ನು ಕೂಡಾ ಕಲಿತುಕೊಂಡು ಸಾಹಿತ್ಯ ಹಾಗೂ ದಾಖಲೆಗಳನ್ನು ತಿಳಿಯಬೇಕಾದ ಅನಿವಾರ್ಯತೆ ಇದೆ.

೧೯೩೮ ರಲ್ಲಿ ಪ್ರಕಟವಾದ 'ಜಾರ್ಜ್ ವೆಸ್ಟನ್ ಬ್ರಿಗ್ಸ್' ರವರ ಪುಸ್ತಕದಲ್ಲಿ ನಾಥ ಪಂಥದ ಶ್ರೇಷ್ಠ ಗುರು ಮತ್ಸ್ಯೇಂದ್ರನಾಥರು ಪ್ರಥಮವಾಗಿ 'ಶೀಂಫಾಲ್' ಎಂಬಲ್ಲಿ ನೇಮಿನಾಥ ಮತ್ತು ಪಾರ್ಶ್ವನಾಥರೆಂಬ ಇಬ್ಬರು ಪುತ್ರರಿಗೆ ಜನ್ಮ ನೀಡಿದರು. ಮುಂದಕ್ಕೆ ಇವರೀರ್ವರು ಜೈನಧರ್ಮಾವಲಂಬಿಗಳಾದರು. ಮತ್ತು ಮುಂಬೈಯ ಪ್ಯಾಡೂನಿ ಎಂಬಲ್ಲಿ ಘೋರಾಜನಾಥ್‌ರವರ ಮೂರ್ತಿಯಿರುವ ನಾಥ ಮಠದಲ್ಲಿ ನೆಲೆಸಿದರು ಎಂಬುದಾಗಿ ಉಲ್ಲೇಖವಿದೆ. [೧೧] ಈ ವಿಚಾರವನ್ನು ಗಮನಿಸಿದಾಗ ಜೋಗಿ ಜನಾಂಗವು ಶ್ರೇಷ್ಠ ಸಿದ್ಧ ಪುರುಷರ ವಂಶವೆಂದು ತಿಳಿಯುತ್ತದೆ. ಇವರು ಜೀವನಾಧಾರಕ್ಕಾಗಿ ಕೈ ಕಸಬು ಮಾಡುತ್ತಾ ಜನಸಂಖ್ಯೆ ಹೆಚ್ಚಾದಂತೆ ಶಿಕ್ಷಣ ಮತ್ತು ವಾಣಿಜ್ಯ ವ್ಯವಹಾರಗಳಿಗೆ ತೆರೆದುಕೊಂಡು ನಗರಗಳಿಗೆ ಹೆಚ್ಚೆಚ್ಚು ಆಕರ್ಷಿತರಾದ ಇವರು ಕೃಷಿ, ಹೈನುಗಾರಿಕೆ, ಗುಡಿಕೈಗಾರಿಕೆಯಿಂದ ಸ್ವಲ್ಪ ಮಟ್ಟಿಗೆ ಈಚೆಗೆ ಬಂದರು ಎಂದು ತಿಳಿಯುತ್ತದೆ.

ಜೋಗಿ ಜನಾಂಗವು ನಾಥ ಯೋಗಿಗಳ ಪರಂಪರೆಯವರು ಎಂಬುವುದಕ್ಕೆ ಐತಿಹ್ಯವೊಂದಿದೆ. ಹಿಂದೊಮ್ಮೆ ನಾಥ ಸಂಪ್ರದಾಯಸ್ಥನಾದ ಗ್ರಹಸ್ಥ ಅರಸನೊಬ್ಬ ತನಗೆ ಸಂತಾನ ಭಾಗ್ಯ ಕರುಣಿಸಿದರೆ ಕಾಶೀ ಯಾತ್ರೆ ಕೈಗೊಳ್ಳುವೆನೆಂಬ ಹರಕೆ ಹೊತ್ತ. ಬೇಡಿಕೆಯಂತೆ ಕಾಶೀ ವಿಶ್ವನಾಥನು ಅರಸನಿಗೆ ನಾಲ್ಕು ಮಕ್ಕಳನ್ನು ಕರುಣಿಸಿದ. ಆದರೆ, ಮುಂದಕ್ಕೆ ಅರಸ ಹರಕೆ ತೀರಿಸದೆ ಮರಣ ಹೊಂದಿದ. ಹರಕೆ ತೀರಿಸದ ದೋಷವು ಮಕ್ಕಳ ಮೇಲೆ ಕಂಡು ಬಂತು. ನಾಲ್ವರು ಮಕ್ಕಳು ಜೊತೆ ಸೇರಿ ಹರಕೆ ತೀರಿಸಲೆಂದು ನಿಶ್ಚಯಿಸಿ ಕೊಡಗಿನ ತಲಕಾವೇರಿಗೆ ಹೊರಟರು. ಹೀಗೆ ಹೊರಟವರು ಸುಳ್ಯದ 'ತೊಡಿಕಾನ' ಎಂಬಲ್ಲಿಗೆ ತಲುಪಿ ಶಿವಕ್ಷೇತ್ರವೊಂದರಲ್ಲಿ ರಾತ್ರಿಯ ವಿಶ್ರಾಂತಿ ಪಡೆದುಕೊಂಡರು. ಮರುದಿನ ಅಲ್ಲಿಂದ ಹೊರಡುವುದಕ್ಕಿಂತ ಮುಂಚೆ ಪಕ್ಕದಲ್ಲೇ ಹರಿಯುತ್ತಿದ ಪಯಸ್ವಿನಿ ನದಿಯಲ್ಲಿ ಸ್ನಾನಾಧಿಗಳನ್ನು ಮುಗಿಸಿ ಶಿವ ಸನ್ನಿಧಿಯಲ್ಲಿ ಪ್ರಾರ್ಥನೆಗೆ ನಿಂತಾಗ ಕಾಶೀ ವಿಶ್ವನಾಥನಿಗೆ ಹೊತ್ತ ಹರಕೆಯನ್ನು ಇಲ್ಲೇ ಒಪ್ಪಿಸಿದರೆ ವಿಶ್ವನಾಥನು ಸ್ವೀಕರಿಸುವನು ಎಂಬ ಅಶರೀರವಾಣಿಯೊಂದು ಕೇಳಿಸಿತು. ಸಂತೋಷಗೊಂಡ ಜೋಗಿ ಅರಸನ ನಾಲ್ವರು ಪುತ್ರರು ಬೆಳ್ಳಿ ತೊಟ್ಟಿಲಲ್ಲಿ ನಾಲ್ವರು ಚಿನ್ನದ ಮಕ್ಕಳ ಪುತ್ಥಳಿಗಳನಿಟ್ಟು ಹರಕೆ ತೀರಿಸಿ ಧನ್ಯರಾದರು.[೨] ಈ ನೆನಪಿಗಾಗಿ ಇವರು ಸುಳ್ಯದ ತೊಡಿಕಾನದಲ್ಲಿ ಉಳಿದುಕೊಂಡಿದ್ದ 'ಮಣ್ಣಪಾವು' ಎಂಬಲ್ಲಿನ ಒಂದು ಸಣ್ಣ ಜೊಗಿ ಮಠವಿದ್ದು ಈ ಸ್ಥಳವನ್ನು 'ಜೋಗಿಪುರ' ಎಂದು ಗುರುತಿಸಲಾಗುತ್ತಿದೆ.

ಜೋಗಿ ಜನಾಂಗದವರ ಇತಿಹಾಸವನ್ನು ತಿಳಿಯಲು ಪೌರಾಣಿಕ ಮಹತ್ವ ಪಡೆದುಕೊಂಡ ಐತಿಹ್ಯವೊಂದಿದೆ. ಇದರ ಪ್ರಕಾರ ಹಿಂದೊಮ್ಮೆ ಬಳೆಗಾರ ಜೋಗಿಯೊಬ್ಬ ಪರಮೇಶ್ವರನ ಮಡದಿ ಪಾರ್ವತಿದೇವಿಗೆ ಬಳೆ ತೊಡಿಸಲು ಕೈಲಾಸಕ್ಕೆ ಹೋಗಿದ್ದನಂತೆ. ಸಂತುಷ್ಟೆಯಾದ ಮಾತೆ ಮುತ್ತು ರತ್ನಗಳನ್ನು ಆತನಿಗೆ ಉಡುಗೊರೆಯಾಗಿ ನೀಡಿ ಹರಸಿ ಕಳುಹಿಸಿದಳು. ಕೈಲಾಸದಿಂದ ಆದಷ್ಟು ಬೇಗ ಮನೆ ಸೇರುವ ತವಕದಲ್ಲಿ ಬಳೆಗಾರ, ಊರಿನ ದಾರಿ ಹಿಡಿದ. ಅವನನ್ನು ಪರೀಕ್ಷಿಸಲು

ಶಿವನು ಮಾರುವೇಶದಲ್ಲಿ ಬಂದು ನಿನ್ನ ಚೀಲದಲ್ಲಿ ಏನಿದೆ? ಎಂದು ಕೇಳಿದ ಮೊದಲೇ ಕಳ್ಳಕಾಕರ ಭಯದಿಂದ ಹೆದರಿ ಹೋಗಿದ್ದ ಬಳೆಗಾರ ಬೇಡನ ರೂಪದಲ್ಲಿರುವ ಪರಮೇಶ್ವರನನ್ನು ಗುರುತು ಹಿಡಿಯದೆ ಅದೆಲ್ಲಾ ಒಡೆದ ಬಳೆಯ ಓಡು ಎಂದು ಸುಳ್ಳು ಹೇಳಿದ. ಕೋಪಗೊಂಡ ಶಿವನು ಅವನಿಗೆ 'ಕಾಜಿ ಮಾರಿದ್ದು ಭೋಜನಕ್ಕೆ ಮಾತ್ರ ಸೀಮಿತವಾಗಲಿ' ಎಂದು ಶಪಿಸಿಬಿಟ್ಟನಂತೆ. ಹೀಗಾಗಿ ಬಳೆಗಾರ ಜೋಗಿಗಳದ್ದು ಸಿರಿವಂತಿಕೆಯ ಜೀವನವಾಗಲಿಲ್ಲ ಬಳೆ ತೊಡಿಸುವಾಗ ಅರ್ಧಕ್ಕರ್ಧ ಒಡೆದು ಹೋಗಿ ಆ ನಷ್ಟವೆಲ್ಲ ನಮಗೆ ಎನ್ನುವ ಶಾಪ ಅವರನ್ನು ಇನ್ನು ಬಿಟ್ಟಿಲ್ಲ ಈ ದೃಷ್ಟಾಂತವು ಬಳೆಗಾರ ಜೋಗಿಗಳಿಗೆ ಭವ್ಯ ಗತವಿದ್ದರೂ ಆರ್ಥಿಕವಾಗಿ ಬಡತನದ ಸಂಕೋಲೆಗಳಿಂದ ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂಬುವುದನ್ನು ತಿಳಿಸುತ್ತದೆ. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಇದಕ್ಕೆ ಅಪವಾದವೆಂಬಂತೆ ಉಡುಪಿ ಸೀಮೆಯ ಕೆಲವೊಂದು ಬಳೆಗಾರ ಜೋಗಿಗಳು ಬಳೆ ವ್ಯಾಪಾರದಿಂದಲೇ ಆರ್ಥಿಕವಾಗಿ ಉನ್ನತ ಸ್ಥಿತಿಗೆ ತಲುಪಿ ನಿಂತಿರುವುದು ಕಾಣಬಹುದು.

ಗ್ರಹಸ್ಥ ಜೋಗಿಗಳ ಕೆಲವೊಂದು ಆಚರಣೆ ಪದ್ದತಿಯಲ್ಲಿರುವ ವೈಶಿಷ್ಟ್ಯತೆಗಳು ಮತ್ತು ಜೀವನ ಪದ್ಧತಿಯು ನಾಥಪಂಥದ ಯೋಗಿಗಳ ಶೈಲಿಯನ್ನೇ ಹೋಲುತ್ತಿದ್ದು ಸಮಾದಿ ಕ್ರೀಯೆಗಳು ಕೂಡಾ ಅದೇ ಪದ್ದತಿಯಲ್ಲಿ ನಡೆಯುತ್ತಿದೆ. ಇದು ನಾಥ ಯೋಗಿ ಸಂಪ್ರದಾಯಸ್ಥರ ಮುಂದುವರಿದ ಜನಾಂಗದ ಲಕ್ಷಣವೆಂಬುದು ಸ್ಪಷ್ಟವಾಗುತ್ತದೆ.

ಭೂತಾರಾಧನೆ ಮತ್ತು ನಾಥ ಪಂಥ :

ಭೂತಾರಾಧಕರಾದ ತುಳುನಾಡಿನ ಮೂಲ ನಿವಾಸಿಗಳ ಪಾರ್ದಾನ ಮತ್ತು ಭೂತದ ನುಡಿಕಟ್ಟುಗಳಲ್ಲಿ ನಾಥ ಪಂಥದ ಬಗ್ಗೆ ಉಲ್ಲೇಖವಿದೆ. ಈ ಪ್ರಕಾರವಾಗಿ ವೈದ್ಯನಾಥ ದೈವದ ಉಗಮದ ಜೊತೆ ಜೋಗಿ ಪುರುಷರ ಸಂಬಂಧವನ್ನು ಹೆಣೆಯಲಾಗಿದೆ. ನಾಲ್ವರು ಜೋಗಿ ಪುರುಷರು ಕಾಶಿಯಿಂದ ಹೊರಟು ತಿಮ್ಮಪ್ಪನ ದರ್ಶನ ಮಾಡಿ, ಘಟ್ಟವಿಳಿದು ಬಂಟ್ವಾಳ ತಾಲೂಕಿನ ಶಂಭೂರು ದಿಂಡಿಕೆರೆಗೆ ಬರುತ್ತಾರೆ. ಅವರ ಜೊತೆಯಲ್ಲಿ ಕುಲದೇವರಾದ ಕಾಳಬೈರವ 'ಕಪಿಲೆ' ದನದ ರೂಪದಲ್ಲಿ ಬರುವನು. ಜೋಗಿ ಪುರುಷರು ಬಂಟ್ವಾಳ ಪೇಟೆ, ತುಂಬೆ, ಸುಜೀರು, ಅಡ್ಯಾರ್, ಕೊಡಕಲ್, ಪಾವೂರು ಮುಂತಾದ ಸ್ಥಳಗಳಲ್ಲಿನ ಬಿಲ್ಲವರ ಮನೆಗಳ ಉಳಿದು ಅಲ್ಲೆಲ್ಲ ಕಾಳಬೈರವನನ್ನು ಪ್ರತಿಷ್ಠಾಪಿಸಿದರು. ಈ ದೈವಕ್ಕೆ ಮುಡದಾಯಿ, ಮುಡದೇರ್ ಕಾಳಬೈರವ, ವೈದ್ಯನಾಥ, ಅರಸು ಮುಂಡತ್ತಾಯ ಮುಂತಾದ ಹೆಸರುಗಳಿವೆ. ಜೋಗಿ ಮಠದ ಪೀಠಾಧಿಪತಿಯನ್ನು ಅರಸು ಎನ್ನುತ್ತಾರೆ. ಕದ್ರಿ ರಥೋತ್ಸವದಂದು ಅರಸ ಕುದುರೆಯೇರಿ ಮಂಜುನಾಥನ ರಥದ ಮುಂದೆ ದೇವಸ್ಥಾನಕ್ಕೆ ಪ್ರದಕ್ಷಿಣೆ ಬರುತ್ತಾನೆ. ಅಂತೆಯೇ ಅರಸು ಮುಂಡತ್ತಾಯ ದೈವದ ನೇಮೋತ್ಸವದಲ್ಲೂ ಕುದುರೆಯ ಮೇಲೆ ಕುಳಿತ ವೈದ್ಯನಾಥನ ಬಂಡಿಯನ್ನು ಭಕ್ತರು ಎಳೆಯುತ್ತಾರೆ. ಇದು ಒಂದು ಕಾಲದಲ್ಲಿ ಜನಾರುರಾಗಿಯಾದ ಜೋಗಿಯು ನಂತರದಲ್ಲಿ ದೈವತ್ವಕ್ಕೇರಿ ಭೂತಾರಾಧನೆಗೆ ಒಳಪಟ್ಟಿರಬೇಕು ಎಂಬುವುದನ್ನು ಸೂಚಿಸುತ್ತದೆ. ವೈದ್ಯನಾಥ ದೈವದ ಪಾರ್ದಾನದಲ್ಲಿ ನಾಲ್ವರು ಜೋಗಿ ಪುರುಷರು ಕೋಟಿಕಾರು ತಂಕರು ಬೈದೆದಿಯ ಮನೆಗೆ ಬರುವುದು, ಮಂಜೇಶ್ವರದ ಬಿಲ್ಲವ ಜಾತಿಯ ಜತ್ತಿಕಾಂಜವ, ಶಿವಕಾಂಜವ, ಕುಜುಂಬ ಕಾಂಜವ, ಮಂಜುಕಾಂಜವರು ನಾಥ

ಪಂಥದ ಅನುಯಾಯಿಗಳಾಗಿರುವುದು. ತುಳುನಾಡಿನಲ್ಲಿ ಹೆಚ್ಚಾಗಿ ಉಡುಪಿ ಜಿಲ್ಲೆಯಲ್ಲಿ ಆರಾಧಿಸಲ್ಪಡುವ ಜಾರಂದಾಯ ದೈವದ ಪಾರ್ದ್ದನದಲ್ಲಿ ಕಾಳಭೈರವನೆಸಿಕೊಂಡದ್ದು ಉಲ್ಲೇಖವಿದೆ.

ತಿರುಪತಿ ತಿಮ್ಮಪ್ಪ ಮತ್ತು ಕಾಶಿಯ ಕಾಳಭೈರವ ಇಬ್ಬರೂ ಒಂದೇ ಎಂಬುವುದು ಪಾಡ್ದನದಲ್ಲಿ ಹೇಳಿದೆ. 'ಮೂಡಾಯಿ ತ್ಯಾಂಪೆ ದೇವೆರುಂದ್ ಪಣ್ಪಾವೊಂದ್, ಮುಡಿಪು ಮುದ್ರೆ ದುಡ್ಡು ದುಗ್ಗಾಣೆ ಸಂದಾವೊಂಡೆ, ಕಾಶಿಡ್ ಕಾಳಭೈರವೆಂದ್ ಪಣ್ಪಾವೊಂಡೆ' (ತಿರುಪತಿಯಲ್ಲಿ ತಿಮ್ಮಪ್ಪ ದೇವರೆಂದು ಕರೆಸಿಕೊಂಡೆ, ಮದಿಪು ಧನಕನಕ ಕಾಣಿಕೆಗಳನ್ನು ಸ್ವೀಕರಿಸಿದೆ, ಕಾಶಿಯಲ್ಲಿ ಕಾಳಭೈರವನೆಂದು ಕರೆಸಿಕೊಂಡೆ) ಎಂದು ಹೇಳಿದೆ. ಇಲ್ಲಿನ ಮೂಲ ಶೈವ ವಿಗ್ರಹವು ೧೫ನೇ ಶತಮಾನದಲ್ಲಿ ವೆಂಕಟರಮಣನಾಗಿ ಬದಲಾದ ಸಾಧ್ಯತೆ ಇದೆ ಎಂದು ವಿಸ್ವಾಂಸರ ಅಭಿಪ್ರಾಯ.[೧೩]

ಉಡುಪಿಯ ಉದ್ಯಾವರದಲ್ಲಿರುವ 'ಶಂಭುಕಲ್ಲು ಶ್ರೀ ವೀರಭದ್ರ ದುರ್ಗಾಪರಮೇಶ್ವರಿ' ದೇವಸ್ಥಾನವನ್ನು ಪೂರ್ವದಲ್ಲಿ ಬೈರವನಾಥ ದೇವಸ್ಥಾನವೆಂದು ಕರೆಯುತ್ತಿದ್ದರೆನ್ನಲಾಗುತ್ತದೆ. ಇಲ್ಲಿ ಬಳಿಗಾರ ಅಥವಾ ಕಾಜೀಗಾರರೆಂದು ಕರೆಯಲ್ಪಡುತ್ತಿದ್ದ ಜೋಗಿಗಳು ಬೈರವನ ಅರ್ಚಕರಾಗಿದ್ದು, ಪ್ರಸ್ತುತ ವೀರಭದ್ರನೆಂದು ಕರೆಸಿಕೊಳ್ಳುತ್ತಿರುವ ದೇವರಿಗೆ ಮಾಧ್ವ ಬ್ರಾಹ್ಮಣರಿಂದ ಪೂಜೆ ನೆರವೇರುತ್ತದೆ. ದೇವಸ್ಥಾನದ ಹೊರ ಅಂಗಣದ ಪೌಳಿಯಲ್ಲಿರುವ ಜುಮಾದಿ, ಬಂಟ, ಚಾಮುಂಡಿ (ಮಹಾಕಾಳಿ) ಮುಂತಾದ ದೈವಗಳಿಗೆ ನೇಕಾರ ಸಮಾಜದ ಅನುವಂಶೀಯ ಪಾತ್ರಿಗಳಿಂದ ಸೇವೆ ಸಲ್ಲುತ್ತದೆ. ಅಲ್ಲದೆ ಪ್ರಾಣಿ ಬಲಿ, ಅಗೇಲು ಸೇವೆಯು ನಡೆಯುತ್ತದೆ.[೧೪] ಇಲ್ಲಿ ಕಾಳ ಬೈರವನನ್ನೇ ವೀರಭದ್ರನೆಂದು ಕರೆದಿರುವುದು ಇಲ್ಲವೇ ಮೂಲ ವಿಗ್ರಹವನ್ನೇ ಬದಲಾಯಿಸಿರುವ ಸಾಧ್ಯತೆ ಇದೆ. ಇಕ್ಕೇರಿಯ ವೀರಶೈವರ ಆಡಳಿತ ಕಾಲದಲ್ಲಿ (ಕ್ರಿ.ಶ. ೧೪೯೯–೧೭೬೩) ಈ ಪರಿವರ್ತನೆ ನಡೆದಿರಲೂಬಹುದು ಎಂಬುವುದು ಇತಿಹಾಸಶೋಧಕರ ಅಭಿಪ್ರಾಯ.

ರಥಬೀದಿಯ ಮಹಮ್ಮಾಯಿ ದೇವಸ್ಥಾನದ ಒಳಭಾಗದ ಗುಡಿಯ ಹಿಂಬಾಗದಲ್ಲಿರುವ ರಕ್ತೇಶ್ವರಿಗೆ ಜೋಗಿ ಸಮುದಾಯದ ಅನುವಂಶೀಯ ಪಾತ್ರಿಗಳಿಂದ ಕಳೆದ ೪೬೦ ವರ್ಷಗಳಿಂದ ಭೂತರಾಧನೆಯ ಸೇವೆ ಸಲ್ಲುತ್ತಿದೆ. ಈ ಕ್ಷೇತ್ರವು ೧೬–೧೭ನೇ ಶತಮಾನದ ಕಾಲದಲ್ಲೇ ಗೌಡ ಸಾರಸ್ವತ ಬ್ರಹ್ಮಣರ ಕೈಯಲಿತ್ತು ಎನ್ನಲಾಗಿದೆ. ಮಂಗಳೂರಿನ ಬಂಟ್ವಾಳ ತಾಲೂಕಿನ ೩೦೦೦ ಮುಡಿ ಆಸ್ತಿಗಳ ಪೆನಕಲ ಬಿಲ್ಲವ ಮನೆಯಲ್ಲಿ ನಾಥ ಪಂಥದ ೨೫೦–೩೦೦ ಯೋಗಿಗಳು ಕೆಲವು ದಿನ ವಾಸ್ತವ್ಯವಿದ್ದು ತಾವೇ ಬೇಯಿಸಿ ಉಂಡು ಹೋಗುತ್ತಿದ್ದರಂತೆ.

ತುಳುನಾಡಿನ ಅವಳಿ ವೀರರಾದ ಕೋಟಿ ಚೆನ್ನಯರ ತಾಯಿ ದೇವಿ ಬೈದ್ಯತಿಯನ್ನು ಸಾಕಿದ 'ಕರಾಡ ಬ್ರಾಹ್ಮಣ' ಕುಟುಂಬದವರು ನಾಥ ಪಂಥದ ಮೂಲಕ ತುಳುನಾಡಿಗೆ ವಲಸೆ ಬಂದಿರುವ ಸಾಧ್ಯತೆಗಳಿವೆ ಎಂದು ಖ್ಯಾತ ಲೇಖಕ ರಮಾನಾಥ್ ಕೋಟೆಕಾರ್ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ಇವರು ನಾಥ ಪಂಥದ ಕಟ್ಟಾ ಅನುಯಾಯಿಗಳೆಂದು, ಹಾಗೂ ೭ ರಿಂದ ೧೨ನೇ ಶತಮಾನದ ಕಾಲ ಘಟ್ಟದಲ್ಲಿ ತುಳುನಾಡಿಗೆ ವಲಸೆ ಬಂದವರೆಂದು ಬ್ರಿಗ್ಸ್‌ನ 'ಗೋರಕ್ಷನಾಥ ಅಂಡ್ ಕಾನ್‌ಪಟ್ ಯೋಗೀಸ್' ಪುಸ್ತಕದಲ್ಲಿ ಉಲ್ಲೇಖವಿದೆ. ಇಂದಿಗೂ ಕೋಟಿ ಚೆನ್ನಯರ

ಗರಡಿಗಳಲ್ಲಿ ಜೋಗಿ ಪುರುಷರ ಮರದ ವಿಗ್ರಹಗಳಿವೆ. ಇಲ್ಲಿ ಬೈದ್ಯರೊಂದಿಗೆ ಜೋಗಿ ಪುರುಷರಿಗೂ ಕಟ್ಟುಕಟ್ಟಳೆಯ ನೇಮ ಸಲ್ಲುತ್ತದೆ.

ಕಣಂತೂರಿನ ಧರ್ಮ ಅರಸು ಶ್ರೀ 'ತೋಡುಕುಕ್ಕಿನಾರ್' ದೈವದ ಪಾಡ್ದನದಲ್ಲಿ ಧರ್ಮ ಅರಸು ದೈವದ ಸಹೋದರಿ ಉಳ್ಳಾಲ್ತಿ ಹಾಗೂ ಅಂಗರಕ್ಷಕ ಬಂಟ ಜಾವದೆಯ ಕಥೆಯಿದೆ. ಕೂಟತ್ತಜೆಯಲ್ಲಿ ಪ್ರದಾನ ದೈವವಾಗಿರುವ ಬಂಟ ಜಾವದೆಯು, ಉಳ್ಳಾಲ್ತಿಯ ಕತೆಯಲ್ಲಿ ಆಕೆ ತನ್ನ ಕುಮಾರನನ್ನು ಮಂಗಳೂರು ಸಂಸ್ಥಾನದ ಅರಸರಲ್ಲಿಗೆ ಬಂಗಾರದ ಗಿಳಿ ಕಪ್ಪ ಕಾಣಿಕೆಯೊಂದಿಗೆ ಕಳುಹಿಸಿಕೊಡುತ್ತಾಳೆ. ತೇಜಸ್ವಿ ಬಾಲಕನನ್ನು ಕಂಡ ಅರಸರು ಸಂತುಷ್ಟನಾಗಿ ಆತನಿಗೆ 'ಬಂಟ್ವಾಳ' ಎಂದು ನಾಮಕರಣ ಮಾಡುತ್ತಾರೆ. ಬಂಟ್ವಾಳ ಅಲ್ಲಿಂದ ಕದಿರೆಯ ದೇವಸ್ಥಾನಕ್ಕೆ ಹೋಗಿ ಅಲ್ಲಿ ಜೋಗಿ ಮಾಡಿದ ಪ್ರಸಾದವನ್ನು ಸ್ವೀಕರಿಸದೆ, ಆತನನ್ನು ಹೊರದಬ್ಬಿ ಬ್ರಾಹ್ಮಣರನ್ನು ಪೂಜೆಗೆ ನೇಮಿಸಿದನೆಂದು ಹೇಳಿದೆ.[೧೫] ಒಟ್ಟಿನಲ್ಲಿ ನೋಡಿದಾಗ ನಾಥ ಪಂಥದ ಧಾರ್ಮಿಕ ಚಿಂತನೆ, ಯೋಗಿಗಳ ಬದುಕು, ಮಠಗಳ ಅಸ್ತಿತ್ವ, ಸಮುದಾಯದ ಜನರ ಶ್ರದ್ಧೆ, ಭಕ್ತಿ ಒಂದಕ್ಕೊಂದು ಬೆಸೆದುಕೊಂಡು ಸಂಬಂಧಗಳೇರ್ಪಟ್ಟಿವೆ ಎನ್ನುವುದು ತಿಳಿಯುತ್ತದೆ.

ಸಂದರ್ಭ ಸೂಚಿ

1. ರೆಹಮತ್ ತರೀಕೆರೆ, ಕರ್ನಾಟಕ ನಾಥಪಂಥ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, 2006 ಪುಟ–193
2. ಅದೇ 2006, ಪುಟ–144
3. ಅದೇ 2006 ,ಪುಟ–149
4. ಅದೇ 2006, ಪುಟ–196
5. ಅದೇ 2006, ಪುಟ–215
6. ಜೋಗಿ ಆನಂದನಾಥ್, ನಾಥಪಂಥ ಕ್ಷೇತ್ರ ಜೋಗಿ ಮಠ, ನಾಥ ಸಂಪ್ರದಾಯ ಪ್ರಚಾರ ಸಮಿತಿ, 2003, ಪುಟ–78
7. ರೆಹಮತ್ ತರೀಕೆರೆ, ಕರ್ನಾಟಕ ನಾಥಪಂಥ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, 2006 ಪುಟ–203
8. ಅದೇ 2006 ,ಪುಟ–206
9. ಅದೇ 2006 ,ಪುಟ–207
10. ನಾರಾಯಣರಾವ್, ಸಿದ್ಧ ಸುಂದರ್ ನಾಥ್ ಜೀ ಸ್ಮರಣ ಸಂಚಿಕೆ, ಸಿದ್ಧೀ ಸುಂದರ್ ನಾಥ್ ಪಟ್ಟಭಿಷೇಕ ಸಮಿತಿ,2007, ಪುಟ–32
11. ಜೋಗಿ ಪಂಚಮಿ, ಸ್ಮರಣ ಸಂಚಿಕೆ, ಜೋಗಿ ಸಮಾಜ ಸೇವಾ ಸಮಿತಿ, 2014 ಪುಟ–17
12. ಅದೇ 2014, ಪುಟ–20
13. ಎಂ. ಗಣಪತಿ ರಾವ್ ಐಗಳ್, ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ, ಪುಟ–376
14. ರಮಾನಾಥ್ ಕೋಟೆಕಾರ್, ಶ್ರೀ ಸುಂದರ್‌ನಾಥ್ ಜೀ ಸ್ಮರಣ ಸಂಚಿಕೆ, ಸಿದ್ಧ ಸುಂದರನಾಥ ಪಟ್ಟಾಭಿಷೇಕ ಸಮಿತಿ 2007, ಪುಟ–14
15. ಅದೇ 2007 ಪುಟ–16

ಅಧ್ಯಾಯ 4

ಜೋಗಿ ಸಮುದಾಯದ ಮಂದಿಗಳ ಹೆಸರಿನ ಜೊತೆಗೆ 'ನಾಥ' ಎಂಬ ಉಪನಾಮ

ಚಾರಿತ್ರಿಕ ಮೂಲವನ್ನು ಹುಡುಕುವುದು ತುಂಬಾ ಪ್ರಯಾಸದ ಕೆಲಸ. ನಾಥ ಪಂಥಕ್ಕೆ ಹಲವಾರು ವರುಷಗಳ ಇತಿಹಾಸವಿದೆ ಎಂಬುವುದಾಗಿ ಲೇಖಕರು, ವಿದ್ವಾಂಸರು, ಇತಿಹಾಸ ತಜ್ಞರು ಆಯಾ ಸಂದರ್ಭಗಳಲ್ಲಿ ಲಭ್ಯವಿದ್ದ ಶಾಸನ, ಅಕರ ಗ್ರಂಥ, ಜನಪದ, ಪಾಡ್ದನ, ರಾಜಕೀಯ ಸ್ಥಿತ್ಯಂತರಗಳ ಆಧಾರದ ಮೇಲೆ ಗುರುತಿಸಿರುವುದು ಕಾಣಬಹುದು. ಆದರೂ ಕೂಡ ನಾಥ ಪಂಥದ ಉನ್ನತಿ ಮತ್ತು ಕ್ಷೀಣತೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಆಗುವುದಿಲ್ಲ.

ನಾಥ ಪಂಥವು ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಹೇಗೆ? ಯಾವ ರೂಪದಲ್ಲಿ ನೆಲೆಸಿತ್ತು? ಎಂಬ ಬಗ್ಗೆ ಐತಿಹ್ಯಗಳ ಆಧಾರದ ಮೇಲೆ ನೋಡುತ್ತಾ ಹೋದರೆ ಈ ಪಂಥವು ಅನೇಕ ದರ್ಶನ ಪಂಥಗಳ ಸಂಸರ್ಗದ ಫಲೋದಯವಾಗಿದ್ದು, ಮತ್ತು ಅನೇಕ ದರ್ಶನ ಪಂಥಗಳ ಜೊತೆಗೆ ಅನುಸಂದಾನ ಮಾಡಿತ್ತು ಎಂದು ಕಾಣುತ್ತದೆ.[೧] ವಜ್ರಯಾನಕ್ಕೂ ಶೈವ ಪಂಥವಾದ ನಾಥ ಪಂಥಕ್ಕೂ ಸಂಬಂಧವಿದೆ. ಎನ್ನುವ ಸಾಹಿತ್ಯ ಕೃತಿಗಳು ಸಾಕಷ್ಟಿವೆ.

ಜೋಗಿ ಆನಂದನಾಥರ ಪ್ರಕಾರ ಕದ್ರಿ ಹಾಗೂ ವಿಟ್ಲದ ತುಳುವ ಜೋಗಿಗಳು ಬಹುಶ: ಸನ್ಯಾಸ ಬಿಟ್ಟು ಸಂಸಾರಸ್ಥರಾಗುತ್ತಿದ್ದ ನಾಥ ಯೋಗಿಗಳ ಮಕ್ಕಳು. ಮುಂದೆ ಅವರೇ ಒಂದು ಜನಾಂಗವಾಗಿ ಬೆಳೆದರು. ಆದರೆ, ಹಿಂದೆ ಕದ್ರಿಯಲ್ಲಿದ್ದ ವಜ್ರಯಾನ ಪಂಥದ ಅನುಯಾಯಿಗಳು ಈಗಿನ ಜೋಗಿಗಳ ಪೂರ್ವಜರು ಆಗಿರುವ ಸಾದ್ಯತೆ ಇದೆ[೨] ಸಮುದಾಯಗಳ ಮೂಲ ಶೋಧನೆ ಕಷ್ಟಕರ.

ದಕ್ಷಿಣ ಕನ್ನಡದ ಹಳ್ಳಿಗಳಲ್ಲಿ ವಾಸಿಸುವ ಜೋಗಿ ಜನಾಂಗದವರು 'ಪುರುಷ' ಎಂಬ ಉಪನಾಮದಿಂದ ಗುರುತಿಸಿಕೊಳ್ಳುತ್ತಾರೆ. ಜೋಗಿ ಎಂಬ ಉಪನಾಮವು ಯೋಗಿ ಎಂಬ ಶಬ್ದದಿಂದ ಹುಟ್ಟಿ ಬಂದಂತೆ 'ಪುರುಷ' ಎಂಬ ಶಬ್ದವು ಎಂಬತ್ನಾಲು (ಚೌರಸಿ) ಸಿದ್ದ ಪುರುಷರು ಎನ್ನುವ ಪುರುಷ ಎಂಬ ಉಪನಾಮವನ್ನು ಬಳಸಿಕೊಂಡು ಬಳಕೆಗೆ ಬಂದಿರುತ್ತದೆ.[೩] ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಿಂದ ಹಿಡಿದು ಕಾಸರಗೋಡಿನ ಮಂಜೇಶ್ವರದವರೆಗೂ ಸಾಕಷ್ಟು ತುಳು ಜೋಗಿಗಳಿದ್ದಾರೆ. ಜೋಗಿ ಅಥವಾ 'ಪುರುಷ' ಎನ್ನುವ ಉಪನಾಮ ಹಿರಿಯ ತಲೆಮಾರಿನ ಮಂದಿಗಳ ಹೆಸರಿನ ಜೊತೆಗೆ ಮಾತ್ರ ಹೆಚ್ಚಾಗಿ ಕಾಣಿಸುತ್ತಿದೆ. ಹೊಸ ತಲೆಮಾರಿನ ಪೀಳಿಗೆಯಲ್ಲಿ ಇದು ಕಣ್ಮರೆಯಾಗುತ್ತಿವೆ. ದಕ್ಷಿಣಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ವಾಸಿಸುವ ಜೋಗಿಗಳನ್ನು ಪುರುಷ ಎಂದು ಕರೆಯುತ್ತಾರೆ.

ಉಡುಪಿ ಜಿಲ್ಲೆಯ ಬಾರಕೂರಿನ ಕಡೆಯ ಒಂದು ವರ್ಗದ ಜೋಗಿಗಳಿಗೆ 'ಜೊರಡರು' ಎಂದು ಹೆಸರಿದೆ.[೪] ಕೇರಳದಲ್ಲಿ ಈ ಸಮುದಾಯವನ್ನು 'ಗುರುಕ್ಕಳ್' ಎಂದು ಕರೆಯುವುದು ವಾಡಿಕೆ. ಕಾಸರಗೋಡಿನ ಮಂಜೇಶ್ವರ ಬದಿಯಡ್ಕದ ಕಡೆ ಜೋದಿಕನ್ನಡು ಎಂಬ ಹೆಸರಿನಿಂದ ಗುರುತಿಸಿಕೊಳ್ಳುವ ಜೋಗಿಗಳಿದ್ದಾರೆ.

ಮಂಜುನಾಥ ಜೋಗಿ, ಸುಂದರನಾಥ ಜೋಗಿ, ರಾಮನಾಥ ಜೋಗಿ ಮುಂತಾದ ಹೆಸರುಗಳಲ್ಲಿ ಜೋಗಿ ಮತ್ತು ನಾಥ ಎಂಬ ಎರಡು ಶಬ್ದಗಳು ಸೇರಿಕೊಂಡಿರುವುದು ಕಾಣಬಹುದು. ಆದರೆ, ಇತ್ತೀಚೆಗೆ ಕೆಲವರು ತಮ್ಮ ಹೆಸರಿನ ಮುಂದೆ ನಾಥ, ಜೋಗಿ, ಪುರುಷ ಎಂಬ ಉಪನಾಮ ಸೇರಿಸಿಕೊಳ್ಳಲು ಆಸಕ್ತಿ ತೋರಿಸುತ್ತಿದ್ದಾರೆ. ಇದಕ್ಕೆ ಕಾರಣ ಸಮಾಜದಲ್ಲಿ ದೊಡ್ಡ ಸಾಧನೆ ಮಾಡಿರುವ ಸಾಧಕರ ಜನಪ್ರಿಯತೆ ಮತ್ತು ನಾಥ ಪಂಥದ ಭವ್ಯ ಗತದ ಮಹತ್ವವನ್ನು ಯುವ ಪೀಳಿಗೆಯು ಅರಿತು ಕೊಂಡಿರುವುದು ಎಂದು ತಿಳಿಯುತ್ತದೆ.

ಕರಾವಳಿ ಸೀಮೆಯ ಜೋಗಿಗಳು ತಮ್ಮ ಸಮುದಾಯದ ಒಗ್ಗಟ್ಟಿಗಾಗಿ ಜಾತಿ ಸಂಘಟನೆಯನ್ನು ಭದ್ರ ಪಡಿಸುವ ನಿಟ್ಟಿನಲ್ಲಿ ಸಮಸ್ತ ಜೋಗಿ ಸಮುದಾಯವನ್ನು ಒಗ್ಗೂಡಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಮೂಲಕ ಅಲ್ಲಲ್ಲಿ ಚದುರಿ ಹೋಗಿರುವ ಜೋಗಿಗಳನ್ನು ಮತ್ತೆ ತನ್ನ ಮಾತೃ ಮಠಗಳಿಗೆ ಸೆಳೆಯುವ ಪ್ರಯತ್ನವಾಗುತ್ತೆ ಜೋಗಿ ಸಮುದಾಯದ ಬಗ್ಗೆ ಅಧ್ಯಯನ ಮಾಡಿರುವ ಜೋಗಿ ಆನಂದ ನಾಥ್, ಸಾಕ್ಸಪೋನ್ ವಾದನದಲ್ಲಿ ದೊಡ್ಡ ಸಾಧನೆ ಮಾಡಿರುವ ಕದ್ರಿ ಗೋಪಾಲನಾಥ್, ಮಂಗಳಾದೇವಿ ದೇವಸ್ಥಾನದಲ್ಲಿ ಸಾಕ್ಸಪೋನ್ ನುಡಿಸುವ ಮತ್ಸ್ಯೇಂದ್ರನಾಥ್, ಮಂಗಳೂರಿನ ಫಿಶರೀಸ್ ಶಿಕ್ಷಣ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಡಾ। ಕೇಶವನಾಥ್ ಪ್ರಸ್ತುತ ಮಹಾನಗರ ಪಾಲಿಕೆಯಲ್ಲಿ ಮಹಾಪೌರರಾಗಿರುವ ಹರಿನಾಥ್ ಇವರೆಲ್ಲರ ಹೆಸರಿನ ಜೊತೆಗೆ ನಾಥ ಎಂಬ ಉಪನಾಮವು ಇದೆ. ಹಿಂದೆ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಆಗಿ ಗಮನ ಸೆಳೆದಿದ್ದ ಕೆ. ದಿವಾಕರ್ ಕೂಡಾ ಜೋಗಿ ಸಮುದಾಯದಿಂದಲೇ ಬಂದವರು. ಆಧುನಿಕ ಕಾಲದಲ್ಲಿ ತೆರೆದುಕೊಂಡ ಶಿಕ್ಷಣ ವ್ಯವಸ್ಥೆ ಮತ್ತು ವಾಣಿಜ್ಯ ಸಂಸ್ಕೃತಿಗೆ ಒಗ್ಗಿಕೊಂಡ ಅನೇಕ ಜೋಗಿ ಸಮಾಜದ ಮಂದಿಗಳು ತಮ್ಮ ಜೀವನೋಪಾಯಕ್ಕಾಗಿ ಬೇರೆ ಬೇರೆ ವೃತ್ತಿಯಲ್ಲಿ ತೊಡಗಿಸಿಕೊಂಡಿರುವುದು ತಿಳಿಯುತ್ತದೆ. ತುಳು ಜೋಗಿಗಳಿಗೆ ಬಳೆಗಾರ ಜೋಗಿಗಳಂತೆ ಹಿಂದಿನಿಂದ ಬಂದ ಸಂಪ್ರದಾಯಿಕ ವೃತ್ತಿ ಇರಲಿಲ್ಲ ಎಂಬುವುದು ಗಮನಿಸತಕ್ಕ ಸಂಗತಿ.

ಹಲವರಿ ಮಠಕ್ಕೆ ನಡೆದುಕೊಳ್ಳುತ್ತಿರುವ ಬಳೆಗಾರ ಜೋಗಿಗಳು ಉಡುಪಿ ಜಿಲ್ಲೆಯ ಕುಂದಾಪುರ, ಮೆಕ್ಕೆಕಟ್ಟೆ,ಕೋಟ, ಬಸರೂರು, ಬಾರಕೂರು, ಕೋಟೇಶ್ವರ, ಉದ್ಯಾವರ, ಕಾಪು, ಕಾರ್ಕಳ, ಮಿಜಾರು ಮುಂತಾದ ಕಡೆಗಳಲ್ಲಿರುವ ಕರಾವಳಿ ಜಿಲ್ಲೆಯ ಜೋಗಿಗಳ ಹೆಸರಿನ ಜೊತೆಗೆ ಹೆಚ್ಚಾಗಿ 'ಜೋಗಿ' ಎಂಬ ಉಪನಾಮವೇ ಕಂಡು ಬರುತ್ತಿದೆಯಲ್ಲದೆ, ನಾಥ ಎಂಬ ಉಪನಾಮ ತೀರಾ ವಿರಳ.

ಜೋಗಿಗಳಿಗೆ ಪುರುಷರು ಎಂಬ ಹೆಸರು ಬರಲು ಏನು ಕಾರಣ? ಕಾಸರಗೋಡು ಬದಿಯಡ್ಕ ಸಮೀಪ ಮಲೆಯಾಳ ಮಾತನಾಡುವ ಪುರುಷರಿದ್ದಾರೆ. ಅವರಿಗೆ ಜೋದಿಕನ್ನದು, ಜೋಯಿನ್ನದು ಎನ್ನತ್ತಾರೆ. ಅಂದರೆ ಬೇಡುವವರು ಎಂದು ಅರ್ಥವಿದೆ. ತುಕರಾಮ ಪುರುಷ ಎಂದರೆ ತುಕರಾಮ ಜೋಗಿ ಎಂದರ್ಥ. ಕೆಲವೊಮ್ಮೆ ಎರಡೂ ಕೂಡಿ ಜೋಗಿ ಪುರುಷ ಆಗುತ್ತದೆ. ಹೀಗೆ ನಾಥ ಪಂಥೀಯ ಸಮುದಾಯಗಳು ಹಲವು ಹೆಸರುಗಳಿಂದ ಕೂಡಿದೆ ಎಂದು ಅರ್ಥೈಸಿಕೊಳ್ಳಬಹುದು.

ಜೋಗಿಗಳನ್ನು ಅವರವರ ಮಾತ್ರ ಭಾಷೆಗಳಿಗೆ ಅನುಗುಣವಾಗಿ ತುಳುವ ಜೋಗಿ, ಕನ್ನಡ ಜೋಗಿ, ಮರಾಠಿ ಜೋಗಿಗಳೆಂದು ಕರೆಯುತ್ತಾರಾದರೂ ಜೋಗಿ ಎಂಬ ಉಪನಾಮ ಇರುವವರೆಲ್ಲರೂ ನಾಥ ಪಂಥದ ಯೋಗಿ ವಂಶದವರು ಎಂದು ಅರ್ಥೈಸಲಾಗುತ್ತದೆ. ನೇಪಾಳ, ಬರ್ಮ, ಪಾಕಿಸ್ಥಾನ, ಬಾಂಗ್ಲಾ ದೇಶಗಳಲ್ಲೂ ನಾಥ ಸಂಪ್ರದಾಯಕ್ಕೊಳಪಟ್ಟ ಜೋಗಿಗಳು ಇದ್ದಾರೆ.[೫] ಈ ಕುರಿತಾಗಿ ನಾಥ ಪಂಥದ ಇತಿಹಾಸ ಸಂಶೋಧಕರಿಂದ ತಿಳಿದು ಬರುತ್ತದೆ.

ನಾಥ ಸಮುದಾಯದ ಬಗ್ಗೆ ವಡ್ಡಾರಾದನೆ, ಕರ್ನಾಟಕ ಶಬ್ದಾನುಸಾರ, ನೇಮಿಚಂದ್ರನ ಲೀಲಾವತಿ ಪುರಾಣಗಳಲ್ಲಿ ಉಲ್ಲೇಖವಿದೆಯೆಂದು ತಿಳಿಯುತ್ತದೆ. ವಚನಕಾರರು ಜೋಗಿ ಎಂಬ ಪದವನ್ನು ನಾನಾರ್ಥಗಳಲ್ಲಿ ಬಳಸಿದ್ದಾರೆ. ಈ ಜನಾಂಗದ ಬಗ್ಗೆ ಕಾಸ್ಟ್ ಆ್ಯಂಡ್ ಟ್ರೈಬ್ಸ್ ಕರ್ನಾಟಕ ರಾಜ್ಯ ಗಜೆಟಿಯರ್‌ನಲ್ಲಿ ವಿಶೇಷ ಮಾಹಿತಿಯಿದೆ.

ನಾಥ ಪಂಥೀಯ ಸಮುದಾಯಗಳು ಹಲವು ಆಧಾರಗಳ ಮೇಲೆ ವಿಂಗಡಣೆ ಆಗಿದೆ. ಆದರೂ ಸಾಂಸ್ಕೃತಿಕ ದೃಷ್ಟಿಯಿಂದ ಜೋಗಿಗಳನ್ನು ಆಯಾ ಸೀಮೆಯ ಮಠಗಳ ಸಂಪ್ರದಾಯಗಳಿಗೆ ಅನುಗುಣವಾಗಿ ಜೋಗಿಗಳು ಅಥವಾ ನಾಥ ಸಂಪ್ರದಾಯವಾದಿಗಳು ಎಂದು ನೋಡಬೇಕಾಗುತ್ತದೆ. ಆಗ ಮಾತ್ರ ಆಯಾ ಮಠಗಳ ವ್ಯಾಪ್ತಿಯಲ್ಲಿ ರೂಪುಗೊಂಡ ನಾಥ ಪಂಥದ ಅನನ್ಯತೆಯನ್ನು, ಆಕರ್ಷಣೆಯನ್ನು ತಿಳಿಯಬಹುದು.

'ಜೋಗಿ' ಎನ್ನುವ ಶಬ್ದ ಬಹು ಅನಾದಿಯಾಗಿದ್ದು ಮಹಾಭಾರತದಲ್ಲಿ ಅರ್ಜುನನು ಜೋಗಿಯ ವೇಶ ಹಾಕಿದ್ದಾನೆಂಬ ಐತಿಹ್ಯವಿದೆ. ಜೋಗಿಗಳು ಬೈರವನ ಆರಾಧಕರು. ಇವರು ಕಿವಿಯಲ್ಲಿ ಕುಂಡಲಗಳನ್ನು, ಕೊರಳಲ್ಲಿ ಸಿಂಗನಾದವನ್ನು ಧರಿಸುತ್ತಾರೆ. ಪೂಜೆಯ ಸಮಯದಲ್ಲಿ ಸಿಂಗನಾದವನ್ನು ಊದುತ್ತಾರೆ. ಜೋಗಿ ಗುರುಗಳ ಬಳಿ ಜೋಳಿಗೆ, ದಂಡ, ತ್ರಿಶೂಲಗಳಿರುತ್ತವೆ. ಜೋಳಿಗೆಯೊಳಗಿರುವ (ಕಪಾಲ)ಬುರುಡೆ ಸೋರೆಕಾಯಿಯಿಂದ ಮಾಡಿದ್ದಾಗಿರುತ್ತದೆ. ಪ್ರತೀ ಬಾನುವಾರ ಮನೆ ದೇವರಾದ ಕಾಳಭೈರವನನ್ನು ಆರಾಧಿಸುವ ಪದ್ಧತಿಯೂ ಇವರಲ್ಲಿದೆ.

ಜೋಗಿ ಸಮುದಾಯದ ಹುಡುಗರು ಬೇರೆ ಜಾತಿಯ ಹುಡುಗಿಯರನ್ನು ಪ್ರೀತಿಸಿ ಮದುವೆಯಾದಾಗ ಅವರನ್ನು ಜಾತಿಯೊಳಗೆ ಬಿಟ್ಟುಕೊಳ್ಳುವುದು ಇದೆ. ಬೇರೆ ಜಾತಿಯವರನ್ನು ಹುಡುಗಿಯರು ಮದುವೆಯಾದಾಗ ಮೊದಲು ಪ್ರತಿಭಟಿಸಿದರೂ ನಂತರ ತಂದೆ ತಾಯಿಗಳು ಹೋಗಿಬರುವುದು ಮಾಡುತ್ತಿರುತ್ತಾ ಜಾತಿಯ ಕಟ್ಟುಪಾಡುಗಳು ಆ ಮಟ್ಟಿಗೆ ಸಡಿಲವಾಗಿದೆ. ಯುವ ಸಮುದಾಯವೂ ತಮ್ಮ ಹಳೆಯ ಕಟ್ಟುಕಟ್ಟಳೆಗಳ ಜತೆಗೆ ಈಗ ಬದುಕಲು ಒಪ್ಪುತ್ತಿಲ್ಲ. ಹಾಗಾಗಿ ಜೋಗಿ ಸಮುದಾಯದಲ್ಲಿ ಅಂತರ್ ಜಾತೀಯ ವಿವಾಹವಾದ ಕುಟುಂಬಗಳ ಯಾವುದೇ ಒಂದು ನಿರ್ದಿಷ್ಟ ಜಾತಿಯನ್ನು ಪ್ರತಿನಿಧಿಸಲು ಆಗದೆ ತಟಸ್ಥವಾಗಿ ಉಳಿದುಕೊಂಡಿರುವಂತಹ ನಿದರ್ಶನಗಳು ಸಾಕಷ್ಟಿವೆ. ದಕ್ಷಿಣ ಕನ್ನಡದ ತುಳು ಜೋಗಿಗಳು ಮತ್ತು ಉಡುಪಿ ಕಡೆಯ ಬಳೆಗಾರ ಜೋಗಿಗಳಲ್ಲಿ ಹಿಂದೆ ಹೆಚ್ಚಾಗಿ ವೈವಾಹಿಕ ಸಂಬಂಧಗಳು ನಡೆಯುತ್ತಿರಲಿಲ್ಲ. ಆದರೆ, ಪ್ರಸ್ತುತ ಕಾಲಘಟ್ಟದಲ್ಲಿ ಬಹಳಷ್ಟು ನೆಂಟಸ್ಥಿಕೆಗಳು ಇವರೊಳಗೆ ನಡೆಯುತ್ತಿರುವುದು ಕಂಡು ಬರುತ್ತದೆ. ತುಳುನಾಡಿನ ನಾಥ ಜೋಗಿಗಳು ಕಾಳಬೈರವ, ಶಕ್ತಿದೇವತೆ ಮತ್ತು ಗೋರಕ್ಷನಾಥರನ್ನು ಪೂಜಿಸುತ್ತಾರೆ.

ನಾಥ ಪಂಥದ ಅಧ್ಯಯನ ಮಾಡುವಾಗ ಅದರೊಳಗಿರುವ ಸಾಕಷ್ಟು ಹೊಯ್ದಾಟಗಳು ಬೆಳಕಿಗೆ ಬರುತ್ತದೆ. ಆದರೆ ಇವೆಲ್ಲವನ್ನು ಬಿಟ್ಟು ಕೊಟ್ಟು ಗತವನ್ನು ಕಟ್ಟಲು ಸಾಧ್ಯವಿಲ್ಲ. ತಮ್ಮ ಅಸ್ತಿತ್ವವನ್ನು ತೋರ್ಪಡಿಸಲು ನಡೆಯುವ ಸಂಘರ್ಷಗಳು ಈ ಸಮುದಾಯದಲ್ಲಿ ಜಟಿಲವಾಗುತ್ತ ಹೋಗುತ್ತಲಿದೆ. ಆಧುನೀಕರಣ ಮತ್ತು ಪುನರುಜ್ಜೀವನ ಯತ್ನಗಳು ನಡೆದಿರುವುದು ದಿಟವಾಗುತ್ತದೆ. ಪಂಥವು ಕಾಲಾನು ಕ್ರಮೇಣ ಬ್ರಾಹ್ಮಣೀಕರಣ ಮತ್ತು ಮತೀಕರಣವನ್ನು ಪಡೆದಿರುವ ಸತ್ಯವನ್ನು ಜಾತ್ಯಾತೀತ ಚೌಕಟಿನಲ್ಲಿಡುವ ಪ್ರಯತ್ನವನ್ನು ಮಾಡಿದಾಗ ಇದು ಸ್ಪಷ್ಟವಾಗುತ್ತದೆ. ಒಂದೆಡೆ ನಾಥ ಸಮುದಾಯದ ಯುವ ಪೀಳಿಗೆಯು ಜೋಗಿ, ಕಪಾಲಿಕ, ನಾಥ, ಪುರುಷ ಎಂಬತ್ಯಾದಿ ಹೆಸರಿನ ಜೊತೆಗಿರುವ ನಾಮದ ಮುಜುಗರಗಳಿಂದ ಹೊರಬರಲು ಹವಣಿಸುತ್ತಿದ್ದರೆ, ಹಿರಿಯ ತಲೆಮಾರು ಸಂಘಟನಾತ್ಮಕವಾಗಿ ಮತ್ತೆ ನಾಥ ಪಂಥದ ಪರಂಪರೆಯ ಕೊಂಡಿಗಳನ್ನು ಬೆಸೆಯುವ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

ನೇಪಾಳಿ ಬ್ರಾಹ್ಮಣರಲ್ಲಿ 'ಜೋಗ್ಯ' ಎನ್ನುವ ಒಂದು ವರ್ಗವಿದೆ. ಅವರು 'ಜುಗೀ' ಇಲ್ಲವೇ ಕಪಾಲ ಎಂಬ ಹೆಸರಿನ ಭಿಕ್ಷುಕರು. ಇವರು ಕೈಯಲ್ಲಿ ಡಮರುಗ, ತ್ರಿಶೂಲ ಹಿಡಿದುಕೊಂಡು ಭಿಕ್ಷೆ ಬೇಡುತ್ತಾರೆ.[೬] ಕದ್ರಿಗೆ ಬರುವ ಝುಂಡಿಯಲ್ಲಿ ನೇಪಾಳದ ನಾಥರೂ ಇರುತ್ತಾರೆ. ಹಾಗಾಗಿ ಜೋಗ್ಯ, ಜುಗೀ, ಇವೆಲ್ಲವೂ ನಾಥ ಜೋಗಿಯ ರೂಪಗಳು ಎಂದು ತಿಳಿಯಬಹುದು.

ನಾಥವು ಸಿದ್ಧದ ಪರ್ಯಾಯ ಪದವಾಗಿದೆ. ನಾಥ ಪಂಥಕ್ಕೆ ಸಿದ್ಧ ಪಂಥ ಎಂಬ ಶಬ್ದವೂ ಇದೆ. ಚೌರಾಸಿ ಸಿದ್ಧರ ಪಟ್ಟಿಯಲ್ಲಿ ಅನೇಕ ನಾಥರು ಬರುತ್ತಾರೆ.[೭] ಸಿದ್ಧ ಪರಂಪರೆಯು ಒಂದು ದೊಡ್ಡ ನದಿ ಇದ್ದಂತೆ, ನಾಥವು ಅದರ ಉಪನದಿ. ನಾಥ ಪಂಥೀಯರ ದೈವವಾದ ಬೈರವನು ಸಿದ್ಧರ ಸಿದ್ಧೇಶ್ವರನಾಗಿರುವ ಕಾರಣ ಸಿದ್ಧ ಕ್ಷೇತ್ರಗಳು ಬೈರವರಾಧನೆಯ ತಾಣಗಳಾಗಿವೆ ಹಾಗಾಗಿ ಸಿದ್ಧರಿಗೂ ಜೋಗಿಗಳಲ್ಲೂ ಸಾಮ್ಯತೆ ಇರುವುದು ಕಾಣುತ್ತದೆ.

ಸಂದರ್ಭ ಸೂಚಿ

1. ರೆಹಮತ್ ತರೀಕೆರೆ, *ಕರ್ನಾಟಕದ ನಾಥಪಂಥ*, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006 ಪುಟ–33
2. ರೆಹಮತ್ ತರೀಕೆರೆ, *ಕರ್ನಾಟಕದ ನಾಥಪಂಥ*, ಕನ್ನಡ ವಿಶ್ವವಿದ್ಯಾಲಯ ಹಂಪಿ, 2006 ಪುಟ–201
3. ಜೋಗಿ ಆನಂದನಾಥ್, *ನಾಥ ಪಂಥ ಕ್ಷೇತ್ರ ಜೋಗಿ ಮಠ*, ನಾಥ ಸಂಪ್ರದಾಯ ಪ್ರಚಾರ ಸಮಿತಿ 2003, ಪುಟ–89
4. ರೆಹಮತ್ ತರೀಕೆರೆ, *ಕರ್ನಾಟಕ ನಾಥ ಪಂಥ*, ಕನ್ನಡ ವಿದ್ವವಿದ್ಯಾಲಯ ಹಂಪಿ, 2006 ಪುಟ–194
5. ಮಂಜೇಶ್ವರ ಮುಕುಂದ ಪ್ರಭು, *ಸ್ಮರಣ ಸಂಚಿಕೆ ಸಿದ್ಧ ಸುಂದರನಾಥ ಜೀ ಪಟ್ಟಾಭಿಷೇಕ ಶತಮಾನೋತ್ಸವ ಸಮಿತಿ*, 2007, ಪುಟ–18
6. ರೆಹಮತ್ ತರೀಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾನಲಯ ಹಂಪಿ, 2006, ಪುಟ–123
7. ರೆಹಮತ್ ತರೀಕೆರೆ *ಕರ್ನಾಟಕದ ನಾಥ ಪಂಥ*, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, 2006 ಪುಟ–164

ಅಧ್ಯಾಯ – ೫

ನಾಥ ಸಮುದಾಯದ ತುಳುನಾಡ ಜೋಗಿಗಳ ಸ್ಥಿತಿಗತಿ

ತುಳುನಾಡಿನಲ್ಲಿರುವ ನಾಥ ಮಠಗಳಿಗೆ ಅಧಿಪತಿಯಾಗಿರುವವರು ಉತ್ತರ ಭಾರತದ ನಾಥ ಯೋಗಿಗಳು. ಇಲ್ಲಿ ಬಹಳ ಹಿಂದಿನಿಂದಲೂ ನಾಥ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿ ಗುರುಮಠಗಳಿಗೆ ಭಕ್ತಿಯಿಂದ ನಡೆದುಕೊಳ್ಳುವ ಜೋಗಿ ಪಂಗಡದ ಜನರ ಸಮೂಹವಿದೆ. ಇವರನ್ನು ಪುರುಷರು, ನಾಥರು, ಜೋಗಿಗಳು ಎಂಬಿತ್ಯಾದಿ ಹೆಸರುಗಳಿಂದ ಕರೆಯಲಾಗುತ್ತಿದೆ. ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಶಿಕ್ಷಣ, ಉದ್ಯಮ ಮತ್ತು ಕಲಾ ಮುಂತಾದ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡ ನಾಥ ಸಮುದಾಯದ ಗೃಹಸ್ಥಜೋಗಿಗಳು ಸಮಾಜದಲ್ಲಿ ಉತ್ತಮ ಸ್ಥಾನಮಾನ ಗಳಿಸುತ್ತಿರುವುದು ಕಂಡು ಬರುತ್ತದೆ.

ಕದ್ರಿ ಸೀಮೆಯ ಜೋಗಿಗಳು 'ಜೋಗಿ ಸಮಾಜ ಸುಧಾರಕ ಸಂಘ' ಎಂಬ ನಾಥ ಪಂಥದ ಸಂಘಟನೆಯನ್ನು ಸಂಘಟಿಸಿ ಅದರ ಉಪಸಂಘಗಳನ್ನು ಸ್ಥಾಪಿಸುವ ಮೂಲಕ ಸುಸಂಘಟಿತರಾಗಿದ್ದಾರೆ. ಅಲ್ಲದೆ ಆಧುನಿಕ ಶಿಕ್ಷಣ ಮತ್ತು ಸಮಾಜ ಸುಧಾರಣೆಗೆ ಹೆಚ್ಚು ಒತ್ತು ನೀಡಿರುವುದು ಕಂಡುಬರುತ್ತದೆ. ಉಡುಪಿ ಜಿಲ್ಲೆಯ ಕುಂದಾಪುರದ ಬಳೆಗಾರ ಜೋಗಿಗಳು ಕರ್ನಾಟಕ ಜೋಗಿ ಸಮಾಜ ಸಮಿತಿ ಮಾಡಿಕೊಂಡು ತ್ರ್ಯಯಂಬಕೇಶ್ವರದಿಂದ ಕದಲೀತನಕ ಎಂಬ ಪುಸ್ತಕ ಪ್ರಕಟಿಸಿದರು. ಈ ಮೂಲಕ ಪ್ರಾಚೀನ ತಮ್ಮ ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಲು ತಮ್ಮ ಸಮಾಜದ ಭಾಂದವರನ್ನು ಪ್ರಚೋದಿಸಿದರು. ಧಾರ್ಮಿಕ ಶಿಕ್ಷಣದ ಪ್ರಸಾರದ ಜೊತೆಗೆ ನಾಥ ಪಂಥದ ಪುನರುಜ್ಜೀವನ ಅವರ ಉದ್ದೇಶವಾಗಿತ್ತು.

ಹಲವರಿ ಮಠಕ್ಕೆ ನಡೆದುಕೊಳ್ಳುವ ಬಳೆಗಾರ ಜೋಗಿಗಳು, ಈಗಲೂ ಪಾರಂಪರಿಕ ಕಸುಬಾದ ಬಳೆ ವ್ಯಾಪಾರವನ್ನು ಮಾಡುತ್ತಲಿದ್ದಾರೆ. ಅನ್ಯ ಸಮುದಾಯದ ಮಂದಿಗಳು ಇಂದಿಗೂ ಬಳೆಗಾರ ಜೋಗಿಗಳನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ ಅವರಿಂದ ಮದುಮಗಳ ಕೈಗೆ ಬಳೆ ತೊಡಿಸುವ 'ಬಳೆಶಾಸ್ತ್ರ' ಮಾಡಿಸಿ ಸತ್ಕರಿಸಿ ಕಳುಹಿಸುವ ಪರಿಪಾಠವಿದೆ.

ಕರಾವಳಿ ಜಿಲ್ಲೆಯಲ್ಲಿ ನಡೆಯುವ ಪ್ರಸಿದ್ಧ ಜಾತ್ರ ಸಂದರ್ಭಗಳಲ್ಲಿ ಬಳೆಗಾರ ಜೋಗಿಗಳು ಈಗಲೂ ಬಳೆ ಅಂಗಡಿ ಇಟ್ಟು ಅಲ್ಲಿ ಬಳೆ ವ್ಯಾಪಾರ ಮಾಡುವುದು ಕಾಣಬಹುದು. ಇವರನ್ನು ಕಾಜೀಗಾರ್‌ಗಳೆಂದು ಕೂಡಾ ಕರೆಯುತ್ತಾರೆ.

ಬಳೆಗಾರರು ಬಾಲಕ ರಾಷ್ಟ್ರಕವಿ 'ರನ್ನ' ತಮ್ಮ ಸಮುದಾಯದ ಕುಡಿ ಎಂದು ಹೇಳಿಕೊಂಡಿರುದರ ಐತಿಹ್ಯವು ಹೀಗಿದೆ. ರನ್ನನು ತನ್ನ ೯ನೇ ವಯಸ್ಸಿಗೆ ತಾಯಿಯ ಜೊತೆ ಬಳೆಯ ಮಲಾರವನ್ನು ಹೊತ್ತುಕೊಂಡು ಊರೂರು ಸುತ್ತುತ್ತಿರುವಾಗ ದಾರಿಯಲ್ಲಿ 'ಅಜಿತ ಸೇನಾಚಾರ್ಯ'ರೆಂಬ ಪಂಡಿತರು ಪ್ರವಚನ ಮಾಡುತ್ತಿರುತ್ತಾರೆ. ರನ್ನನು ಅದನ್ನು ಆಲಿಸುತ್ತಾ ಮೈಮರೆತು ಬಿಡುತ್ತಾನೆ ಬಾಲಕನನ್ನು ಗಮನಿಸಿದ ಅಜಿತ ಸೇನಾಚಾರ್ಯರು ಅವನನ್ನು ಬಳಿಗೆ ಕರೆದು ವಿಚಾರಿಸಿದಾಗ ಆತ ತನಗೆ ವಿದ್ಯೆ ಕಲಿಯಬೇಕೆಂಬ ಮನದ ಬಯಕೆಯನ್ನು ಅವರಲ್ಲಿ ತೋಡಿಕೊಳ್ಳುತ್ತಾನೆ. ಆಗ ಅವರು 'ಕೊಂಡು ಹೊತ್ತು ಮಾರಿ ಲಾಭ ಗಳಿಕೆ ಹೊಟ್ಟೆ ಹೊರೆಯಲು

ವಿದ್ಯೆಯೇನು ಬಳೆಯ ಮಲಾರವೇ? ಎಂದು ರನ್ನನನ್ನು ಮೂದಲಿಸುತ್ತಾರೆ. ವಿಚಲಿತನಾಗದ ರನ್ನ ತನ್ನ ಪಟ್ಟು ಸಡಿಲಿಸದಿದ್ದಾಗ ಅನ್ಯ ದಾರಿ ಕಾಣದೆ 'ಆತನಿಗೆ ವಿದ್ಯಾರ್ಜನೆ ಮಾಡುತ್ತಾರೆ. ಮುಂದೆ ಇದೇ ಬಾಲಕ ರಾಷ್ಟ್ರಕವಿಯಾಗುತ್ತಾನೆ.[೧]

ಇಲ್ಲಿ ಸಾಧನೆ, ಪರಿಶ್ರಮ ಮಾತ್ರದಿಂದಲೇ ಬಳೆಗಾರ ರನ್ನ ಗಗನದೆತ್ತರಕ್ಕೆ ಬೆಳೆದು ನಿಂತ ದೃಷ್ಟಾಂತವಿದೆ. ಶಿಕ್ಷಣಕ್ಕೆ ಮಹತ್ವ ನೀಡುವ ಈ ಸಂಗತಿಯನ್ನು ಪಠ್ಯದಲ್ಲೂ ಅಳವಡಿಸಿರುವುದು. ಕಾಣಬಹುದು.

ಬಳೆಗಾರ ಜೋಗಿಗಳು ಅರ್ಚಕರು :

ಉಡುಪಿಯ ಸೀಮೆಯಲ್ಲಿರುವ ಶಕ್ತಿ ದೇವತೆಗಳ ಗುಡಿಗಳಲ್ಲಿ ಪೂಜೆ ಪುನಸ್ಕಾರ ಕಾರ್ಯಗಳನ್ನು ಹೆಚ್ಚಾಗಿ ಬಳೆಗಾರ ಜೋಗಿಗಳೇ ಮಾಡುತ್ತಾರೆ.

ಉಡುಪಿಯ ಸೂಡಾ ಎಂಬಲ್ಲಿರುವ ಸುಮಾರು ೪೦೦ ವರ್ಷಗಳಷ್ಟು ಹಿಂದಿನ 'ಸಣ್ಣ ಜೋಗಿ ಮಠ' ಸೂಡಾ, ದೊಡ್ಡ ಜೋಗಿ ಮಠ ಸೂಡಾ. ನಾಲ್ಕು ತಲೆಮಾರಿನ ಇತಿಹಾಸವಿರುವ ಅಜೆಕಾರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ. ೬೦೦ ವರ್ಷಗಳ ಹಿಂದಿನದೆನ್ನಲಾದ ಬಾರಕೂರಿನ ಕಚ್ಚೂರು, ದುರ್ಗಾಪರಮೇಶ್ವರಿ ದೇವಸ್ಥಾನ. ೧೦೦೦ ವರ್ಷಗಳ ಇತಿಹಾಸವಿರುವ 'ಕಮಲಶಿಲೆ' (ಕಾಳಭೈರವ ಮಹಾಕಾಳಿ) ದೇವಸ್ಥಾನ. ೬೦೦ ವರ್ಷಗಳ ಹಿಂದಿನ ಮಹಾರಾಜರ ಕಾಲದಿಂದಲೂ ಪೂಜಿಸಲ್ಪಟ್ಟ ಬಾರಕೂರಿನ 'ಕಾಳಭೈರವ' ದೇವಸ್ಥಾನ. ಸುಮಾರು ೧೫೦ ವರ್ಷಗಳ ಹಿಂದಿನ ಇತಿಹಾಸವುಳ್ಳ ಬೈದೆಬೆಟ್ಟು ಎಂಬಲ್ಲಿ ಪೈ ಕುಟುಂಬಸ್ಥರು ಮತ್ತು ಮೂಡುಬಳೆಗಾರ ಬೆಟ್ಟು ಜೋಗಿ ಕುಟುಂಬಸ್ಥರು ಆರಾಧನೆ ಮಾಡಿಕೊಂಡು ಬರುತ್ತಿರುವ ಬೈದೆಬೆಟ್ಟು 'ಗುತ್ಯಮ್ಮದೇವಿ' ದೇವಸ್ಥಾನ. ಸುಮಾರು ೨೦೦ ವರ್ಷಗಳಿಗೂ ಮಿಕ್ಕಿದ ಇತಿಹಾಸವುಳ್ಳ ಶ್ರೀ 'ಕಾಳ ಬೈರವ' ದೇವಸ್ಥಾನ (ಬಳೆಗಾರಬೆಟ್ಟು ಪಶ್ಚಿಮ) ಬೈದೆಬೆಟ್ಟು, ಕಾಡೂರು ಎಂಬಲ್ಲಿ ಆದಿಕಾಲದಿಂದಲೂ ಪ್ರತಿಷ್ಠಾಪನೆಗೊಂಡ ಕಾಡೂರು ದುರ್ಗಾಪರಮೇಶ್ವರಿ ದೇವಸ್ಥಾನ. ೩೦೦ ವರ್ಷಗಳ ಪುರಾಣ ಪ್ರಸಿದ್ಧವಾದ ಬಸ್ರೂರು ಶ್ರೀ ದೇವಿ ಅಮ್ಮನವರ ದೇವಸ್ಥಾನ, ಮೂರು ಕನ್ನಿಕೆಯರಾದ ಲಕ್ಷ್ಮೀ, ಸರಸ್ವತಿ, ಮಹಾಕಾಳಿ ದೇವತೆಗಳಿರುವ ೫೦೦ ವರ್ಷಗಳಷ್ಟು ಹಿಂದಿನ ಕಂಡ್ಲೂರಿನ 'ಶ್ರೀ ಕನ್ನಿಕಾಪರಮೇಶ್ವರಿ' ದೇವಸ್ಥಾನ. ೭೦೦ ವರ್ಷಗಳ ಹಿಂದಿನ ಇತಿಹಾಸವುಳ್ಳ ಮಂದಾರ್ತಿಯ 'ಶ್ರೀ ಚಾಮುಂಡೇಶ್ವರಿ' ಅಮ್ಮನವರ ದೇವಸ್ಥಾನ, ಕುಂದಾಪುರ ಕಂಬದ ಕೋಣೆ ತೆಂಕಬೆಟ್ಟು ಎಂಬಲ್ಲಿನ ಹಳಗೇರಿ 'ಶ್ರೀ ಕಾಳಭೈರವ' ದೇವಸ್ಥಾನ. ಸುಮಾರು ೨೦೦ ವರ್ಷಗಳ ಇತಿಹಾಸವುಳ್ಳ ಕೆರ್ಗಾಲ್ಲು, ನಾಯ್ಕನ ಕಟ್ಟೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ. ಸುಮಾರು ೪೦೦ ವರ್ಷಗಳಷ್ಟು ಹಿಂದಿನದು ಎನ್ನಲಾದ ಉಳ್ಳೂರು 'ಕಾಳಭೈರವ' ದೇವಸ್ಥಾನ, ನಾಲ್ಕು ತಲೆಮಾರಿನಿಂದಲೂ ಉದ್ಭವ ಮೂರ್ತಿಯಾಗಿ ನಿಂತಿರುವ ಕಾಳಾವರ 'ಶ್ರೀ ವನದುರ್ಗಾ' ದೇವಸ್ಥಾನ. ೭೦೦ ವರ್ಷಗಳ ಹಿಂದಿನ ಬಾರ್ಕೂರು ವಸು ಮಹಾರಾಜರ ಕಾಲದ ಮಂಡಾಡಿ 'ಶ್ರೀ ದುರ್ಗಾಪರಮೇಶ್ವರೀ' ದೇವಸ್ಥಾನ.

ನಾಲ್ಕು ತಲೆಮಾರಿನಷ್ಟು ಹಿಂದಿನ ಇತಿಹಾಸವಿರುವ ಯಡ್ತಾಡಿ 'ಶ್ರೀ ಚಾಮುಂಡೇಶ್ವರಿ' ದೇವಸ್ಥಾನ, ಕೊಲ್ಲೂರಿನ 'ಕೊಡಚಾದ್ರಿ' ದೇವಸ್ಥಾನ ನಾಥ ಪಂಥದ ಸಿದ್ಧ ಯೋಗಿಗಳಿಂದ ಪೂಜಿಸಲ್ಪಟ್ಟ ನೀಲಾವರದ ಶ್ರೀ ಬೈರವ ಗಣಪತಿ ಮತ್ತು 'ದುರ್ಗಾಪರಮೇಶ್ವರಿ' ದೇವಸ್ಥಾನ.

ಸುಮಾರು ೮೨೫ ವರುಷಗಳಷ್ಟು ಹಿಂದಿನ ಇತಿಹಾಸವಿರುವ ಕೋಟೇಶ್ವರದ 'ಶ್ರೀ ದುರ್ಗಾಪರಮೇಶ್ವರಿ' ದೇವಸ್ಥಾನ. ೮೦೦ ವರ್ಷಗಳಷ್ಟು ಹಿಂದಿನದು ಎನ್ನಲಾಗುವ ಶ್ರೀ ಕಟ್ ಬೆಲ್ತೂರಿನ 'ಶ್ರೀ ಕಾಳ ಭೈರವ' ಮತ್ತು 'ಸಹಪರಿವಾರ' ದೇವಸ್ಥಾನ, ೫೦೦ ವರ್ಷಗಳಷ್ಟು ಹಿಂದಿನ ಕೆರಾಡಿ 'ಶ್ರೀ ಕಾಲಬೈರವ' ದೇವಸ್ಥಾನ. ೧೦೦ ವರ್ಷಗಳಷ್ಟು ಹಿಂದಿನ ತೆಗ್ಗರ್ಸೆ 'ಶ್ರೀ ಕಾಳ ಬೈರವ' ದೇವಸ್ಥಾನ. ೬೦೦ ವರ್ಷಗಳಷ್ಟು ಹಳೆಯದಾದ ನೇರಳಕಟ್ಟೆ 'ಸಣ್ಣಮ್ಮ ದೇವಿ' ದೇವಸ್ಥಾನ. ೫೦ ವರ್ಷಗಳ ಹಿಂದೆ ನಿರ್ಮಾಣಗೊಂಡ ಹಂಗ್ಳೂರು ವನದುರ್ಗಾ ದೇವಸ್ಥಾನ ೪೦೦ ವರ್ಷಗಳ ಹಿಂದಿನ ಗಿಳಿಯಾರು ಹೊನ್ನಾರಿ ಶ್ರೀ ಬೊಬ್ಬರ್ಯ ದೇವಸ್ಥಾನ. ೨೦೦ ವರ್ಷಗಳಷ್ಟು ಹಳೆಯದಾದ ಮೇಲುಬೆಟ್ಟು ಅಕ್ಲಾಡಿ ದೇವಿಯಮ್ಮ ದೇವಸ್ಥಾನ. ೬೦೦ ವರ್ಷಗಳ ಇತಿಹಾಸವಿರುವ ಜನ್ನಾದಿ (ಹಾಡಿಯಮ್ಮನವರು) 'ಶ್ರೀ ದುರ್ಗಾದೇವಿ' ದೇವಸ್ಥಾನ. ೫೦೦ ವರ್ಷಗಳಷ್ಟು ಹಿಂದಿನದ್ದು ಎನ್ನಲಾದ ಮತ್ಯಾಡಿ 'ಶ್ರೀ ವನದುರ್ಗಾ' ಪರಮೇಶ್ವರಿ ದೇವಸ್ಥಾನ. ೨೦೦ ವರ್ಷಗಳ ಹಿಂದಿನ 'ಅಶಿರೂರು ಸಿದ್ದೇಶ್ವರ' ದೇವಸ್ಥಾನ, ೭೦೦ ವರ್ಷಗಳ ಪುರಾತನದ ಎನ್ನಲಾದ ಹೇರೂರು ಶ್ರೀ 'ದುರ್ಗಾಂಬಿಕೆ' ದೇವಸ್ಥಾನ, ಸಾವಿರಾರು ವರುಷಗಳ ಪುರಾತನ ಇತಿಹಾಸವಿರುವ ಕೋಟದ ಶ್ರೀ ಕ್ಷೇತ್ರ 'ಅಮೃತೇಶ್ವರಿ' ಹಲವು ಮಕ್ಕಳ ತಾಯಿ ದೇವಸ್ಥಾನ, ೨೦೦ ವರ್ಷಗಳ ಪುರಾತನ ಕಕ್ಕುಂಜೆ ಶ್ರೀ 'ಸರ್ವೇಶ್ವರಿ ದೇವಸ್ಥಾನ, ೬೦೦ ರಿಂದ ೭೦೦ ವರ್ಷಗಳ ಇತಿಹಾಸವಿರುವ ಕೊರ್ಗಿ ಶ್ರೀ 'ವನದುರ್ಗಾ' ದೇವಸ್ಥಾನ, ಪುರಾತನ ಇತಿಹಾಸವನ್ನು ಹೊಂದಿರುವ ೧೭ ವರುಷಗಳ ಹಿಂದೆ ಜೀರ್ಣೋದ್ಧಾರಗೊಂಡ ಶಿರಿಯಾರ್ 'ಶ್ರೀ ಭದ್ರಕಾಳಿ' ದೇವಸ್ಥಾನ.[೨]

ಮೇಲಿನ ಈ ಎಲ್ಲಾ ದೇವಸ್ಥಾನಗಳಲ್ಲಿ ಜೋಗಿಗಳು ತಮ್ಮ ಕುಲದೇವರಾದ ಶ್ರೀ ಕಾಶೀಕಾಳಭೈರವ, ಶಕ್ತಿ ದೇವತೆ ಸೇರಿದಂತೆ ಪರಿವಾರ ದೈವಗಳಿಗೆ ಅರ್ಚನೆ ಕೆಲಸವನ್ನು ಬಹಳ ಹಿಂದಿನಿಂದಲೂ ಮಾಡುತ್ತಾ ಬಂದಿರುತ್ತಾರೆಂದು ತಿಳಿಯುತ್ತದೆ.

ನಾಥಪಂಥದ ಕದಲೀ ಶ್ರೀ ಯೋಗೇಶ್ವರ ಮಠದ ಅಧೀನಕ್ಕೊಳಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಮುಂಡಾಣ, ಯೆಯ್ಯಾಡಿ, ಮಣೇಲು, ವಿಟ್ಲ, ಉಡುಪಿ ಜಿಲ್ಲೆಯ ಸೂಡ, ಹಲವರಿ, ಮಂದರ್ತಿ, ಕೋಟ, ಶಿವಮೊಗ್ಗ ಜಿಲ್ಲೆಯ ಕಂಬದಾಳ, ಹೊಸೂರು, ಚಂದ್ರಗುತ್ತಿ, ಮಂಡಗದ್ದೆ, ಶಂಕರಘಟ್ಟ, ಬಾವಿಕೆರೆ, ತರೀಕೆರೆ, ಪಿಳ್ಳಳ್ಳಿ, ವದ್ದಿಕೆರೆ, ಜೋಗಿ ಹಳ್ಳಿ, ಚಿಕ್ಕಮಗಳೂರು ಜಿಲ್ಲೆಯ ಆಲ್ದೂರು, ದೇವರ ಮನೆ, ಮೂಡಿಗೆರೆ, ಮಂಡ್ಯ ಜಿಲ್ಲೆಯ ಆದಿ ಚುಂಚನಗಿರಿ, ಕೊಡಗು ಜಿಲ್ಲೆಯ ಮಡಿಕೇರಿ, ಗೋಣಿ ಬೀಡು, ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಜೋಗಿ ಮಟ್ಟಿ, ಉಪನಾಯಕನ ಹಳ್ಳಿ, ಮೊಳಕಾಲ್ಮೂರು, ಶಿರಾ, ಧಾರಾವಾಡ ಜಿಲ್ಲೆಯ ಬೈರಿ ದೇವರ ಕೊಪ್ಪ, ಸವದತ್ತಿ, ಹಂಡಿ ಬಡಗನಾಥ, ಬೆಳಗಾವಿ ಜಿಲ್ಲೆಯ ಡೊಂಗರಗಾಂವ್, ಕರೋಳ್, ಬಾಲೇವಾಡಿ ಬೆಂಗಳೂರಿನ ಕಬ್ಬನ್ ಪೇಟೆ ಇವಿಷ್ಟೇ ಅಲ್ಲದೆ ನೆರೆ ರಾಜ್ಯವಾದ ಕಾಸರಗೋಡು, ಉದ್ಯಾವರ, ಬಳ್ಳೂರು, ಹಡೂರು, ಕಾಜಂಗಾಡ್, ಅಲ್ಲಿಂದ ಮುಂದಕ್ಕೆ ಹುಬ್ಬಳ್ಳಿ, ಹಣಗಿಓಣಿ, ಹಳೆ ಹುಬ್ಬಳ್ಳಿ, ಎಲ್ಲಮ್ಮ ಗುಡ್ಡದ ಏಕನಾಥ ಜೋಗಿ ಮಠ ಸೌದತ್ತಿ, ಜೋಗಿ ಪಳ್ಳಿ ಆಗುಂಬೆ ಘಾಟಿ, ಮೇಗರವಳ್ಳಿ, ತೀರ್ಥಹಳ್ಳಿ, ಹಿರೇಕೇರೂರು, ಜೋಳದಾಳ, ಕೊಡಚಾದ್ರಿ, ಕೋಟ, ಖರೋಲಾ ಎಂಬಿತ್ಯಾದಿ

ಇನ್ನೂ ಹಲವಾರು ನಾಥ ಸಂಪ್ರದಾಯಸ್ಥ ಮಠಗಳಿವೆ. ವಿಶೇಷವೆಂದರೆ ಈ ಎಲ್ಲಾ ಮಠಗಳಲ್ಲೂ ಪೂಜಾರಿಕೆ ಮಾಡುವವರು ಜೋಗಿ ಸಮುದಾಯದ ಅರ್ಚಕರೆ. ಆದರೆ, ಈಗಾಗಲೇ ಶೈವ ಸಂಪ್ರದಾಯದ ಎಷ್ಟೋ ಮಠಗಳು ಜೋಗಿಗಳ ಕೈತಪ್ಪಿ ಇತರರ ಪಾಲಾಗಿದೆ.[೩] ಇಂಥಹ ಮಠಗಳಲ್ಲಿಯೂ ಕಾಳ ಭೈರವ, ಶಿವ ಮತ್ತು ಶಕ್ತಿ ದೇವತೆಗಳಿಗೆ ಪ್ರಮುಖ ಸ್ಥಾನವಿದೆ. ಆದರೆ, ನಾಥ ಸಂಪ್ರದಾಯದ ಆಚರಣೆ ಇಲ್ಲ.

ಸಾಂಸ್ಕೃತಿಕ ಚಹರೆಯ ಹುಡುಕಾಟದಲ್ಲಿ ನಾಥ ಸಮುದಾಯ:–

೨೦ನೇ ಶತಮಾನದಲ್ಲಿ ಅನೇಕ ಸಮುದಾಯಗಳು ಎಚ್ಚೆತ್ತುಕೊಂಡು ತಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಹರೆಯನ್ನು ಹುಡುಕುವ ತೀವ್ರತೆಗೆ ಬಿದ್ದವು. ಇಂತಹ ಸಮುದಾಯಗಳ ಸಾಲಿನಲ್ಲಿ ಜೋಗಿ ಸಮಾಜ ಸುಧಾರಕ ಸಂಘವೂ ಒಂದಾಗಿತ್ತು. ಈ ಸಂಘಟನೆಯು ಎಲ್ಲಾ ನಾಥಪಂಥೀಯ ಪಂಗಡಗಳು ಒಂದಾಗಬೇಕು ಎಂದು ಕರೆ ನೀಡುತ್ತಿರುವ ಸಂಗತಿ ಬಹುತೇಕ ಜನರ ಕಿವಿಗೂ ಬಿದ್ದಿತ್ತು. ಆದರೆ, ಜಾತಿ ವ್ಯವಸ್ಥೆ ಎಂಬ ಸಂಕೀರ್ಣ ಸಮಸ್ಯೆಯನ್ನು ಅಷ್ಟು ಬೇಗ ಸರಿಪಡಿಸುವುದು ಸುಲಭದ ಮಾತೇನಾಗಿರಲಿಲ್ಲ. ಜನಗಣತಿ ಮತ್ತು ಜಾತಿಗಳ ಅಧ್ಯಯನವನ್ನು ಮೊದಲು ಪ್ರಾರಂಭಿಸಿದ ಬ್ರಿಟೀಷರೇ ಈ ವಿಚಾರದಲ್ಲಿ ತಲೆ ಕೆಡಿಸಿಕೊಂಡಿದ್ದರು. ಅವರಿಗೆ ಕೆಲವು ಪಂಥಗಳು ಧರ್ಮವೇ? ಅಥವಾ ಜಾತಿಯೇ? ಎಂಬ ಗೊಂದಲವು ನಿತ್ಯ ಕಾಡುತ್ತಲಿತ್ತು. 'ಹಿಂದೂ' ಎನ್ನುವ ಚೌಕಟ್ಟಿನೊಳಗೆ ಇದನ್ನು ತರುವುದು ಕೂಡಾ ಅವರಿಗೆ ತುಂಬಾ ತ್ರಾಸದ ಕೆಲಸವಾಗಿತ್ತು. ಅವರು ಸಮಾಜವನ್ನು ೨ ವರ್ಗಗಳಾಗಿ ವಿಂಗಡಿಸಿದ್ದರು, ಅದರಲ್ಲಿ ಮೊದಲನೇ ಮಾರ್ಷಲ್ ರೇಸ್ ಎರಡನೇದ್ದು ವರ್ಗ ಕ್ರಿಮಿನಲ್ ರೇಸ್. ಕರ್ನಾಟಕ ಸರಕಾರ ನೇಮಿಸಿದ್ದ ಹಿಂದುಳಿದ ವರ್ಗಗಳ ವೆಂಕಟಸ್ವಾಮಿ ಆಯೋಗವು ಜೋಗಿ ಎಂಬ ಹೆಸರು ಅಲೆಮಾರಿಯಾದ ತಿರುಪೆ ಬೇಡುವ ಕಾರಣದಿಂದ ಬಂದಿದೆ. ಹಾಗಾಗಿ ಇದು ಅಲೆಮಾರಿ ಪುರೋಹಿತ ವರ್ಗವೆಂದು ವ್ಯಾಖ್ಯಾನಿಸಿತು. ಅದು ತಿರುಪೆ ಎನ್ನಲು ಕಿನ್ನರಿ ಜೋಗಿಗಳನ್ನೂ ಪುರೋಹಿತ ವರ್ಗವೆನ್ನಲು ಜೋಗಿ ದೀಕ್ಷೆ ಕೊಡುವ ಕಪಾಲಿಕರನ್ನೂ ಬಳಸಿಕೊಂಡಿತ್ತು.[೪] ಇಲ್ಲಿ ಬಿಕ್ಷೆ ಅಗೌರವದ ಸೂಚಕವಾದರೆ ಪುರೋಹಿತಿಕೆ ಗೌರವ. ವಾಸ್ತವಂಶದಲ್ಲಿ ಜೋಗಿ ಜನಾಂಗ ಎಂಬ ಶಬ್ದವು ಪಂಥವಾಚಕವೇ ಹೊರತು ಜನಾಂಗವಾಚಕವಲ್ಲ.

ಜೋಗಿ ಸಮುದಾಯದಲ್ಲಿ ತಮ್ಮ ಸಾಂಸ್ಕೃತಿಕ ಆಸ್ಮಿತೆ ಯಾವುದೆಂಬ ಹುಡುಕಾಟ ಪ್ರಾರಂಭವಾದಾಗ ಪಕ್ಕನೆ ನೆನಪಿಗೆ ಬರುವುದು ಪ.ಗು. ಹಳಕಟ್ಟಿಯವರು ಸಂಪಾದಿಸಿದ 'ವಚನ ಶಾಸ್ತ್ರಸಾರ'. ಇದು ೧೯೨೩ರಲ್ಲಿ ಪ್ರಕಟವಾಗಿತ್ತು. ಇದಾದ ಮೂರು ವರ್ಷಗಳಲ್ಲಿ ಕುರುಬರ ಚರಿತ್ರೆಯನ್ನು ಹನುಮಂತಯ್ಯರು ಪ್ರಾರಂಭಿಸಿದರು. ಹೀಗೆ ಧಾರ್ಮಿಕ ಪರಂಪರೆಯನ್ನು ಲಿಖಿತ ರೂಪದಲ್ಲಿ ಕಟ್ಟಿದ್ದರಿಂದ ಸಾಮಾಜಿಕ ಸಂಘಟನೆ ಆರಂಭವಾಯಿತು. ಇದು ಆಧುನಿಕ ಶಿಕ್ಷಣ ಮತ್ತು ರಾಜಕೀಯ ಪಾಲುದಾರಿಕೆ ಪಡೆಯಲು ಕಾರಣವಾಯಿತು. ಸರಕಾರಿ ನೌಕರಿ ಸೇರಿದಂತೆ ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ನೆಲೆಯಲ್ಲಿ ಪಾಲು ಪಡೆಯಲು ಇದೇ ಮಾನದಂಡವನ್ನು ಕೆಲವು ಸಮುದಾಯಗಳು ಅನುಕರಿಸಿದವೆಂದು ಹೇಳಬಹುದು. ಮುಂದಕ್ಕೆ ಇದೇ ದಾರಿಯಲ್ಲಿ ನಾಥ ಪಂಥೀಯರಂತಹ ಸಣ್ಣ ಸಮುದಾಯಗಳು ನಡೆದು ಬಂದವು.

ಸಮುದಾಯ ಪರಚಿಂತನೆಯಲ್ಲಿ ಸಂಘಟನೆ :

೧೯೩೮ರಲ್ಲಿ ಟಿ.ಬಿ. ಜೋಗಿಯವರ ಸಾರಥ್ಯದಲ್ಲಿ 'ದಕ್ಷಿಣ ಕನ್ನಡ ಜಿಲ್ಲಾ' ಜೋಗಿ ಜಾತಿ ಗೋರಕ್ಷ ವಿದ್ಯಾದಾಯಿನಿ' ಸಂಘ ಹುಟ್ಟು ಹಾಕಲಾಯಿತು. ೧೯೪೯ರಲ್ಲಿ ಇದು 'ಜೋಗಿ ಸಮಾಜ ಸುಧಾರಕ ಸಂಘ'ವಾಗಿ ಬೆಳೆದು ನಿಂತಿತ್ತು. ಮುಂದೆ ೧೯೭೮ರಲ್ಲಿ ಇದೇ ಸಂಘವು ಇನ್ನಷ್ಟು ವಿಸ್ತರಣೆಗೊಂಡು ಕರ್ನಾಟಕದ ಜೋಗಿ ಸಮಾಜ ಸುಧಾರಕ ಸಂಘವೆಂಬ ದೊಡ್ಡ ಆಲದ ಮರವಾಗಿ ಬೆಳೆದು ನಿಂತಿತು. ಇದರ ಒಂದು ಕವಲಿನಿಂದ 'ನಾಥ ಸಂಪ್ರದಾಯ ಪ್ರಚಾರ ಸಮಿತಿ'ಎಂಬ ಸಂಘಟನೆ ಹೊರಚಿಮ್ಮಿ ಬಂದು ಸಾಕಷ್ಟು ಸಮುದಾಯ ಪರ ಕೆಲಸ ಮಾಡಿತ್ತು.[೫] ಸಂಘಟನೆಯ ಮೂಲ ಆಶಯವೇನೆಂದರೆ ನಾನಾ ಉಪನಾಮಗಳಲ್ಲಿ ಗುರುತಿಸಿಕೊಂಡಿರುವ ಸಮಾಜ ಭಾಂದವರನ್ನು ಒಗ್ಗೂಡಿಸಿವುದು. ನಂತರ ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು. ಈ ಮೂಲಕ ತಮ್ಮ ಸಾಮಾಜಿಕ, ಧಾರ್ಮಿಕ, ಆರ್ಥಿಕ ಆಶಯಗಳನ್ನು ಪೂರೈಸುವುದು.

ಪಾಳುಬಿದ್ದ ಮಠಕ್ಕೆ ಜೀವ ತುಂಬಿದ ಬಳೆಗಾರರು :

ಉಡುಪಿ ಸೀಮೆಯ ಕುಂದಾಪುರದ ಬಳೆಗಾರ ಜೋಗಿಗಳು 'ಕರ್ನಾಟಕ ಜೋಗಿ ಸಮಾಜ ಸಮಿತಿ' ಮಾಡಿಕೊಂಡು 'ತ್ರ್ಯಯಂಬಕೇಶ್ವರದಿಂದ ಕದಲೀ ತನಕ' ಎಂಬ ಪುಸ್ತಕ ಹೊರತಂದರು. ಧಾರ್ಮಿಕ ಶಿಕ್ಷಣದಿಂದ ನಮ್ಮ ಪ್ರಾಚೀನ ಪರಂಪರೆಯ ಉಳಿವನ್ನು ಮಾಡಬಹುದೆಂಬ ವಿಶ್ವಾಸ ಅದರಲ್ಲಿತ್ತು. ಶಿಕ್ಷಣದ ಅಂಗವೇ ಸಾಹಿತ್ಯ ಎಂಬುವುದನ್ನು ಜನರಿಗೆ ಮನವರಿಕೆ ಮಾಡಿ ಸಮುದಾಯವು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂಬ ಅಭಿಪ್ರಾಯ ಅವರದ್ದಾಗಿತ್ತು. ಅವರು ಬಹುಕಾಲದಿಂದಲೂ ಪಾಳು ಬಿದ್ದಿದ ತಮ್ಮ ಮಠಗಳಿಗೆ ಮತ್ತೆ ಜೀವ ತುಂಬಿದರು. ನರಸಿಂಹ ಜೋಗಿ ಕಂಡ್ಲೂರು ಇವರ ನಾಯಕತ್ವದಲ್ಲಿ ಧಾರ್ಮಿಕವಾಗಿ ಅವರೆಲ್ಲ ಒಟ್ಟಾಗುವಂತಾಯಿತು.

ಭೂತನಾಥೇಶ್ವರ ನಿಯೋಗ :-

ನಾಥ ಪಂಥೀಯರಿಗೆ ಕರ್ನಾಟಕದಲ್ಲಿ ಅದಿಚುಂಚನಗಿರಿ ಮಠವು ಕೈಬಿಟ್ಟು ಹೋಗಿರುವುದು ದೊಡ್ಡ ಪಾಠ ಕಲಿಸಿತ್ತು. ನಾಥ ಪಂಥೀಯರ ಧಾರ್ಮಿಕ ಪರಂಪರೆ, ಸಾಮಾಜಿಕ ಶ್ರೇಷ್ಠತೆಯನ್ನು ಉಳಿಸುವ ನಿಟ್ಟಿನಲ್ಲಿ ೧೯೫೦ರಲ್ಲಿ ಅವಧೂತ್ ಯೋಗಿ ಮಹಾಸಭಾದ ಪ್ರಚಾರ ಮಂತ್ರಿ ಭೂತನಾಥೇಶ್ವರ್ ನಾಥಜೀ ಕದ್ರಿಗೆ ಬಂದು ಧರ್ಮ ಪ್ರಚಾರ ಕಾರ್ಯವನ್ನು ಕೈಗೊಂಡರು. ಅವರು ತಮ್ಮ ಸಂಗ್ರಹದಲ್ಲಿದ್ದ ನಾಥ ಪಂಥದ ಕುರಿತಾದ ತಾಳೆಗರಿಯಂತಹ ಅಮೂಲ್ಯ ದಾಖಲೆಗಳನ್ನು ವೇದಾಂತ ಶಿರೋಮಣಿ ಶ್ರೀ ಕಡವ ಶಂಭು ಶರ್ಮರಿಗೆ ಒಪ್ಪಿಸಿ ಅದನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿದರು. ಚತುರ ಸಂಘಟಕರಾನಾಗಿದ್ದ ಅವರು ಈ ಮೂಲಕ ನಾಥ ಪಂಥವನ್ನು ಪುನರುಜ್ಜೀವನಗೊಳಿಸಿದರು. ಆದರೆ, ಅವರು ನಾಥ ಸಂಪ್ರಾದಾಯಗಳನ್ನು ಪ್ರಗತಿ ಪರವಾಗಿ ರೂಪಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತರಾಗಲಿಲ್ಲ ಅವರು ಕರ್ನಾಟಕಕ್ಕೆ ಹೊರಗಿನವರಾಗಿದ್ದುದೇ ಇದಕ್ಕೆ ಕಾರಣ.

ನಾಥ ಪಂಥ ಪ್ರಚಾರ ಸಮಿತಿ :

ಭೂತನಾಥರು ಚಾಲನೆ ನೀಡಿದ್ದ ಈ ಕಾರ್ಯವನ್ನು ಪ್ರಚಾರ ಸಮಿತಿಯು ಮುಂದುವರಿಸಿತು. ಜೋಗಿ ಸಮುದಾಯದ ತರುಣರಿಗೆ ನಾಥ ಸಂಪ್ರದಾಯದ ಪ್ರಕಾರ ನಾಥ ದೀಕ್ಷೆ ಕೊಡಿಸುವ ಧಾರ್ಮಿಕ ಆಚರಣೆ ಮತ್ತು ಪೂಜೆಯ ವಿಧಾನವನ್ನು ಹೇಳಿ ಕೊಡಿಸುವ ಕೆಲಸ ಮಾಡಿತ್ತು. ಗೋರಕ್ಷನಾಥನ ಚಿತ್ರವನ್ನು ಪ್ರಕಟಿಸಿ ಜೋಗಿ ಸಮುದಾಯದ ಮಂದಿಗಳಿಗೆ ತಲುಪಿಸುವ ಕೆಲಸ ಕೂಡಾ ಮಾಡಿತ್ತು. ಈ ಎಲ್ಲಾ ಚಟುಟಿಕೆಗಳಲ್ಲಿ ಸಮಾಜದ ಕೆಲವು ಗಣ್ಯರು ಅವಿರತವಾಗಿ ತಮ್ಮನ್ನು ತೊಡಗಿಸಿಕೊಂಡರು.

ಈ ಸಮಿತಿಯು ಹುಬ್ಬಳ್ಳಿಯಲ್ಲಿ ನಡೆದ ನಾಥ ಪಂಥದ ಜೋಗಿ ಸಮುದಾಯದ ಮಹಾ ಸಭೆಗಳಲ್ಲೂ ಪಾಲು ಪಡೆಯಿತು. ಸಮಿತಿಯು ಹೊರಡಿಸಿದ ಜೋಗಿ ಜನಾಂಗದ 'ಜಾಗೃತಿ ಅಭಿಯಾನ ಎಂಬ ಕರಪತ್ರದಲ್ಲಿದ್ದ ಜೋಗಿ ಜನಾಂಗಕ್ಕೆ ಪವಿತ್ರ ಹಿನ್ನಲೆಯಿದೆ. ಇದನ್ನು ಅರಿತವರೆಷ್ಟೋ ನಾವರಿಯೆವು. ಅರಿಯದವರಿಗೆ ಒಂದಿಷ್ಟು ಹಿನ್ನಲೆ ಪರಿಚಯಿಸುವ ಪ್ರಯತ್ನ ಮಾಡಿದ್ದೇವೆ.' ಎಂಬ ಒಕ್ಕಣೆಯು ಕಳಚಿ ಹೋದ ಜೋಗಿ ಸಮುದಾಯದ ಕೊಂಡಿಗಳನ್ನು ಮತ್ತೆ ಬೆಸೆಯುವಂತಿತ್ತು. ೨೦೦೩ರಲ್ಲಿ ನಾಥ ಪಂಥದ ಯೋಗಿಗಳೊಡನೆ ಬಹುಕಾಲ ಒಡನಾಡಿದ ಜೋಗಿ ಆನಂದನಾಥರು 'ನಾಥ ಪಂಥ ಕ್ಷೇತ್ರ ಜೋಗಿ ಮಠವೆಂಬ' ಪುಸ್ತಕ ವನ್ನು ಪ್ರಕಟಿಸಿದರು. ಇದು ನಾಥ ಪರಂಪರೆಯ ಅಧ್ಯಯನಕ್ಕೆ ಹೊಸ ದಿಕ್ಸೂಚಿಯಾಯಿತು.

ನಾಥ ಸಂಪ್ರದಾಯದ ಒಳ ಪಂಗಡಗಳಲ್ಲಿ ತಾರತಮ್ಯವಿದ್ದರೂ ಕೂಡಾ ಅದೆಲ್ಲವನ್ನು ಕಳಚಿ ಒಂದಾಗುವ ಪ್ರಯತ್ನ ಇಲ್ಲಿತ್ತು ಎಂದು ಕಾಣುತ್ತದೆ. ಕರ್ನಾಟಕದ ನಾಥ ಪಂಥೀಯ ಜೋಗಿ ಜನಾಂಗ ಹುಬ್ಬಳಿಯಲ್ಲಿ ನಡೆಸಿದ ನಾಥಪಂಥೀಯ ಜೋಗಿ ಸಮುದಾಯದ ಚಾರಿತ್ರಿಕ ಸಮಾವೇಶವು ಒಂದು ಮಹತ್ವದ ತಿರುವನ್ನು ಪಡೆದಿತ್ತು. ಸಮ್ಮೇಳನವ ಕರಪತ್ರವು ಶ್ರೀ ಕಾಳ ಭೈರವ, ಮತ್ಸ್ಯೇಂದ್ರನಾಥ, ಗೋರಕ್ಷನಾಥರ ಹೆಸರಿನಿಂದ ಆರಂಭವಾಗಿತ್ತು. ಒಂದು ಕಾಲದಲ್ಲಿ ಉಚ್ಚ ಸ್ಥಿತಿಯಲ್ಲಿದ್ದ ಈ ಸಮುದಾಯವು ಹೇಗೆ ಅವನತಿಯ ಮಟ್ಟಕ್ಕೆ ಜಾರಿತೆಂಬ ಸಂಗತಿಯನ್ನು ಈ ಕರಪತ್ರವು ಬಿಂಬಿಸುತ್ತಿತ್ತು. ಕರ್ನಾಟಕದಲ್ಲಿ ಸುಮಾರು ೨ ಲಕ್ಷದಷ್ಟು ಜನಸಂಖ್ಯೆಯಿರುವ ಈ ಜನಾಂಗವು ಬಹುತೇಕ ಗುಡ್ಡಕಾಡುಗಳು, ನಗರ, ಪಟ್ಟಣ ಮತ್ತು ಹಳ್ಳಿಗಳ ಅಂಚಿನಲ್ಲಿದ್ದು,' ಬಡತನದಿಂದ ಕೂಡಿದ್ದ ಶೈಕ್ಷಣಿಕವಾಗಿ ಹಿಂದುಳಿದ ಜನಾಂಗವಾಗಿದೆ. ಸರಕಾರದ ಅಂಕಿ-ಅಂಶ ಪ್ರಕಾರ ಈ ಜನಾಂಗ ೦.೦೧ರಷ್ಟು ಶೈಕ್ಷಣಿಕವಾಗಿದೆಯೆಂದು ತಿಳಿದುಬರುತ್ತದೆ. ಇಂಥದ್ದೊಂದು ಈ ದಯನೀಯ ವರ್ತಮಾನಗಳನ್ನು ಇಟ್ಟುಕೊಂಡು ಸಂಘಟನೆಯನ್ನು ಬೆಳೆಸುವುದು ಈ ಮೂಲಕ ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ಮುಂದೆ ಬರುವುದಾಗಿತು. ಇದೆಲ್ಲ ಈ ಸಂದರ್ಭದಲ್ಲಿ ಅನೇಕ ಸಮುದಾಯಗಳು ಅನುಸರಿಸಿದ ಮಾರ್ಗೋಪಾಯಗಳು. ಇದೊಂದು ದಲಿರು ಸೇರಿದಂತೆ ೨೦ನೇ ಶತಮಾನದಲ್ಲಿ ಅನೇಕ ಹಿಂದುಳಿದ ಜಾತಿಗಳು ಮಾಡಿದ ಹೊಸ ಪ್ರಯೋಗ.[೬] ತಮ್ಮ ಅಸ್ಮಿತೆಯನ್ನು ಪಡೆದುಕೊಳ್ಳಲು ನಾಥ ಪಂಥಗಳು ಮಾಡುತ್ತಿರುವ ಪ್ರಯತ್ನಗಳು ಯಾವ ರೀತಿಯ ಫಲ ಕೊಡಬಹುದು ಎನ್ನುವುದು ನಿಖರವಾಗಿ ಹೇಳುವುದು ಕಷ್ಟದ ಮಾತು. ಆದರು ಇದು ಸಾಮಾಜಿಕವಾಗಿ ಮೇಲೇರಲು ಯತ್ನಿಸುತ್ತಿರುವುದು ತಿಳಿಯುತ್ತದೆ.

ಜೋಗಿಗಳ ಬದುಕು ವೈಶಿಷ್ಟ್ಯತೆಗಳ ಹೂರಣ :

ನಾಥ ಸಂಪ್ರದಾಯಸ್ಥ ಜೋಗಿಗಳ ಬದುಕೇ ವೈಶಿಷ್ಟ್ಯಗಳಿಂದ ಕೂಡಿದ್ದರೆ, ಅವರ ಸಾವಿನ ನಂತರವೂ ನಡೆಯುವ ಅಂತ್ಯ ಸಂಸ್ಕಾರದ ಪದ್ಧತಿ ಕೂಡಾ ತುಂಬಾ ವಿಭಿನ್ನ ನಾಥ ಸಂಪ್ರದಾಯದಲ್ಲಿ ಎಲ್ಲವೂ ಹನ್ನೆರಡು ಎಂಬ ಅಂಕೆಗಳಿಂದ ಆರಂಭವಾಗುತ್ತದೆ. ಸಂಪ್ರದಾಯದಂತೆ ತಪವನ್ನು ಆಚರಿಸಲು,ಯೋಗಸಿದ್ಧಿ ಪಡೆಯಲು, ಸಿದ್ಧ ಪುರುಷರ ಧಾರ್ಮಿಕ ಬೇಡಿಗಳಿಗೆ ಮತ್ತು ಸಂಪ್ರದಾಯದ ಪಂಥಗಳು ಹನ್ನೆರಡು ಎಂಬುವುದಕ್ಕೆ ಪ್ರಾಮುಖ್ಯತೆ ಹೆಚ್ಚು.

ನಾಥರಲ್ಲಿ ದೀಕ್ಷೆ ಕೊಟ್ಟಾಗ ಆರಂಭವಾಗುವ ಗುರು ಶಿಷ್ಯರ ಸಂಬಂಧ ಸಾವಿನ ತನಕವು ಮುಂದುವರಿಯುತ್ತದೆ. ದೀಕ್ಷೆ ಪಡೆದ ತಮ್ಮ ಶಿಷ್ಯರು ತೀರಿಕೊಂಡಾಗ ಜೋಗಪ್ಪ ಮಣ್ಣಿಗೆ ಹೋಗಬೇಕು. ನೆಲವನ್ನು ಅಗೆಯುವ ಮೊದಲು ಸಮಾದಿಯ ಭೂಮಿಯ ಮಣ್ಣನ್ನು ಪೂಜಿಸಿ ಅಗೆಯುತ್ತಾರೆ. ಸಮಾದಿಯ ಒಳಭಾಗವನ್ನು ಗಂಜಳದಿಂದ ಶುದ್ಧ ಮಾಡುತ್ತಾರೆ. ಅನಂತರ ಗೋಡೆಯ ಮೇಲೆ ವಿಭೂತಿಯಿಂದ ತ್ರಿಶೂಲದ ಚಿತ್ರವನ್ನು ಬರೆದು ಶವದ ಕಿವಿಯಲ್ಲಿರುವ ಕುಂಡಲಗಳನ್ನು ತೆಗೆದು ಸೋರೆಯ ಕುಂಡಲ ಹಾಕುತ್ತಾರೆ. ಶವವನ್ನು ಕೂರಿಸಿ ಅದರ ಬಲ ಹೆಗಲಿಗೆ ಜೋಳಿಗೆ ಕಟ್ಟಿ ಅದರಲ್ಲಿ ಬಿಲ್ವಪತ್ರೆ ಎಡ ಜೋಳಿಗೆಗೆ ಬುತ್ತಿ ಕಟ್ಟುತ್ತಾರೆ. ಚುಂಚನಗಿರಿ ಸೀಮೆಯಲ್ಲಿ ಈ ಬುತ್ತಿಗೆ ಕೋಳಿಮೊಟ್ಟೆ, ಮೊಸರನ್ನ ಹಾಕುವ ಪದ್ಧತಿಯಿದೆ. ೧೬ನೇ ದಿನದ ತಿಥಿಯಂದು ಸಮಾದಿಯ ನಾಲ್ಕು ಮೂಲೆಗಳಲ್ಲಿ ಹಾಗೂ ಎದೆ ಭಾಗಗಳಲ್ಲಿ ಕುಳಿತು ಸತ್ತವರ ಮಗನಿಂದ ಪಾದ ಪೂಜೆ ಮಾಡಿಸುತ್ತಾರೆ. ಇದಕ್ಕಾಗಿ ಹೊಸಬಟ್ಟೆ, ಕಂಬಳಿ, ಚಪ್ಪಲಿಯನ್ನು ಕಾಣಿಕೆಯಾಗಿಯೂ ಪಡೆಯುತ್ತಾರೆ. ಸಮಾದಿ ಮೇಲಿದ್ದ ವಿಭೂತಿಯನ್ನು 'ಸಿದ್ಧ ಬೂದಿ' ಎಂದು ಮನೆಗೆ ಒಯ್ಯುತ್ತಾರೆ.[೬] ಯೋಗ ಸಮಾದಿ ಸ್ಥಿತಿಯ ಕಲ್ಪನೆ ಇರುವ ಪಂಥಗಳಲ್ಲಿ ಈ ಸಾವು ಮೋಕ್ಷವೆಂದು ನಂಬಲಾಗುತ್ತದೆ.

ಕರಾವಳಿಯಲ್ಲಿ ನಾಥ ಸಮುದಾಯದ ಮಂದಿಗಳು ಸತ್ತ ಕೂಡಲೇ ಅವರ ಎರಡೂ ಕಾಲುಗಳನ್ನು ಪದ್ಮಾಸನದ ಭಂಗಿಯಲ್ಲಿಯೇ ತಕ್ಷಣ ಮಡಚಿ ಇರಿಸಲಾಗುತ್ತದೆ. ಇದಕ್ಕೆ ಕಾರಣ ಸತ್ತ ನಂತರ ದೇಹದ ಕೈಕಾಲುಗಳು ಗಟ್ಟಿಯಾದರೆ ಅವರನ್ನು ಕುಳಿತ ಭಂಗಿಯಲ್ಲಿ ಕೂರಿಸಿ ಶವ ಕೊಂಡೊಯ್ಯುವುದು ಕಷ್ಟ. ಈ ಹಿಂದೆ ಜೋಗಿಗಳು ಸತ್ತಾಗ ರುದ್ರಭೂಮಿಯವರೆಗೂ ದಾಸರ ಕಿರ್ತನೆ ಹಾಡಿನೊಂದಿಗೆ ಶವ ಯಾತ್ರೆಯು ಸಾಗುತ್ತಿತ್ತು. ಆದರೆ, ನಗರಗಳಲ್ಲಿ ಈಗ ಆ ಪದ್ಧತಿನಿಂತು ಹೋಗಿದೆ. ಹಿಂದೂ ಧರ್ಮದಲ್ಲಿ ಹೆಚ್ಚಾಗಿ ಜೋಗಿ ಸಂಪ್ರದಾಯಸ್ಥರನ್ನು ಮಾತ್ರ ಮಣ್ಣು ಮಾಡುವ ಕ್ರಮವಿದ್ದು ಅಲ್ಲಿ ಆರಡಿ ಆಳ ಮತ್ತು ಎರಡು ಅಡಿ ಅಗಲದ ಗುಂಡಿ ತೋಡಲಾಗುತ್ತದೆ. ಮತ್ತೆ ಆ ಗುಂಡಿಯ ಒಳಗಡೆಯಲ್ಲಿ ಬೆನ್ನಿನ ಭಾಗವು ಒಳ ಕೂರುವಂತೆ ಸ್ವಲ್ಪ ಮಣ್ಣು ಕೊರೆದು ತೆಗೆಯಲಾಗುತ್ತದೆ. ನಂತರ ದೇಹವನ್ನು ಅದರೊಳಗೆ ಪದ್ಮಾಸನದಲ್ಲಿ ಕೂರಿಸಲಾಗುತ್ತದೆ. ತಲೆಯ ಮೇಲ್ಭಾಗದ ಇಬ್ಬಾಗದಲ್ಲೂ ಎರಡು ಸಣ್ಣ ಕಿಂಡಿ ಮಾಡಿ ತೆಂಗಿನ ಕಾಯಿಯ ದೀಪವನ್ನು ಉರಿಸಿಡುತ್ತಾರೆ. ಶವದ ಹಣೆಗೆ ಭಸ್ಮ ಬಳಿದು ಬಲ ಹೆಗಲಿಗೆ ಜೋಳಿಗೆ ಕಟ್ಟಿ ಅದರಲ್ಲಿ ಅಕ್ಕಿ, ವೀಳ್ಯದೆಲೆ, ಅಡಿಕೆ, ಭರಣಿ, ಭಸ್ಮ ಮುಂತಾದ ವಸ್ತುಗಳನ್ನು ಇರಿಸಿ ಪದ್ದತಿಯಂತೆ ಮಣ್ಣು ತುಂಬಿ ಸಮಾಧಿ ಮಾಡಲಾಗುತ್ತದೆ. ಇಲ್ಲಿ ಸಮಾದಿ ಕ್ರೀಯೆಯ ಪದ್ಧತಿ ಮತ್ತು ಶಿವೈಕ್ಯರಾದ ಮೇಲೆ ಆತ್ಮ ಸದ್ಗತಿಗಾಗಿ ಮಾಡುವ ಕ್ರಿಯಗಳು ನಾಥ ಸಂಪ್ರದಾಯದ ರೀತಿಯಲ್ಲೇ ಇರುತ್ತದೆ.

ಸಂದರ್ಭ ಸೂಚಿ

೧ ಜೋಗಿ ಪಂಚಮಿ, ಜೋಗಿ ಸಮಾಜ ಸೇವಾ ಸಮಿತಿ (ರಿ.) ಉಡುಪಿ 2014 ಪುಟ –20
೨ ಅದೇ, 2014, ಪುಟ 28–43
೩ ಜೋಗಿ ಆನಂದನಾಥ, ನಾಥ ಪಂಥ ಕ್ಷೇತ್ರ ಕದ್ರಿ, ಪ್ರಕಾಶ್ ಗ್ರಾಫಿಕ್ಸ್ ಕುದ್ರೋಳಿ 2003, ಪುಟ–32
೪ ರೆಹಮತ್ ತರಿಕೆರೆ, ಕರ್ನಾಟಕದ ನಾಥ ಪಂಥ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ 2006 ಪುಟ–304
೫ ಅದೇ 2006, ಪುಟ–304
೬ ಅದೇ 2006, ಪುಟ–305
೭ ಅದೇ 2006, ಪುಟ–112

ಅಧ್ಯಾಯ-೬

ತ್ರ್ಯಯಂಬಕೇಶ್ವರದಿಂದ-ಕದಲೀ ತನಕ-ಝುಂಡಿಯಾತ್ರೆ

ಭಾರತದ ಪ್ರಯಾಗ್, ಉಜ್ಜಯಿನಿ, ಹರಿದ್ವಾರ ಹಾಗೂ ತ್ರ್ಯಯಂಬಕೇಶ್ವರದಲ್ಲಿ ಮೂರು ವರ್ಷಗಳಿಗೊಮ್ಮೆ ಒಂದೊಂದು ಕಡೆ ಕುಂಭ ಮೇಳ ನಡೆಯುತ್ತದೆ. ಹನ್ನೆರಡು ವರುಷಕ್ಕೊಮ್ಮೆ ನಾಸಿಕ್‌ನಲ್ಲಿ ನಡೆಯುವ ಕುಂಭಮೇಳದ ನಂತರ ಈ ಝುಂಡಿಯಾತ್ರೆಯು ಹೊರಡುತ್ತದೆ. ಕುಂಭ ಮೇಳದಲ್ಲಿ ನಾಥ ಸಂಪ್ರದಾಯಕ್ಕೊಳಪಟ್ಟ ಹನ್ನೆರಡು ಪಂಥಗಳ ಯೋಗಿಗಳು, ಅಖಿಲ ಭಾರತ ವರ್ಷೀಯ ಅವಧೂತ್ ಯೋಗಿ ಮಹಾಸಭಾ ಬೇಖ್ ಬಾರಹ ಪಂಥದ ಪ್ರಮುಖರು ಸೇರಿಕೊಂಡು, ಮುಂದಿನ ಹನ್ನೆರಡು ವರುಷಗಳಿಗೆ ಪರ್ಯಾಯ ಪೀಠಕ್ಕೆ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿ ನಿಯಮಾನುಸಾರ ಪ್ರತಿಷ್ಠಾಪನೆ ಮಾಡಿರುವ 'ಪಾತ್ರದೇವತಾ' ಸಮೇತ ನಾಗರ ಪಂಚಮಿಯ ದಿನದಂದು ಸುಮಾರು ೫೦೦ ಸಾಧು ಸನ್ಯಾಸಿಗಳ ಜೊತೆ ಅಲ್ಲಿಂದ ಹೊರಟು, ಶಿವರಾತ್ರಿಗೆ ಸರಿಯಾಗಿ ಕರ್ನಾಟಕದ ಮಂಗಳೂರಿನ ಕದಲೀಯ ಜೋಗಿ ಮಠದವರೆಗೂ ಬರೀಗಾಲಲ್ಲಿ ೧,೧೫೫ ಕಿ.ಮೀ. ಕ್ರಮಿಸುತ್ತಾ, ದಾರಿ ಮಧ್ಯೆ ಸಿಗುವ ಸುಮಾರು ೭೯ ಕ್ಷೇತ್ರಗಳಲ್ಲಿ ವಿರಮಿಸಿಕೊಂಡು ಕೊನೆಯ ೮೦ನೇ ಪ್ರಮುಖ ಪುಣ್ಯ ಕ್ಷೇತ್ರವಾದ ಕದಲೀಗೆ ಬಂದು ತಲುಪುವ ನಾಥ ಪಂಥೀಯ ಯೋಗಿ ಸಾಧುಗಳ ನಡಿಗೆಯ ವೈಶಿಷ್ಟ್ಯಪೂರ್ಣ ಯಾತ್ರೆಯೇ ನವನಾಥ ಝುಂಡಿ.

ಝುಂಡಿಯು ವಿಶ್ರಾಂತಿ ಪಡುವ ಕ್ಷೇತ್ರಗಳು

ತ್ರ್ಯಂಬಕೇಶ್ವರ, ನಾಸಿಕ, ಸಾಯಿಖೇಡಾ, ಸಿನ್ನರ್, ದ್ರೋಡಿಬುದ್ರಕ್, ನಾದುರ್ ಸಿಗೋಟ್, ಸಂಗಮನೇರ್, ಹೈಬರ್‌ಗಾಂವ್, ಚಂದನಾಪುರಿ, ಡೋಲಸಾ, ಥಾರ್‌ಗಾಂವ್, ಪೀಪಲ್ ಭಂಡಿ, ಗುಂಜಲ್‌ವಾಡಿ, ಅರ್ವಿ, ಸಾವರ್‌ಗಾಂವ್, ಪಾವುಂಡಾ, ಚಿಂಚೋಳಿ, ಖಿಲಾರ್‌ವಾಡಿ, ಮಹಾಲುಂಗೇ, ಬಡಗಾಂವ್, ಮಂಚರ್, ಖೇಡಗಾಂವ್, ಚಾಕನ್, ಮೋಸಿ, ಭೋಸರಿ, ಪೂನಾಸಿಟಿ, ಅರಣ್ಯೋಶ್ವರ್, ಬೈರವ್‌ನಾಲಾ, ಹಡಪಸರ, ಸಾಸವಾಡ, ಭಿವಂಡಿ, ಕಿಕ್‌ವಿ, ಸಿವಲೇ, ಭುಯಿಜ್, ಉಡತಾರಾ, ಸತರಾ, ಕೋರೆಗಾಂವ್, ಕುಮಟಾ, ರಹಿಮತ್ ಪೂರ್, ಓಗಲೇವಾಡಿ, ಕರಾಡ್, ವಡಗಾಂವ್, ಮಚ್ಚೇಂದ್ರ ಗಢ, ಇಸ್ಲಾಂಪುರ, ರೇಟರೇಧರಣ್, ಬತ್ರೀಸ್‌ಸಿರಾಳ, ಮಾಂಗಲೇಗಾಂವ್, ಮೋಹುರೇಗಾಂವ್, ಕೋಲಾಪುರ್ ಗಾಂಧಿನಗರ್, ಕಾಗಲ್, ನಿಪ್ಪಾಣಿ, ಸಂಕೇಶ್ವರ, ಬೆಳಗಾಂವ್ ಡಿಪೋ, ಬೆಳಗಾಂವ್ ಸಿಟಿ, ಖಾನಾಪೂರ್, ಡೋಂಗರಗಾಂವ್, ಖರೋಲಾ, ಬಾಲೇವಾಡಿ, ಲೋಂಡಾ, ಹಂಡಿಬಡಂಗ, ನಾಗರಗಾಲಿ, ಗೋದಗಿರಿ, ಮಂಗಳವಾಡ್, ಹಳಿಯಾಳ, ಕೇರಲ್ ಕಟ್ಟೆ, ಸಾಂಬ್ರಾಣಿ, ಯಲ್ಲಾಪುರ, ಮಂಚಗಿರಿ, ಶಿರಸಿ, ಚಂದ್ರಗುತ್ತಿ, ಸಾಗರ, ಹೊಸನಗರ, ನಗರ, ಹಲವರಿ, ಬಾರ್ಕೂರು, ಉಡುಪಿ, ಮುಲ್ಕಿ, ಪಣಂಬೂರು, ಕದಲೀ.[೧]

ನಾಥ ಪಂಥದ ಶೈವ ಸಂಪ್ರದಾಯಕ್ಕೆ ಶಿವನೇ ಮುಖ್ಯ ಅದಿದೇವತೆ. ನಾಥ ಜೋಗಿಗಳು ಗಯಾ ಪ್ರಯೋಗ, ವಾರಣಾಸಿ, ಅಯೋಧ್ಯೆ, ತ್ರಂಬಕೇಶ್ವರ, ದ್ವಾರಕ, ಹರಿದ್ವಾರ, ಬದರೀ, ಕೇದಾರ, ವೃಂದಾವನ, ರಾಮೇಶ್ವರ, ಪುಷ್ಕರ ನೇಪಾಳ, ಕಾಶ್ಮೀರ ಮುಂತಾದ ತಾಣಗಳಲ್ಲಿ

ಸಂಚರಿಸುತ್ತಾರೆ. ಪಾತ್ರದೇವತಾ ಪಾದಯಾತ್ರೆ ಹೊರಡುವ ಮುನ್ನ ಯೋಗಿಗಳು ಒಟ್ಟು ಸೇರಿ ಬಾರಹ ಪಂಥದ ನಿಯಮಾವಳಿಗೆ ಅನುಸಾರವಾಗಿ ಆಡಳಿತ ಯಂತ್ರವು ಸುಸೂತ್ರವಾಗಿ ನಡೆದುಕೊಂಡು ಹೋಗಲು ಒಂದು ರಚನೆ ಮಾಡಿಕೊಳ್ಳುತ್ತಾರೆ. ಇದರಲ್ಲಿ ಪಾತ್ರದೇವತಾ ಮಹಂತ (ರಾಜಯೋಗಿ) ಕಾರಭಾರಿ (ಕಾರ್ಯದರ್ಶಿ) ಭಂಡಾರಿ (ಅಡುಗೆಯವ) ಕೊಠಾರಿ (ಗುಮಾಸ್ತ) ಹಾಗೂ ಪೂಜಾರಿ (ಅರ್ಚಕ) ಹನ್ನೆರಡು ಜನ ಪಂಚರು, ಪಂಖ, ರೋಟ್ ಭಂಡಾರಿ (ಅಡುಗೆ ವ್ಯವಸ್ಥೆ ನೋಡಿಕೊಳ್ಳುವವರು) ಮತ್ತು ಝುಂಡಿಯ ನಿಯಂತ್ರಣಾಧಿಕಾರಿ ಮುಂತಾದ ಪದಾಧಿಕಾರಿಗಳೊಂದಿಗೆ ಸೇರಿಕೊಂಡು ಯಾತ್ರೆಯು ಮುಂದುವರಿಯುತ್ತದೆ.

ದೈಹಿಕ ದಂಡನೆಯ ಮೂಲಕ ಭೋಲೇನಾಥನ ಹುಡುಕಾಟದಲ್ಲಿರುವ ಪ್ರಾಚೀನ ಆಧ್ಯಾತ್ಮಿಕ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿರುವ ಖಾವಿಧಾರಿ ಸಾಧುಗಳ ಬದುಕು ನಿಜಕ್ಕೂ ರೋಚಕ. ಅನ್ಯರು ನೀಡುವ ನೀರು ಕೂಡಾ ಮುಟ್ಟದೆ ದಿನನಿತ್ಯ ೨೫ ರಿಂದ ೩೦ ಕಿ.ಮೀ. ಕ್ರಮಿಸುವ ಇವರಿಗೆ ಕಾಲಿಗೆ ಆಕಸ್ಮಾತ್ ಮುಳ್ಳು ಚುಚ್ಚಿದರೂ ಬೇರೊಬ್ಬರು ಬಂದು ನೋಡಬೇಕು. ಪ್ರಯಾಣದಲ್ಲಿ ಒಂದೊಮ್ಮೆ ಯೋಗಿಯೊಬ್ಬ ಮೃತನಾದರೆ ಅವನ್ನು ಮುಂದಿನ ಮಠದವರೆಗೂ ಒಯ್ದು ಅಲ್ಲಿ ಸಮಾಧಿ ಮಾಡುತ್ತಾರೆ. ಪ್ರಾತ: ಕಾಲದಲ್ಲಿ ಪ್ರತಿಯೊಬ್ಬ ಸಾಧುವು ಸ್ನಾನ ಮುಗಿಸಿ ಗಂಗೆಯನ್ನು ಗುರುವಿನ ಮುಂದಿಟ್ಟು ನಮಸ್ಕರಿಸಿ ಆನಂತರ ಅದನ್ನು ವೃಕ್ಷಕ್ಕೆ ಹೊಯ್ಯುತ್ತಾರೆ. ಬೆಳಿಗ್ಗೆ ಮತ್ತು ಸಾಯಂಕಾಲ ಎರಡು ಹೊತ್ತು ಚಪಾತಿ ಮತ್ತು ಮಧ್ಯಾಹ್ನದ ಒಂದು ಹೊತ್ತು ಊಟವನ್ನು ತಾವೇ ಸಿದ್ಧಪಡಿಸಿ ಉಣ್ಣುತ್ತಾರೆ. ತಮ್ಮ ಪ್ರಯಾಣದುದ್ದಕ್ಕೂ ನಾಥ ಮಠಗಳು ಇದ್ದಲ್ಲಿ ಒಂದೆರಡು ದಿನ ತಂಗುತ್ತಾರೆ. ಇಲ್ಲವಾದಲ್ಲಿ ಒಂದೇ ರಾತ್ರಿ ಠಿಕಾಣಿ ಹೂಡಿ ಮರುದಿನ ಹೊರಡುತ್ತಾರೆ. ಬೀಡಿ, ಸಿಗರೇಟು, ಗಾಂಜಾವನ್ನು ಮುಚ್ಚು ಮರೆಯಿಲ್ಲದೆ ಸೇದುವ ಸಾಧುಗಳಿಗೆ ಅಮಲು ಪದಾರ್ಥ ಸೇವಿಸಬಾರದು, ಗುಂಪು ಬಿಟ್ಟು ಹೋಗಬಾರದೆಂಬ ಷರತ್ತುಗಳಿವೆ. ಯೋಗಿಗಳು ಠಿಕಾಣಿ ಹೂಡುವ ಎಲ್ಲಾ ಕ್ಷೇತ್ರಗಳಲ್ಲೂ ಪಾತ್ರದೇವತೆ ಮತ್ತು ಮನ್ಮಥನ ಕಾಮದಹನ ಪ್ರತೀಕವಾದ 'ಧುನಿ' (ಅಗ್ನಿಕುಂಡ) ಪೂಜೆ ಸೂರ್ಯೋದಯ ಮತ್ತು ಸೂರ್ಯಾಸ್ತದ ವೇಳೆ ನಡೆಯುತ್ತದೆ.

ರುದ್ರಾಕ್ಷಿಗಳನ್ನು ಜಟೆಯೊಂದಿಗೆ ಹೆಣೆದು ತಲೆಯ ಮೇಲೆ ಒಂದೆರಡು ಅಡಿಗಳೆತ್ತರದ ಗೋಪುರವನ್ನು ಕಟ್ಟಿಕೊಂಡ ಸಾಧುಗಳು, ಏಳು ವರುಷಗಳಿಂದ ಕಾಲೂರಿ ನಿಂತುಕೊಂಡೇ ಸೊಂಟದ ಮೇಲಿನ ಭಾಗವನ್ನು ಪಕ್ಕದಲ್ಲಿರುವ ಎತ್ತರವಾದ ಸ್ಟೂಲಿನಾಕಾರದ ವಸ್ತುವಿನ ಮೇಲೆ ಬಾಗಿಸಿ ನಿದ್ದೆ ಮಾಡುವ ಹಠಯೋಗಿ, ಹಿರಿಯ ಸಂತನೊಬ್ಬನ ಕಾಲೊತ್ತುತ್ತ ಸೇವೆ ಮಾಡುತ್ತಿರುವ ಕಿರಿಯ ಸಾಧುಗಳು. ಬೂದಿಯೇ ಕೆಲವರ ಬಟ್ಟೆ ಕತ್ತರಿಸದೆ ಬಿಟ್ಟ ಜಟೆಯೇ ಅವರಿಗೆ ಆಭರಣ.ಯಾರೂ ಕೂಡಾ ಕಂಡರಿಯದ ಜೀವನ ಶೈಲಿ ಚಿತ್ರವಿಚಿತ್ರ ಹೆಸರುಗಳು ಹೋಮ ಕುಂಡದಂತಿರುವ ಧುನಿಯಲ್ಲಿ ಧಗಧಗಿಸುತ್ತಿರುವ ಬೆಂಕಿಯ ಮುಂದೆ ಕುಳಿತು ಪ್ರಾರ್ಥನೆಯಲ್ಲಿ ತೊಡಗಿದ್ದ ಸಾಧುಗಳನ್ನು ಕಂಡಾಗ ಭಯ ಮತ್ತು ಕುತೂಹಲ ಒಮ್ಮೆಲೇ ಮೂಡುತ್ತದೆ. ಕರ್ನಾಟಕವನ್ನು ನಿಪ್ಪಾಣಿ ಮೂಲಕ ಪ್ರವೇಶಿಸುವ ಯಾತ್ರೆಯು ರಾಜ್ಯದಲ್ಲಿರುವ ನಾಥ ಪಂಥದ ಮಠಗಳಲ್ಲಿನ ಆಯಾ ಪಂಥಕ್ಕೊಳಪಟ್ಟ ಪೀಠಾಧಿಪತಿಗಳನ್ನು ತೆರವುಗೊಳಿಸಿ ಅದೇ ಪಂಥದ ಹೊಸ ಉತ್ತರಾಧಿಕಾರಿಗಳಿಗೆ ಝುಂಡಿಯಲ್ಲಿ ಸಾಗಿ ಬರುವ ಪಂಚರು ಆಡಳಿತ ವಹಿಸಿಕೊಡುತ್ತಾರೆ. ಕರ್ನಾಟಕದಲ್ಲಿ ಈಗ ಇರುವ ಸುಮಾರು ೧೭ ಮಠಗಳಲ್ಲಿ

ಹಿಂದಿನ ಹನ್ನೆರಡು ವರ್ಷಗಳ ಕಾಲಾವಧಿಯಲ್ಲಿ ನಡೆದ ಚಟುವಟಿಕೆಗಳನ್ನು ಪರಿಶೀಲಿಸಿ ಹಳಬರನ್ನು ತಮ್ಮ ಕೂಟಕ್ಕೆ ಸೇರಿಸಿ ಸಮರ್ಥರಿದ್ದವರನ್ನು ಮತ್ತೆ ಪುನರ್ನೇಮಿಸಿ ಮುಂದೆ ಸಾಗುತ್ತಾರೆ. ಹೀಗೆ ನೇಮಿಸಿದ ಪೀಠಾಧಿಕಾರಿಯನ್ನು 'ಪೀರ್' ಎಂದು ಕರೆಯುತ್ತಾರೆ. ವಿವಿಧ ಮಠಗಳ ಪೀಠಾಧಿಪತಿಗಳಿಗೆ ಆಯಾ ಮಠದ ಪ್ರಾಮುಖ್ಯತೆ ಆಧಾರದ ಮೇಲೆ ಬೇರೆ ಬೇರೆ ನಾಮ ವಿಶೇಷತೆಗಳಿವೆ. ಶ್ರೀಪಾತ್ರ ದೇವತಾ ಝುಂಡಿ ಯಾತ್ರೆಯು ಮಂಗಳೂರಿನ ೭೯ನೇ ಕ್ಷೇತ್ರವಾದ ಪಣಂಬೂರು ಶ್ರೀ ನಂದನೇಶ್ವರ ದೇವಸ್ಥಾನ ತಲುಪಿ ಅಲ್ಲಿಂದ ಕೊಟ್ಟಾರ ಚೌಕಿಯ ಕಡೆಗೆ ತಲುಪಿದಾಗ ಇಲ್ಲಿನ ಇತರ ಪ್ರದೇಶಗಳ ಜೋಗಿ ಸಮಾಜದ ಬಂಧುಗಳು ಹಾಗೂ ಭಕ್ತ ಬಾಂಧವರು ಸೇರಿಕೊಂಡು ಸಂಭ್ರಮದಿಂದ ಝುಂಡಿಯ ಪುರ ಪ್ರವೇಶವನ್ನು ಸ್ವಾಗತಿಸುತ್ತಾರೆ. ಅಲ್ಲಿಂದ ಊರ್ವಸ್ಟೋರ್ಸ್, ಚಿಲಿಂಬಿಯ ಸಾಯಿಬಾಬ ಮಂದಿರದ ಮುಂಬಾಗದಿಂದ ಮಣ್ಣಗುಡ್ಡೆಯಾಗಿ ಕುದ್ರೋಳಿ ಗೋಕರ್ಣನಾಥೇಶ್ವರ ದೇವಸ್ಥಾನ ತಲುಪಿ ಬಳಿಕ ಶ್ರೀ ಕ್ಷೇತ್ರದ ವತಿಯಿಂದ ಸ್ವಾಗತಿಸಲ್ಪಟ್ಟು ಅಳಕೆಗೆ ಬರುತ್ತದೆ. ಅಲ್ಲಿ ದಿವಂಗತ ವ್ಯಾಪಾರಿ ನಗರ್ ಶ್ರೀನಿವಾಸ್ ರಾವ್ ಕುಟುಂಬದಿಂದ ಝುಂಡಿಯಲ್ಲಿ ಬಂದಿರುವ ಯೋಗಿಗಳಿಗೆ ಫಲಾಹಾರ ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿಂದ ಮುಂದೆ ರಥಬೀದಿಯಾಗಿ ಶ್ರೀ ವೆಂಕಟರಮಣ ದೇವಸ್ಥಾನದ ಬಳಿ ಬರುವಾಗ ಅಲ್ಲಿನ ಗೌಡ ಸಾರಸತ್ವ ಬ್ರಾಹ್ಮಣ ಸಮಾಜದವರು ಯೋಗಿಗಳ ದಾಹ ತಣಿಸಲು ಪಾನಕ ನೀಡುತ್ತಾರೆ. ಅಲ್ಲಿಂದ ಮುಂದುವರಿದ ಯಾತ್ರೆಯು ಕೊಡಿಯಾಲ್‌ಬೈಲ್‌ನ ನವಭಾರತ್ ಸರ್ಕಲ್ ಆಗಿ ಪುತ್ತು ವೈಕುಂಠ ಶೇಟ್‌ರವರ 'ಲಕ್ಷ್ಮೀಬಾಗ್' ಮನೆಯಲ್ಲಿ ತಂಗಿ ಉಪಚಾರಗಳನ್ನು ಪಡೆದು ಬಂಟ್ಸ್ ಹಾಸ್ಟೆಲ್, ಮಲ್ಲಿಕಟ್ಟೆಯಾಗಿ ಕದಲೀ ಶ್ರೀ ಮಂಜುನಾಥ ದೇವಸ್ಥಾನವನ್ನು ತಲುಪುತ್ತದೆ. ಅಲ್ಲಿ ಶ್ರೀ ಮಂಜುನಾಥನ ದರ್ಶನ ಪಡೆದು ದೇವಸ್ಥಾನದ ಪೂರ್ವದ ಮೇಲಿನ ಗೋಪುರದ ದ್ವಾರದ ಮೂಲಕ ಶಾಂತಿಕಟ್ಟೆಯ ದಾರಿಯಾಗಿ ಕದಳೀ ಶ್ರೀ ಜೋಗಿ ಮಠದ ಮುಖ್ಯ ರಸ್ತೆ ಸೇರಿ ಅನಂತರ ಭಾವೀ ಅರಸನು ಜೋಗಿ ಮಠದ ಐತಿಹಾಸಿಕ "ಬಾರಹ ಪಂಥ ಕಟ್ಟೆ'ಯ ಶಿಲಾಪೀಠದಲ್ಲಿ ಪಾತ್ರ ದೇವತೆಯನ್ನಿರಿಸಿ ಪೂಜಾ ವಿಧಾನಗಳು ನಡೆಯುತ್ತದೆ. ನಿರ್ಗಮನದ ಪೀಠಾಧಿಪತಿಗಳಾದ ಸಂಧ್ಯಾನಾಥ್‌ಜೀಯವರು ಸಕಲ ವೈಭವಗಳೊಂದಿಗೆ 'ಬಾರಹ ಪಂಥ ಕಟ್ಟೆ'ಯ ಬಳಿ ಬರುತ್ತಾರೆ. ಅಲ್ಲಿ ನಿಯೋಜಿತ ಪೀಠಾಧಿಪತಿ (ಶ್ರೀ ನಿರ್ಮಲನಾಥ್‌ಜೀ) ಗಳನ್ನು ಮತ್ತು ಝುಂಡಿಯಲ್ಲಿ ಬಂದ ಸಾಧು ಸಮೂಹಗಳನ್ನು ಆದರದಿಂದ ಸ್ವಾಗತಿಸಿ ಮಠಕ್ಕೆ ಬರಮಾಡಿಕೊಳ್ಳುತ್ತಾರೆ. ಮಠದೊಳಗೆ ಯೋಗಾರೂಢ ಶ್ರೀ ಸುಂದರನಾಥ್‌ಜೀಗಳ ಪೀಠದ ಮುಂದೆ ಪಾತ್ರದೇವತೆಯನ್ನು ಇರಿಸಿ ಪಾರಂಪರಿಕ ಪೂಜಾ ವಿಧಿಗಳನ್ನು ಮಾಡುತ್ತಾರೆ. ಝುಂಡಿಯು ಮಠವನ್ನು ತಲುಪಿದ ಹತ್ತನ್ನೆರಡು ದಿನಗಳ ಅಂತರದಲ್ಲಿ ಮಹಾಶಿವರಾತ್ರಿ, ಈ ದಿನ ನಾಥಪಂಥೀಯರಿಗೆ ಭಾರತದಲ್ಲೇ ಅತ್ಯಂತ ಪ್ರತಿಷ್ಠೆಯ ಮಠವಾದ ಕದಲೀ ಮಠಕ್ಕೆ ಕಪಲಾನಿ, ಬೈರಾಗ್, ಗಂಗಾನಾಥ್ ಹಾಗೂ ಧರಿಯಾನಾಥ್ ಈ ನಾಲ್ಕು ಪಂಥಗಳ ಯೋಗಿಗಳಲ್ಲಿ ಆಯ್ಕೆಯಾದವರಿಗೆ ಮಾತ್ರ ರಾಜ ಪಟ್ಟದ ಭಾಗ್ಯ ಒಲಿದು ಬರುತ್ತದೆ.

ವಿಟ್ಲದ ಜೋಗೇಶ್ವರ ಮಠ ಕಷ್ಟೇ ಸೀಮಿತವಾದ ಸತ್ಯನಾಥ ಪಂಥದ ಪೀಠಾಧಿಪತಿಗಳಿಗೆ 'ರಾಜ ಗುರು' ಎಂಬ ಮಾನ್ಯತೆಯಿದೆ. ಅವರಿಗೂ ಕದಲಿ ಜೋಗಿ ಮಠದಲ್ಲಿ ಕದಲಿ ಅರಸನ ಜೊತೆಯಲ್ಲೇ ಪಟ್ಟಾಭಿಷೇಕವಾಗುತ್ತದೆ. ಮೊದಲಿಗೆ ಬ್ರಾಹ್ಮಣ ಪುರೋಹಿತರಿಂದಲೂ ನಂತರದಲ್ಲಿ ನಾಥ ಪಂಥೀಯ ಸಂಪ್ರದಾಯದಂತೆ ವಿಜೃಂಭಣೆಯ ರಾಜ ಪಟ್ಟಾಭಿಷೇಕ ನಡೆಯುತ್ತದೆ.

ಪಟ್ಟಾಭಿಷೇಕದ ಬಳಿಕ ಸಿದ್ದಗುರು ಸುಂದರನಾಥರ ರಾಜ ಗದ್ದುಗೆಯಲ್ಲಿ ಕೂರಿಸಿ ನೂತನ ಅರಸನ ಕೈಗೆ ಬೆಳ್ಳಿಯ ಪಟ್ಟದ ಕತ್ತಿಯನ್ನು ನೀಡಲಾಗುತ್ತದೆ. ನಿರ್ಗಮಿತ ಅರಸ ತಾನು ಹನ್ನೆರಡು ವರುಷ ಪೂಜಿಸಿದ ಪಾತ್ರದೇವತೆಯನ್ನು ಅಲ್ಲಿಂದ ತೆರೆವು ಮಾಡಿ ಆ ಸ್ಥಾನದಲ್ಲಿ ಪಟ್ಟಾಭಿಷಿಕ್ತ ಅರಸರು ಕಾಲ್ನಡಿಗೆಯಲ್ಲಿ ಹೊತ್ತು ತಂದ ಪಾತ್ರ ದೇವತೆಯನ್ನು ಪ್ರತಿಷ್ಠಾಪಿಸುತ್ತಾರೆ. ಈ ಪಾತ್ರದೇವತೆ ಎಂದರೆ ರಾಜನು ತನ್ನ ಜೊತೆಯಲ್ಲಿ ಹಿಡಿದುಕೊಂಡು ನಡೆಯುವ ಮಣ್ಣಿನ ಮಡಕೆ. ಮಡಕೆಯೊಳಗೆ ನಾಥರು ಧರಿಸುವ ಜನೆವಾ, ದರ್ಶಿನಿ ಉಂಗುರ, ಸಿಂಗನಾದ, ಕರ್ಣಕುಂಡಲಗಳನ್ನು ಹಾಕಿ ಕೆಂಪು ಬಟ್ಟೆ ಸುತ್ತಿ ಮೇಲೆ ಕುರಿದಾರದಿಂದ ಕಟ್ಟಿ ಸಿದ್ದಪಡಿಸಲಾಗುತ್ತದೆ. ಯೋಗಿ ಗುರುತಿನ ಸಂಕೇತವಾಗಿ ಇದನ್ನೆಲ್ಲ ಇರಿಸಲಾಗುತ್ತದೆ. ನಿರ್ಗಮನ ರಾಜ ತನ್ನ ಆಡಳಿತಾವಧಿಯ ಲೆಕ್ಕಾಚಾರಗಳ ದಾಖಲೆಯನ್ನು ಪಂಚರ ಸಮಕ್ಷಮ ನೂತನ ಅರಸನಿಗೆ ಒಪ್ಪಿಸಿ ಪಾತ್ರದೇವತೆಯೊಂದಿಗೆ ಸಮುದ್ರ ಸ್ನಾನಕ್ಕೆ ಹೊರಟು, ಅಲ್ಲಿ ಪಾತ್ರದೇವತೆ ಸಮೇತ ಸಮುದ್ರದಲ್ಲಿ ಮೂರು ಸಲ ಮುಳುಗೆದ್ದು 'ಜಲಸಮಾಧಿ' ಎಂಬ ಸಂಕೇತವನ್ನು ಆಚರಿಸಿ ಹಿಂತಿರುಗಿ ಬರುತ್ತಾರೆ. ಶ್ರೀ ಗೋರಕ್ಷನು ಕದಲೀ ವನದಲ್ಲಿರುವ ಉದ್ಭವಿತ ಲಿಂಗದಲ್ಲಿ ಐಕ್ಯವಾಗಿ ಮುಕ್ತಿ ಹೊಂದಿದ ಎಂಬ ಐತಿಹ್ಯವಿದ್ದಂತೆ ಇಲ್ಲಿನ ನಾಥ ಮಠಕ್ಕೆ ಪರಂಪರಾಗತ ಹನ್ನೆರಡು ವರುಷಗಳಿಗೊಮ್ಮೆ ನಡೆಯುವ ಪೀಠಾಧಿಪತಿಗಳ ಅಧಿಕಾರವು ಕೊನೆಗೊಂಡಂತೆ ಪೀಠಾಧಿಪತಿಗಳು ಜೀವಂತ ಸಮಾದಿ ಸ್ವೀಕರಿಸಲು ಸನ್ನದರಾಗಿರಬೇಕಿತ್ತು. ಒಂದೊಮ್ಮೆ ಸಮಾಧಿಯಾಗಲು ಒಪ್ಪದಿದ್ದರೆ ಬಲವಂತದಿಂದ ಸಮಾಧಿ ಮಾಡಲಾಗುತ್ತಿತ್ತಂತೆ. ಹಾಗಾಗಿ ನಾಥರು ತಮ್ಮ ಅಧಿಕಾರದ ಕೊನೆಯ ವರ್ಷ ಇಲ್ಲಿಂದ ಪಲಾಯನಗೈಯುತ್ತಿದ್ದರಂತೆ. ಆದರೆ, ಈಗ ಪಾತ್ರ ದೇವತೆಯನ್ನು ಸಮುದ್ರದಲ್ಲಿ ವಿಸರ್ಜಿಸಿ ಜಲಸಮಾದಿ ಎಂಬ ಕ್ರಮವನ್ನು ಅನುಸರಿಸಿ ಕದಲೀ ವನದಲ್ಲಿ ಮುಕ್ತಿ ಹೊಂದುವ ಪದ್ಧತಿ ಆಚರಿಸುತ್ತಾರೆ.[೨] ಕಾಲಭೈರವನ ಉಪಾಸಕರಾದ ಈ ಯೋಗಿಗಳು ಝುಂಡಿ ಯಾತ್ರೆಯಲ್ಲಿ ತಮ್ಮೊಂದಿಗೆ ಕಪ್ಪು ನಾಯಿಯನ್ನು ಕರೆತರುವುದು ವಿಶೇಷ. ಕಪ್ಪು ಬಣ್ಣದ ನಾಯಿಯು ಭೈರವನ ವಾಹನದ ಸಂಕೇತ. ಹಾಗಾಗಿ ಪ್ರತಿ ಝುಂಡಿ ಯಾತ್ರೆಯಲ್ಲೂ ಕಪ್ಪು ಬಣ್ಣದ ನಾಯಿಯೊಂದು ಗಮನ ಸೆಳೆಯುವುದು ಸಾಮಾನ್ಯ. ೨೦೧೬ರಲ್ಲಿಯೂ ಝುಂಡಿಯಲ್ಲಿ 'ಬೈರೂ' ಎಂಬ ಹೆಸರಿನ ನಾಯಿಯೊಂದು ಯೋಗಿಗಳ ಜೊತೆಗಿದ್ದು ಅದರ ಕೊರಳಿಗೆ ಹೂಹಾರವೊಂದು ಹಾಕಲಾಗಿತ್ತು. ಆದರೆ, ನಾಯಿ ಮಾತ್ರ ಕಪ್ಪು ಬಣ್ಣದ್ದಾಗಿರಲಿಲ್ಲ. ಬದಲಿಗೆ ಬೂದಿ ಮಿಶ್ರಿತ ಕೆನೆ ಬಣ್ಣದಿಂದ ಕೂಡಿತ್ತು. ಝುಂಡಿಯ ನೇತೃತ್ವ ವಹಿಸಿದ್ದ ೮೪ ರ ಹರೆಯದ ಹಿರಿಯ ನಾಥಯೋಗಿ ಸುಕುಮಾರನಾಥಜೀ ಈ ಬಾರಿ ಐದನೇಯ ಪರ್ಯಾಯ ಯಾತ್ರೆಯಲ್ಲಿ ಬಂದಿರುವುದು ವಿಶೇಷವಾಗಿ ಕಂಡಿತ್ತು. ಈ ಗುಂಪಿನಲ್ಲೇ ೧೪ ರ ಹರೆಯದ ಅತ್ಯಂತ ಕಿರಿಯ ಯೋಗಿಬಾಬಾ ಪ್ರೇಮ್‌ನಾಥ್, ಇಬ್ಬರು ವೈದ್ಯರು ಮತ್ತು ಹದಿನಾಲ್ಕು ಮಂದಿ ತಾಂತ್ರಿಕ ತಜ್ಞರು ಮತ್ತು ಒಂದಿಬ್ಬರು ಯೋಗಿನಿಯರು ಕೂಡಾ ಬಂದಿದ್ದರು.

ರೋಟ್ ಪೂಜೆ ಸೇವೆ :-

ನಾಥ ಪಂಥೀಯರಿಗೆ ಭಾನುವಾರ ವಿಶೇಷ ದಿನ ಅಂದು ತಮ್ಮ ಪ್ರಧಾನ ದೈವವಾದ ಕಾಳ ಭೈರವನಿಗೆ ಅವರು 'ರೋಟ್' ಪೂಜೆಯ ಸೇವೆ ಮಾಡುತ್ತಾರೆ. ಈ ರೋಟ್ ಎಂಬ ಪ್ರಸಾದವನ್ನು ರೊಟ್ಟಿಯಿಂದ ತಯಾರಿಸುತ್ತಾರೆ. ಇದರಲ್ಲೂ ಕಚ್ಚಾ ಮತ್ತು ಪಕ್ಕಾ ರೋಟ್‌ಗಳೆಂಬ ಎರಡು ವಿದಧ ಪ್ರಸಾದಗಳಿವೆ. ಗೋಧಿ ಹಿಟ್ಟು, ತುಪ್ಪ, ದ್ರಾಕ್ಷಿ, ಗೋಡಂಬಿ, ಬಾದಾಮಿ, ಕಲ್ಲು ಸಕ್ಕರೆಯಿಂದ ಮಾಡುವ ರುಚಿಯಾದ ಕಚ್ಚಾ ರೋಟ್ ಪ್ರಸಾದವನ್ನು ಪೂಜೆಯ ಬಳಿಕ ಕ್ಷೇತ್ರದ

ಬಾವಿಯಲ್ಲಿರುವ ಮೀನುಗಳಿಗೂ ಕಾಲಭೈರವನ ವಾಹನವಾದ ನಾಯಿಗಳಿಗೂ ನೀಡಿ, ಬಳಿಕ ಸೇವಾವೃತ ಭಕ್ತರಿಗೆ ಕೊಟ್ಟು, ಮಿಕ್ಕಿದ ಪ್ರಸಾದ ಮುಂದಿನ ಶನಿವಾರದವರೆಗೂ ಕಾಯ್ದಿರಿಸಿ ದರ್ಶನಕ್ಕೆ ಬಂದ ಭಕ್ತರಿಗೆ ನೀಡುತ್ತಾರೆ.

ಝುಂಡಿ ಬಿಡಾರ:

ಸದಾ ಯೋಗ ಭಂಗಿಯಲ್ಲೆ ಕೂರುವ ಸನ್ಯಾಸಿಗಳು ಕಾಲ್ನಡಿಗೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಝುಂಡಿಯು ಬಿಡಾರ ಬಿಟ್ಟಾಗ ಕುರಿಯ ತುಪ್ಪಳವನ್ನು ಹಿಂಜಿ ನೂಲು ಮಡುವುದು, ಭಸ್ಮ ಸ್ನಾನಕ್ಕಾಗಿ ಬೇಕಾದ ಧುನಿಯನ್ನು ಸಿದ್ಧತೆ ಮಾಡಿಕೊಳ್ಳುವುದು, ಭಂಗಿ ಸೇವಿಸಿ ಹರಟೆ ಹೊಡೆಯುವುದು, ಹಿರಿಯ ಸಾಧುಗಳು ಬಾರಹ, ಅಠಾರ ಎನ್ನುವ ತನ್ನ ಶಿಷ್ಯಂದಿರಿಂದ ಕಾಲೊತ್ತಿಸಿಕೊಳ್ಳುವುದು ಮುಂತಾದ ಚಟುವಟಿಕೆಗಳಲ್ಲಿ ತಲ್ಲೀನರಾಗುತ್ತಾರೆ. ಹೆಚ್ಚಿನ ಸಾಧುಗಳು 'ಜನೆವಾ' ಎಂಬ ಉಣ್ಣೆಯ ಸಣ್ಣ ಪಾಕೇಟ್‌ಗಳನ್ನು ತಯಾರಿಸುವ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಇದಕ್ಕಾಗಿ ಅವರು ತಕಲಿ ತಿರುಗಿಸುವ ಬಿಲ್ಲಿನಾಕಾರದ ಒಂದು ದೊಡ್ಡ ಕೋಲಿಗೆ ಉಣ್ಣೆ ನೂಲು ಅಳವಡಿಸಿ ಡಮರುಗ ಆಕಾರದ ಮರದ ನೂಲು ಸುತ್ತುವ ಸಾಧನಕ್ಕೆ ನೂಲು ನೇಯ್ದು, ದಾರವನ್ನು ಹೆಣೆಯುವ ಸಾಧನವನ್ನು ಸಿದ್ಧಪಡಿಸಿಕೊಳ್ಳುತ್ತಾರೆ.

ಪ್ರತೀ ನಾಥಮಠದಲ್ಲೂ ಝುಂಡಿಯು ಬೀಡು ಬಿಡುವಲ್ಲಿ ಒಂದು ಸಭೆ ನಡೆಯುತ್ತದೆ. ಈ ಸಭೆಗೆ ನಾಥರಲ್ಲದೆ ಮತ್ಯಾರಿಗೂ ಅವಕಾಶವಿಲ್ಲ. ಸಭೆಗೆ ಮೊದಲು ಪಂಖಾಪೀರನು 'ದಲೀಚಾ' ಸೇರುತ್ತಿದೆ. ಯೋಗಿಗಳು ಬರಬೇಕು ಎಂದು ಕೂಗು ಹಾಕುತ್ತಾನೆ. ನಂತರ ಸಭೆಯಲ್ಲಿ ಮುಂದಿನ ಕಾರ್ಯಕ್ರಮಗಳ ಕುರಿತು ನಿರ್ಣಯವನ್ನು ಕೈಗೊಳ್ಳುತ್ತಾರೆ. ನಾಥ ಯೋಗಿಗಳು ಆಚರಿಸುವ ಧರಿಸುವ ಪ್ರತಿಯೊಂದು ಸಾದನಕ್ಕೂ ಒಂದೊಂದು ಐತಿಹಾಸಿಕ ಹಿನ್ನಲೆ ಇದೆ.

ಜೋಗಿ ದೀಕ್ಷೆ ಮತ್ತು ಕರ್ಣ ಮುದ್ರಾಧಾರಣೆ:

ಇದು ಗುರು ಪಂಥಗಳ ಮೊದಲ ಆಚರಣೆ. ದೀಕ್ಷಾರ್ಥಿಯ ಪಾಲಿಗಿದು ಹೊಸಜನ್ಮ. ಕೂದಲು ಕತ್ತರಿಸಿ, ಸ್ನಾನಾಧಿಗಳಿಂದ ಶುಚಿಯಾಗಿ, ಹೊಸಬಟ್ಟೆ ಧರಿಸಿ ಬರುವ ದೀಕ್ಷಾರ್ಥಿಯ ಹಳೆಯ ಹೆಸರನ್ನು ತೆಗೆದು ಹೊಸ ಹೆಸರನ್ನು ಕೊಡುತ್ತಾರೆ. ಈ ದೀಕ್ಷೆಯ ಕ್ರಮವು ಎರಡು ಹಂತದಲ್ಲಿ ಮೊದಲನೆ ಹಂತ ಗ್ರಹಸ್ಥರಾಗಿದ್ದೇ ನಾಥ ಸಂಪ್ರದಾಯದ ಆಚರಣೆ ಮಾಡಿಕೊಂಡಿರುವುದು. ಇವರನ್ನು 'ಔಘಡ್' ಎನ್ನುತ್ತಾರೆ. ಗಂಡು ಮಕ್ಕಳಿಗೆ ಮದುವೆಗೆ ಮುನ್ನ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಹನ್ನೆರಡನೇ ಹರೆಯದಲ್ಲಿಯೇ ಈ ಸಂಪ್ರದಾಯವನ್ನು ಮಾಡಿಸುತ್ತಾರೆ. ಎರಡನೇ ಹಂತ ಸನ್ಯಾಸಿಯಾಗಿ ನಾಥ ಸಂಪ್ರದಾಯಾಚರಣೆ ನಡೆಸುವುದು ಇವರನ್ನು ಯೋಗಿಗಳು ಎನ್ನುತ್ತಾರೆ. ವಾಸ್ತವವಾಗಿ ಎರಡು ಬಗೆಯ ಶಿಷ್ಯರಿಗೂ ಕೇಶ ಮುಂಡಣ, ಭಸ್ಮದಾರಣೆ, ಮಂತ್ರೋಪದೇಶ, ಶೈಲಿದಾರಣೆ ಎಂಬ ನಾಲ್ಕು ಹಂತಗಳು ಸಾಮಾನ್ಯ. ಆದರೆ, ಐದನೇ ಹಂತ 'ಕಾನ್‌ಪಠ' ದೀಕ್ಷೆ. ಅಂದರೆ ಕಿವಿಛೇದನ. ಈ ದೀಕ್ಷೆಯನ್ನು ಕೊಟ್ಟ ಹನ್ನೆರಡು ವರುಷಗಳ ಬಳಿಕ ಯೋಗ ದೀಕ್ಷೆ ಕೊಡಬೇಕೆಂಬ ನಿಯಮವಿದೆ. ಹಿಂದೆ ಔಘಡ್ ಆದವನು ಕಾನ್‌ಪಠ್ ದೀಕ್ಷೆ ಪಡೆಯಲು ಒಂದು ನದಿಯ ಹುಟ್ಟಿನ ದಡದಿಂದ ಹೊರಟು ಅದು ಕಡಲನ್ನು ಸೇರುವ ಜಾಗ ತಲುಪಿ ಅಲ್ಲಿಂದ ಇನ್ನೊಂದು ದಡದ ಮೇಲೆ ಪರಿಕ್ರಮಿಸಿ ಬರಬೇಕಿತ್ತು. ದೀಕ್ಷೆಯ ಸಂದರ್ಭದಲ್ಲಿ

ಬ್ರಹ್ಮಚರ್ಯ ಪಾಲನೆ, ಅರಿಷಡ್ವರ್ಗಗಳನ್ನು ಬಿಟ್ಟು ಅಹಿಂಸಾ ವ್ರತ ಪಾಲಿಸುತ್ತೇನೆಂದು ಪ್ರತಿಜ್ಞೆ ಮಾಡಬೇಕು. ಕುಂಡಲ ದೀಕ್ಷೆಯನ್ನು ನಾಥ ಯೋಗಿ ಇಲ್ಲವೇ ಕಪಾಲಿಕ ಒಂದು ವೇಳೆ ಅವರಿಲ್ಲದ ಕಡೆಗಳಲ್ಲಿ ಅವರಿಂದ ದೀಕ್ಷೆ ಪಡೆದುಕೊಂಡ ಜೋಗಪ್ಪಗಳು ಇದನ್ನು ನೆರವೇರಿಸುತ್ತಾರೆ.

ಗೃಹಸ್ಥರಿಗೆ ಕಿವಿಯಲ್ಲಿ ಸಣ್ಣ ರಿಂಗ್ ಹಾಕುವಷ್ಟೇ ಕಿವಿ ಛೇದಿಸಲಾಗುತ್ತದೆ. ಯೋಗಿಯಾದವನಿಗೆ ಕಿವಿಯ ನಡು ಭಾಗದ ತಗ್ಗಿನಲ್ಲಿ ಒಂದು ಇಡೀ ಕಿರುಬೆರಳು ತೂರುವಷ್ಟು ತೂತು ಮಾಡಲಾಗುತ್ತದೆ. ದುಂಡನೆಯ ರಿಂಗಿಗೆ 'ಕುಂಡಲ'ವೆಂದು ಚಪ್ಪಟೆಯ ರಿಂಗಿಗೆ 'ದರ್ಶಿನಿ' ಎಂದೂ ಹೆಸರಿದೆ. [೩]

ಮತ್ಸ್ಯೇಂದ್ರ-ಗೋರಖ ಸಂಪ್ರದಾಯದ ಯೋಗಿಗಳು ಕಿವಿಯ ಮದ್ಯಭಾಗವನ್ನು ಹರಿದುಕೊಂಡರೆ, (ಕಾನ್‌ಚೀರ) ಜಾಲಂಧರ ಮತ್ತು ಕನಿಪಾನಾಥ ಪಂಥದ ಸಂಪ್ರದಾಯಸ್ಥ ಯೋಗಿಗಳು ಕಿವಿಯ ಕೆಳಭಾಗವನ್ನು ಕೊಯ್ದುಕೊಳ್ಳುತ್ತಾರೆ. ರಂಧ್ರವು ವಿಸ್ತಾರವಾಗಿರಲೆಂದೇ ಜೇಡಿ ಮಣ್ಣಿನ ಉಂಡೆಯನ್ನು ಅದರೊಳಗೆ ಕೂರಿಸುತ್ತಾರೆ. ಅದು ಒಡೆದು ಹೋಗುವ ಕಾರಣಕ್ಕಾಗಿ ಆನೆಯ ದಂತ, ಜಿಂಕೆಯ ಕೊಂಬು, ಚಿನ್ನ, ಪ್ಲಾಸ್ಟಿಕ್ ಮುಂತಾದ ಕುಂಡಲಗಳನ್ನು ಧರಿಸುವ ಕ್ರಮವಿದೆ.

ಶೈಲಿ ಹಾಗೂ ಸಿಂಗನಾದ :

ನಾಥ ದೀಕ್ಷೆಯಲ್ಲಿ ಬರುವ ಎರಡು ಮಹತ್ವದ ವಸ್ತುಗಳಿವು. ನಾಥರ ಕೊರಳಲ್ಲಿರುವ ಕುರಿಯ ತುಪ್ಪಳದಿಂದ ಮಾಡಿರುವ ದಾರವೇ ಶೈಲಿ ಅಥವಾ ಜನೇವ. ಈ ದಾರದಲ್ಲಿ ೯ ಎಳೆಗಳಿರುತ್ತವೆ, ಇದು ನವನಾಥರನ್ನು ಸಂಕೇತಿಸುತ್ತದೆ. ಒಮ್ಮೆ ಧರಿಸಿದರೆ ಇದನ್ನು ಬದಲಾಯಿಸಬೇಕೆಂದಿಲ್ಲ. ಇದನ್ನು ಗೃಹಸ್ಥರೂ ಧರಿಸಬಹುದು. ಈ ರೀತಿಯ ಶೈಲಿ ಧಾರಣೆ ತುಳುನಾಡಿನ ಜೋಗಿಗಳಲ್ಲಿ ಹೆಚ್ಚು ಕಂಡು ಬರುತ್ತದೆ. ಪ್ರಾಣಿಯ ಕೂದಲಿನಿಂದ ಮಾಡಿರುವ ಈ ಜನೇವಕ್ಕೆ ಅಶುದ್ದತೆ ಇಲ್ಲ.

ಶೈಲಿಯಲ್ಲಿ ೩ ವಸ್ತುಗಳಿರುತ್ತವೆ. ಮೊದಲನೆಯದು ಮುದ್ರೆಯುಂಗುರ ಅಥವಾ ಶಿಖೆ. ಎರಡನೆಯದು ದರ್ಶಿನಿ ಉಂಗುರ. ಇದು ಮೃಗದ ಕೊಂಬಿನ ಅಥವಾ ತಾಮ್ರ, ಹಿತ್ತಾಳೆ ಮುಂತಾದ ದಾತುವಿನಿಂದ ಮಾಡಿದ ಗೋಲಾಕಾರದ ಉಂಗುರವಾಗಿರುತ್ತದೆ. ಈ ಉಂಗುರದಿಂದಲೇ ಸಾಧುಗಳನ್ನು ದರ್ಶಿನಿ ಯೋಗಿಗಳೆಂದು ಗುರುತಿಸುತ್ತಾರೆ. ಮೂರನೆಯದು ಸಿಂಗನಾದ. ಹಿಂದೆ ಕೃಷ್ಣ ಮೃಗದ ಕೊಂಬಿನಿಂದ ತಯಾರಿಸದ ಸಿಂಗನಾದ ಧರಿಸುತ್ತಿದ್ದರು. ಆದರೆ, ಈಗ ಗಂಧದ, ಬೆಳ್ಳಿಯ ಅಥವಾ ಮರದ ಸಿಂಗನಾದವನ್ನು ಮಾಡಿಸಿಕೊಳ್ಳುತ್ತಾರೆ.[೪] ಭೈರವನಿಗೆ, ಗುರುವಿಗೆ, ಧುನಿಗೆ ನಮಸ್ಕರಿಸಿದ ನಂತರ ನಾಥ ಯೋಗಿಗಳು ಹಾಗೂ ಗೃಹಸ್ಥರು ಸಿಂಗನಾದ ಮಾಡುತ್ತಾರೆ.

ಆಧಾರೀ : ನಾಥ ಯೋಗಿಗಳು ಯೋಗ ಸಾಧನೆಯಲ್ಲಿ ಕುಳಿತು ಧ್ಯಾನ ನಿರತರಾಗಲು ಮರದ ಗೋಲಾಕಾರದ ಪೀಠವನ್ನು ಬಳಸುತ್ತಾರೆ. ಇದನ್ನು ಆಧಾರೀ ಎನ್ನುತ್ತಾರೆ.

ನೋಟಾ : ಸುಮಾರು ಒಂದೂವರೆ ಅಡಿ ಉದ್ದದ ಸಾಗುವಾನಿ ಅಥವಾ ಇನ್ನಿತರ ಉತ್ತಮ ಜಾತಿಯ ಮರದಿಂದ ಮಾಡಿದ ಉದ್ದದ ದಂಡವೊಂದು ಸಾಧುಗಳ ಬಳಿಯಿರುತ್ತದೆ. ಇದು ಗೋರಕ್ಷನಾಥನ ಕೈಯಲ್ಲಿರುವ ದಂಡಿನ ಪ್ರತೀಕ. ಈ ದಂಡದಿಂದ ಕಷ್ಟಕ್ಕೆ ಒಳಗಾದ ವ್ಯಕ್ತಿಗಳ ಮುಖದ ಎದುರು ಹಿಡಿದು ನಿವಾಳಿಸಿ ತೆಗೆಯುತ್ತಾರೆ. ಕೆಲವರು ದಂಡದ ಬದಲು ಚಿಮಟಾ, ತ್ರಿಶೂಲ ಹಿಡಿದಿರುತ್ತಾರೆ.

ಸುಮೀರನೀ : ಯೋಗಿಗಳು ೧೦೮ ರುದ್ರಾಕ್ಷಿಯನ್ನು ಪೋಣಿಸಿದ ಸರಮಾಲೆಯನ್ನು ಧರಿಸುತ್ತಾರೆ. ಕೆಲವರು ೬೮, ೬೬, ೩೨ ರುದ್ರಾಕ್ಷಿಗಳ ಮಾಲೆಯನ್ನು ಧರಿಸುತ್ತಾರೆ. ಹಲವು ಮುಖದ ರುದ್ರಾಕ್ಷಿಗಳು ಇವೆಯಾದರೂ ಇವರಿಗೆ ಹನ್ನೆರಡು ಮುಖದ ರುದ್ರಾಕ್ಷಿ ಪರಮ ಸೌಭಾಗ್ಯ. ಪಂಚಮುಖಿ ರುದ್ರಾಕ್ಷಿ ವಿಶೇಷ, ಮತ್ತು ಏಕಮುಖಿ ರುದ್ರಾಕ್ಷಿ ಶುಭಪ್ರದ ಎಂಬ ನಂಬಿಕೆ. ಇವರು ತಮ್ಮ ತೋಳುಗಳಿಗೆ ಕಟ್ಟಿಕೊಳ್ಳುವ ರುದ್ರಾಕ್ಷಿಯ ಚಿಕ್ಕ ಮಾಲೆಯಲ್ಲಿ ೧೮ ರಿಂದ ೨೩ ರುದ್ರಾಕ್ಷಿಕಾಯಿಗಳಿರುತ್ತವೆ.

ತ್ರಿಪುಂಡ : ಇದು ನಾಥ ಪಂಥಿಗಳ ವಿಶೇಷವಾದ ಚಿಹ್ನೆಯಾಗಿದೆ. ಭಸ್ಮದಿಂದ ಲಲಾಟ ಸೇರಿದಂತೆ ಭುಜವನ್ನು ಸೇರಿಸಿ ದೇಹದ ಒಟ್ಟು ೩೨ ಕಡೆಗಳಿಗೆ ಭಸ್ಮ ಲೇಪಿಸಿಕೊಳ್ಳುತ್ತಾರೆ.

ಕಿಂಗರಿ : ನಾಥ ಜೋಗಿಗಳು ಅದರಲ್ಲೂ ವಿಶೇಷವಾಗಿ ಕಿಂದರಿ ಜೋಗಿಗಳು ಕೈಯಲ್ಲಿ ಹಿಡಿಯುವ ಸಾರಂಗಿಯಂತ ಪುಟ್ಟ ತಂತಿ ವಾದ್ಯ.

ದಂಧಾರಿ : ಮರದ ತುಂಡು ಇಲ್ಲವೇ ಲೋಹದಿಂದ ಮಾಡಿರುವ ಸಣ್ಣ ರಂಧ್ರಗಳಿರುವ ಚಕ್ರಕಾರದ ಗೋಲ. ಜಪಮಾಲೆಯನ್ನು ಸುತ್ತಲೂ ಇದನ್ನು ಬಳಸುತ್ತಾರೆ.

ಹಾವುಗೆ : ಇದು ನಾಥ ಯೋಗಿಗಳು ಕಾಲಲ್ಲಿ ಧರಿಸುವ ಪಾದರಕ್ಷೆ.

ಘಂಘರೂ : ಇದು ಯೋಗಿಗಳು ಕಾಲಿಗೆ ಧರಿಸುವ ಹಿತ್ತಾಳೆಯ ಕಡಗ.

ಕಪ್ಪರ : ಇದನ್ನು ನಾಥಯೋಗಿಗಳು ಭಿಕ್ಷಾನ್ನ ಸೇವಿಸಲು ಉಪಯೋಗಿಸುತ್ತಾರೆ. ಭಸ್ಮ ತುಂಬಲು, ನೀರು ಕುಡಿಯಲು ಇದನ್ನೇ ಉಪಯೋಗಿಸುತ್ತಾರೆ. ಮಣ್ಣಿನ ಪಾತ್ರೆಯನ್ನು ಒಡೆದು ತಳಭಾಗವನ್ನು ಕೋಪಡಿಯಾಗಿ ಮಾಡುತ್ತಾರೆ. ತೆಂಗಿನ ಗೊರಟೆ, ಹಿತ್ತಾಳೆಯ ಕಪ್ಪರವೂ ಇದೆ.

ಕಂಥ : ಇದು ಖಾವಿ ಬಣ್ಣದ ಉದ್ದನೆಯ ನಿಲುವಂಗಿ. ಕೆಂಪು ಬಣ್ಣವು ಬ್ರಹ್ಮಚರ್ಯೆಯ ಪ್ರತೀಕ. ಪಾರ್ವತಿ ದೇವಿಯು ತನ್ನ ದೇಹದ ರಕ್ತದಲ್ಲಿ ಅದ್ದಿದ ವಸ್ತ್ರವನ್ನು ಗೋರಕನಿಗೆ ಕೊಟ್ಟಳಂತೆ ಈ ನೆನಪಿಗಾಗಿ ಯೋಗಿಗಳು ಕೆಂಬಣ್ಣದ ವಸ್ತ್ರ ಧರಿಸುತ್ತಾರೆ. ಇದನ್ನು ಕತರಿ, ಕಪನಿ ಎಂದೂ ಕರೆಯುತ್ತಾರೆ. ಇದರ ಐತಿಹ್ಯ ಹೀಗಿದೆ. ಪುರಾಣ ಕಾಲದಲ್ಲಿ ತಪವನ್ನಾಚರಿಸುತ್ತಿದ್ದ ಋಷಿ ಮುನಿಗಳು ಕಾಡು ಪ್ರಾಣಿಗಳಾದ ಜಿಂಕೆ ಅಥವಾ ಹುಲಿಯ ಚರ್ಮವನ್ನೇ ಮೈಮುಚ್ಚಲು, ಧ್ಯಾನಾರೂಢರಾಗಿ ಕುಳಿತುಕೊಳ್ಳಲು ಹಾಸುವಸ್ತ್ರವಾಗಿಯೂ ಬಳಸುತ್ತಿದ್ದರು. ಹೀಗಿರಲು ಒಮ್ಮೆ ಆದಿನಾಥ ಪಾರ್ವತಿಗೆ ಆಧ್ಯಾತ್ಮಿಕ ಭೋದನೆ ಮಾಡಿದ. ಧ್ಯಾನ, ಯೋಗ, ಮಾಯೆ, ವಿರಕ್ತಿ, ತ್ಯಾಗ ಮತ್ತು ಮೂರನೇಯ ಕಣ್ಣು ಮೊದಲಾಗಿ ತಿಳಿಯ ಹೇಳಿದ. ಇದನ್ನು ಕೇಳಿದ ಆದಿಮಾತೆಗೆ ವೈರಾಗ್ಯ ಬಂದು ಜ್ಞಾನೋದಯವಾಯಿತು. ಆಕೆ ತನ್ನ ಉಗುರುಗಳಿಂದ ನರಗಳನ್ನು ಕತ್ತರಿಸಿಕೊಂಡಳು.

ರಕ್ತ ಚಿಮ್ಮಿತು ಹೊದ್ದುಕೊಂಡ ಬಟ್ಟೆ ಹಾಗೂ ಶಾಲು ಕೆಂಪಗಾಯಿತು. ಸಿದ್ಧಯೋಗಿ ಗೋರಕ್ಷನಾಥನು ಒಮ್ಮೆ ಪಾರ್ವತಿಯನ್ನು ಭೇಟಿ ಮಾಡಿ 'ಅಮ್ಮ' ಎಂದು ಕರೆದನು. ಆ ಕ್ಷಣದಲ್ಲೇ ಪಾರ್ವತಿಗೆ ಆತನಲ್ಲಿ ಮಾತೃಭಾವ ಸ್ಫುರಿಸಿತು. ಅವನಿಗೆ ಆಶೀರ್ವಾದ ರೂಪದಲ್ಲಿ ಆದಿಮಾತೆ ತನ್ನ ರಕ್ತವರ್ಣದ ಶಾಲನ್ನು ನೀಡಿದಳು. ಖಾವಿ ಅಥವಾ ರಕ್ತಗೆಂಪು ವರ್ಣ ಪಾವಿತ್ರ್ಯ, ಜ್ಞಾನೋದಯ, ಸತ್ಯ, ಅಹಿಂಸೆ, ತ್ಯಾಗ, ಕ್ಷಮೆ, ಕರುಣೆ, ಮೊದಲಾದುವುಗಳ ಸಂಕೇತವಾಯಿತು. ಹೀಗೆ ಆದಿಮಾತೆ ನೀಡಿದ ಶಾಲಿನ ಬಣ್ಣವೇ ಮುಂದೆ ಸಾಧು ಸನ್ಯಾಸಿಗಳ ಧರಿಸಿನ ಬಣ್ಣವಾಯಿತು.

ಕಂಥ : ಕುತ್ತಿಗೆಯ ಕೆಳಬಾಗದಿಂದ ಕಾಲಿನ ಮಣಿಗಂಟಿನವರೆಗೂ ದೇಹವನ್ನು ಸಂಪೂರ್ಣ ಮುಚ್ಚುವ ಕಾವಿ ಬಣ್ಣದ ನಿಲುವಂಗಿ. ಇದನ್ನು ಬ್ರಹ್ಮಚರ್ಯೆಯಲ್ಲಿರುವವರು ಹಾಗೂ ಯೋಗಿಗಳು ಮಂತ್ರ ತಂತ್ರಗಳ ಸಂದರ್ಭ ಧರಿಸುತ್ತಾರೆ. ಮಾರಣ ಮತ್ತು ಸ್ತಂಭನ ಮಂತ್ರಗಳನ್ನು ಪಠಿಸುವಾಗ ಇದು ಬಳಕೆಯಾಗುತ್ತದೆ.[೫]

ಪಾತಿ : ಎಂಟರಿಂದ ಹತ್ತು ಮೀಟರ್ ಉದ್ದವಿರುವ ಇದು ರಕ್ತಗೆಂಪು ಅಥವಾ ಬಿಳಿ ಬಣ್ಣವನ್ನು ಹೊಂದಿರುವ ಏಕವಸ್ತ್ರ. ಕೈಗಳನ್ನು ಮುಕ್ತವಾಗಿ ಬಿಟ್ಟು, ಎದೆಯನ್ನು ಮುಚ್ಚಿ ಸೊಂಟದಲ್ಲಿ ಗಂಟುಹಾಕಲಾಗುತ್ತದೆ. ಇದನ್ನು ಕಾಲಿನ ಮಣಿಗಂಟು ಮುಚ್ಚುವಂತೆ ತೊಡಲಾಗುತ್ತದೆ. ಇದನ್ನು ತಿರುಗಾಟದಲ್ಲಿರುವ ಯೋಗಿಗಳು, ತಪಸ್ವಿಗಳು ತಮ್ಮ ಚಟುವಟಿಕೆಗಳಿಗೆ ಅಗತ್ಯವಾಗುವಂತೆ ಉಪಯೋಗಿಸುತ್ತಾರೆ.

ಅಲ್ಫಿ : ರಕ್ತ ಅಥವಾ ಕಷಾಯ ವರ್ಣದಲ್ಲಿರುವ ಈ ವಸ್ತ್ರ ಪೂರ್ತಿ ದೇಹವನ್ನು ಮುಚ್ಚುವಂತಿದ್ದು ಎರಡೂ ಬದಿಗಳಲ್ಲಿ ಎರಡು ದೊಡ್ಡ ದೊಡ್ಡ ಕಿಸೆಗಳಿರುತ್ತದೆ. ದೊಗಳೆ ಜುಬ್ಬಾದಂತಿರುವ ಈ ವಸ್ತ್ರದ ಎರಡೂ ಬದಿಗಳಿಂದ ಕೈಯನ್ನು ಹೊರ ತೆಗೆಯುವಂತೆ ವಿನ್ಯಾಸ ಮಾಡಲಾಗುತ್ತದೆ. ಇದು ಯೋಗಿ ಹಾಗೂ ತಪಸ್ವಿಗಳು ಧರಿಸುವ ವಸ್ತ್ರವಾಗಿದೆ.

ಕಟಿ ವಸ್ತ್ರ : ಒಂದೂವರೆಯಿಂದ ಮೂರು ಮೀಟರ್‌ಗಳಷ್ಟು ಉದ್ದವಾಗಿರುವ ಈ ವಸ್ತ್ರವನ್ನು ಗಂಟು ಹಾಕಿಕೊಂಡು ಮೊಣಗಂಟು ಮುಚ್ಚುವಂತೆ ಧರಿಸಲಾಗುತ್ತದೆ. ಇದರ ಬಣ್ಣ ಕೆಂಪು ಅಥವಾ ಬಿಳಿಯದ್ದಾಗಿದೆ.

ಗೂದರಿ : ಇದು ದೇಹಕ್ಕೆ ಹೊದ್ದುಕೊಳ್ಳುವ ಕೆಂಪು ಅಥವಾ ಕಷಾಯ ಬಣ್ಣದ ಶಾಲು.

ಪಂಚಬಾಣ : ಇದು ತಲೆವಸ್ತ್ರ (ಮುಂಡಾಸು) ಕಟಿವಸ್ತ್ರ, ತುಂಡು ತೋಳಿನ ಜುಬ್ಬದಂಥ ರಚನೆಯ ಒಂದು ಗುಚ್ಛ. ಯಾವುದೇ ಹೊಲಿಗೆ ಇಲ್ಲದೆ ಧರಿಸುವ ಈ ವಸ್ತ್ರವನ್ನು ಹಿರಿಯರಾದ ಪೂಜಾರಿಗಳು ಅಥವಾ ಉಪಾಸಕರು ಉಪಯೋಗಿಸುತ್ತಾರೆ. ಇದರ ಬಣ್ಣ ಕಷಾಯ ಅಥವಾ ರಕ್ತಗೆಂಪಿನದಾಗಿದೆ.[೬]

ದೂರದಿಂದ ಝುಂಡಿ ಯಾತ್ರೆಯ ಸಾಧುಗಳನ್ನು ನೋಡಿದ್ದರೆ ಇಂಥದೊಂದು ವೈವಿಧ್ಯಮಯ ಪ್ರಪಂಚವಿದೆ ಎಂದು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾಥ ಪಂಥದ ಚರಿತ್ರೆಯು ಕೊಂಚ ಅಪಭ್ರಂಶಕ್ಕೆ ಒಳಗಾಗಿಯೂ ಈ ಪರಂಪರೆಯು ಇಂಥದೊಂದು ಯಾತ್ರೆಯ ಮೂಲಕ ಮುಂದುವರಿದುಕೊಂಡು

ಬಂದಿರುವುದು ಸಾಮಾನ್ಯ ವಿಷಯವೇನಲ್ಲ. ನೇಪಾಳದಿಂದ ತ್ರ್ಯಯಂಬಕೇಶ್ವರದ ತನಕದ ನಾಥ ಮಠಗಳಲ್ಲಿ ಕದ್ರಿ ಜೋಗಿ ಮಠವು ಅತೀ ಪ್ರಸಿದ್ಧ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕದಲಿಯ ಬೆಟ್ಟದಲ್ಲಿರುವ ಈ ಮಠದ ಪ್ರಧಾನ ದೇವರು 'ಕಾಶೀ ಕಾಳ ಬೈರವ' ಮಠದ ಪರಿಸರದಲ್ಲಿ ಗೋರಕ್ಷನಾಥ, ಮತ್ಸೇಂದ್ರನಾಥ, ಹಾಗೂ ಚೌರಂಗಿನಾಥರು ಯೋಗಾರೂಢರಾಗಿ ಕುಳಿತಿರುವ ಗುಡಿಗಳಿವೆ. ಅಲ್ಲದೆ ಈ ಹಿಂದೆ ಮಠದಲ್ಲಿ ಪೀಠಾಧೀಪತಿಗಳಾಗಿದ್ದ ಜೋಗಿ ಅರಸರ ಸಮಾಧಿಗಳಿವೆ. ಹತ್ತಿರದಲ್ಲೇ ಪರಶುರಾಮನ ಅಗ್ನಿಕುಂಡ, ಪಾಂಡವರ ಗುಹೆ, ರಾಮಲಕ್ಷ್ಮಣ ತೀರ್ಥ, ಸೀತಾಬಾವಿ, ಯೋಗಿನಿಮಾತಾ ಗುಡಿ, ಪಾತಾಳ ಬೈರವನ ಗುಡಿ, ಬಾರಾದ ಪಂಥಿ ಕಟ್ಟೆ, ನವಗ್ರಹ ವೃಕ್ಷ ಚೌಕ, ನಾಗರದೇವರ ಸನ್ನಿಧಿ, ಮರಳು ಧೂಮಾವತಿ ದೈವದ ಸನ್ನಿಧಿ, ಸಿದ್ಧಯೋಗಿ ಸುಂದರ ನಾಥಾಜೀಯವರ ಯೋಗಾರೂಢ ಮೂರ್ತಿಗಳು ಕೂಡಾ ಇವೆ.

ನಾಥಪಂಥದ ಯೋಗಿಗಳಿಂದ ನಿರ್ದಿಷ್ಟವಾಗಿ ನಡೆದುಕೊಂಡು ಬಂದಿದ್ದ ಕದ್ರಿ ಮಂಜುನಾಥ ದೇವಸ್ಥಾನದ ಪೂಜೆಯು ತದನಂತರ ಶೈವಾಗಮ ರೀತಿಯಲ್ಲಿ ಬದಲಾದುದ್ದಕ್ಕೆ ಆನಂದ ನಾಥರು ನಾಥಪಂಥ ಕ್ಷೇತ್ರ ಜೋಗಿ ಮಠ ಎಂಬ ಕೃತಿಯಲ್ಲಿ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ವ್ಯಕ್ತಪಡಿಸಿದ್ದಾರೆ. ಇವತ್ತಿಗೆ ಸುಮಾರು ೩೫೦ ವರ್ಷಗಳ ಹಿಂದೆ ಮಂಜುನಾಥನ ಪೂಜೆಗೆ ಬ್ರಾಹ್ಮಣ ಅರ್ಚಕ ಅಪ್ಪಯ್ಯ ಭಟ್ಟ ಎಂಬವರನ್ನು ಮಠದ ಪೀಠಾದಿಪತಿಗಳು ನೇಮಿಸಿದ್ದರು. ಈ ಭಟ್ಟರಿಗೆ ಗಂಡು ಸಂತಾನ ಇರಲಿಲ್ಲ. ಇದ್ದವರು ಇಬ್ಬರೂ ಹೆಣ್ಣು ಮಕ್ಕಳೇ. ಅವರಲ್ಲಿ ಹಿರಿಯವಳನ್ನು ಕೃಷ್ಣ ಭಟ್ಟ ಎಂಬವರಿಗೆ ಮದುವೆಮಾಡಿ ಕೊಟ್ಟು ಅವನನ್ನು ಮನೆ ಅಳಿಯ ಮಾಡಿಕೊಂಡರು. ಅಪ್ಪಯ್ಯ ಭಟ್ಟರ ಕಾಲನಂತರ ಕೃಷ್ಣ ಭಟ್ಟರೇ ದೇವಸ್ಥಾನದ ಪೂಜಾ ವಿಧಿ ವಿಧಾನಗಳನ್ನು ಮುಂದುವರಿಸಿದ್ದರು. ಪ್ರಸ್ತುತ ಹಿರಿಯ ಅರ್ಚಕರಾದ ಶ್ರೀನಿವಾಸ ಅಡಿಗಳ್ ಕುಟುಂಬದವರು ಅನುವಂಶಿಕ ಅರ್ಚಕರಾಗಿ ಮುಂದುವರಿದಿದ್ದಾರೆ. ಕದ್ರಿ ದೇವಸ್ಥಾನದ ಮತ್ತು ಜೋಗಿ ಮಠದಲ್ಲಾಗುವ ತಾಂತ್ರಿಕ ಅರ್ಚನೆ, ಪೂಜೆಗಳಿಗೆ ದೇರೆಬೈಲು ಅನಂತ ತಂತ್ರಿಗಳವರ ಪೂರ್ವಜರಾದ ನಾರಾಯಣ ತಂತ್ರಿ ಯವರನ್ನು ಕೇರಳದ ತಿರುವನಂತಪುರದಿಂದ ಆ ಕಾಲದ ಜೋಗಿ ಮಠದ ಅರಸರು ಕರೆಸಿಕೊಳ್ಳುತ್ತಿದ್ದರಂತೆ. ಅಲ್ಲದೆ ಆಶ್ರಯಕ್ಕಾಗಿ (ದೇವರ ಬೈಲು) ದೇರೆಬೈಲು ಎಂಬ ಗ್ರಾಮವನ್ನು ಅವರಿಗೆ ಉಂಬಳಿಯಿತ್ತಿದ್ದರಂತೆ. ಪ್ರಸಕ್ತ ಅನಂತ ತಂತ್ರಿಯವರ ಈ ಸುಪುತ್ರ ವಿಠಲದಾಸ ತಂತ್ರಿಯವರು ಪರಂಪರೆಯನ್ನು ಮುಂದುವರೆಸಿದ್ದಾರೆ.[೬]

ಕದಲೀ ಮಠದ ಪರಂಪರೇ :

೧೮೭೩ರಲ್ಲಿ ಕದಳೀ ಮಠದ ಪೀಠಾಧಿಪತಿಗಳಾಗಿ ಬಂದವರು ಶ್ರೀ ಭವಾನಿ ನಾಥ್‌ಜೀ. ಈ ಮೊದಲು ಶ್ರೀ ಮಂಜುನಾಥ ದೇವಸ್ಥಾನದ ಉಸ್ತುವಾರಿಯು ಅರ್ಚಕರ ವಶವಿರುವಾಗ ಅಲ್ಲಿನ ನಿತ್ಯ ಪೂಜಾ ವಿಧಿ ವಿಧಾನಗಳನ್ನು ಹಿರಿಯ ಅನುಭವಿ ನೆತ್ತಿಲ ರಾಮಭಟ್ಟರು ಮತ್ತು ಬಾಳೆಬೈಲು ವ್ಯಾಸ್ರಾಯಾಚಾರ್ಯರು ನೋಡಿ ಕೊಳ್ಳುತ್ತಿದ್ದರು. ಭವಾನಿ ನಾಥರು ಅಧಿಕಾರಕ್ಕೆ ಬರುವ ಮೊದಲು ಮತ್ತು ನಂತರದಲ್ಲಿಯೂ ದೇವಸ್ಥಾನದ ಉಸ್ತುವಾರಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು.

ಭವಾನೀ ನಾಥರ ಕಾಲದಲ್ಲಿ ಮಠಕ್ಕೆ ಬರುವವರ ಸಂಖ್ಯೆ ಹೆಚ್ಚಾಯಿತು. ನಾಥ ಸಂಪ್ರದಾಯದಂತೆ ಈ ಮಠಕ್ಕೆ ಬರುವ ಸಾಧು ಸಂತರಿಗೆ ಮೂರು ದಿನಗಳ ಆತಿಥ್ಯ ಮತ್ತು ಶ್ರೀ

ಮಠದ ಹತ್ತಿರವಿರುವ ಇನ್ನೊಂದು ಮಠದವರೆಗೆ ತಲುಪುವ ಸಮಯಕ್ಕಾಗುವಷ್ಟು ಆಹಾರ ವ್ಯವಸ್ಥೆ ಮಾಡಬೇಕಿತ್ತು. ಆದರೆ, ಮಠದಲ್ಲಿ ಆರ್ಥಿಕ ತೊಂದರೆ ಇದ್ದುದರಿಂದ ಶ್ರೀ ಮಠದ ಭೂಮಿಯನ್ನು ಅಡಮಾನ ಹಾಕುವ ಸಂದರ್ಭ ಬಂದಿತ್ತು.

ಕ್ರಿ.ಶ. ೧೮೮೮ರಿಂದ ಮುಂದಿನ ಹನ್ನೆರಡು ವರುಷಗಳ ವರೆಗೆ ಅಧಿಕಾರ ವಹಿಸಿಕೊಂಡವರು ಹೀರಾನಾಥ್‌ಜೀ ಯವರು ಇವರ ಸಮಯದಲ್ಲೂ ದೇವಸ್ಥಾನದ ಉಸ್ತುವಾರಿಯನ್ನು ಮೇಲಿನ ಅರ್ಚಕರೇ ನೋಡಿಕೊಳ್ಳುತ್ತಿದ್ದರು. ಕದ್ರಿ ಜಾತ್ರೆಯ ಸಂದರ್ಭದಲ್ಲಿ ದೇವರ ಚಿನ್ನ, ಬೆಳ್ಳಿಗಳನ್ನು ತುಂಬಿಸಿಡುವ ಪೆಟ್ಟಿಗೆಯ ಕೀಲಿಕೈ ಮಠಾಧಿಪತಿಗಳಲ್ಲೇ ಇದ್ದು, ಜಾತ್ರಾ ಸಂದರ್ಭ ಪೆಟ್ಟಿಗೆಯನ್ನು ತೆರೆದು ಆಭರಣಗಳ ಪಟ್ಟಿ ಮಾಡಿ, ಆಡಳಿತ ಮತ್ತು ಅರ್ಚಕರ ವರ್ಗದ ಸಹಿ ತೆಗಸಿಕೊಂಡು ಜಾತ್ರೆ ಮುಗಿದ ನಂತರ ಮತ್ತೆ ಹಾಗೆಯೇ ಪೆಟ್ಟಿಗೆಯೊಳಗಿಟ್ಟು ಬೀಗ ಹಾಕಿ ಅದರ ಕೀಲಿ ಕೈಯನ್ನು ಅರಸರೇ ಅವರ ವಶ ಇಟ್ಟು ಕೊಳ್ಳುತ್ತಿದ್ದರು.

ಹೀರಾನಾಥರಜೀ ಯವರ ನಂತರ ಬಂದವರು ಕಾಶೀನಾಥ್ ಜೀ ಇಸವಿ ೧೮೯೬. ಇವರು ಕದಲೀ ಮಠದ ಶ್ರೀ ಕಾಶೀ ಕಾಳ ಬೈರವನ ಮೂರ್ತಿಯನ್ನು ನವೀಕರಿಸಿ ೧೯೦೨ರಲ್ಲಿ ಅಷ್ಟಬಂದ ಬ್ರಹ್ಮ ಕಲಶವನ್ನು ನೆರವೇರಿಸಿದರು. ಮತ್ಸ್ಯೇಂದ್ರ ನಾಥ ಗೋರಖನಾಥ ಮತ್ತು ಚೌರಂಗಿನಾಥರಿಗೆ ಗುಡಿಗಳನ್ನು ಕಟ್ಟಿಸಿ ನಾಥರ ಶಿಲಾಮೂರ್ತಿಗಳನ್ನು ಅದರಲ್ಲಿ ಪ್ರತಿಷ್ಠಾಪಿಸಿದರು. ಶ್ರೀ ಮಠದ ಗತ ಪೀಠಾಧಿಪತಿಗಳ ಸಮಾಧಿಯ ಕುರುಹುಗಳಿರುವ ಕಡೆಗಳಲ್ಲಿ ಸಮಾಧಿಗಳನ್ನು ಕಟ್ಟಿಸಿದರು. ಗೋರಕ್ಷ ಮತ್ಸ್ಯೇಂದ್ರರು ಕುಳಿತು ಕೊಳ್ಳುತ್ತಿದ್ದರೆನ್ನಲಾದ ಸ್ಥಳದಲ್ಲಿ 'ಶಾಂತಿ ಕಟ್ಟೆ' ಎಂಬ ಮಂಟಪವನ್ನು ಕಟ್ಟಿಸಿದರು.

ಆದರೆ, ಅವರ ಅಧಿಕಾರಾವಧಿಯಲ್ಲಿ ಎದುರಾಗಿದ್ದ ಆರ್ಥಿಕ ಮುಗ್ಗಟ್ಟನ್ನು ಸರಿತೂಗಿಸಲು ಇವರು ಮಠದ ಜಮೀನನ್ನು ಬಂಟ ಸಮಾಜದ ಬಡಗು ಉಳಿಪಾಡಿ ಗುತ್ತು ಕುಟುಂಬಸ್ಥರಿಗೆ ಅಡಮಾನ ಹಾಕಿದರು. ಅಡಮಾನದ ಶರ್ತದ ಪ್ರಕಾರ ಕದ್ರಿಗೆ ಪೀಠಾಧಿಪತಿಯಾಗಿ ಬರುವ ಅರಸರು ಈ ಮೊತ್ತವನ್ನು ಹಿಂತಿರುಗಿಸಿದರೆ ಸದ್ರಿ ಜಮೀನನ್ನು ಮಠಕ್ಕೆ ವಾಪಸು ಬಿಟ್ಟು ಕೊಡ ಬೇಕಾಗಿತ್ತು. ಇವರ ನಂತರದಲ್ಲಿ ಬಂದವರು ಸಿದ್ಧಯೋಗಿ ಸುಂದರ ನಾಥರು. ಇವರ ಕಾಲ ೧೯೦೮. ಇದ್ದ ತಾವು ಮಠದಲ್ಲಿ ಕೇವಲ ೩ ತಿಂಗಳಿನಲ್ಲೇ ಬಹಳ ಜನಪ್ರೀಯರಾಗದ್ದ ಪೀಠಾಧಿಪತಿ. ಸದಾ ಕೌಪೀನದಾರಿಯಾಗಿ, ಮೈ ತುಂಬಾ ಭಸ್ಮವನ್ನು ಬಳಿಯುತ್ತಿದ್ದ ಜಟಾಜೂಟಿ ನಾಥರ ಕೈಗಳು ಮೊಣಕಾಲ ಮಂಡಿಗಳ ಕೆಳಗಿನ ತನಕ ಚಾಚುತ್ತಲಿದ್ದವು. ಇವರ ಕುರಿತಾಗಿ ಹತ್ತು ಹಲವು ನಂಬಲಸಾಧ್ಯವಾದ ವಿಸ್ಮಯಕಾರಿ ಐತಿಹ್ಯಗಳಿವೆ. ಇವರ ಪರಮ ಭಕ್ತರಲ್ಲಿ ಒಬ್ಬರಾಗಿದ್ದ ದಿ. ಪುತ್ತು ವೈಕುಂಠ ಶೇಟ್‌ರವರು ತಮ್ಮ ವಾಸದ ಮನೆಯ ಅಂಗಳದಲ್ಲಿ ಯೋಗಿ ಸುಂದರನಾಥರ ಪ್ರತಿಮೆಯನ್ನು ಸ್ಥಾಪಿಸಿದ್ದಾರೆ. ನಾಥ ಪಂಥದ ಯೋಗಿಗಳಲ್ಲಿ ನಿಕಟ ಸಂಬಂಧವನ್ನು ಹೊಂದಿದ್ದ ಶೇಟ್‌ರವರು ಪ್ರತೀ ವರುಷವೂ ಚೌತಿ ಹಬ್ಬದಂದು ಒಂದು ಗಣೇಶನ ವಿಗ್ರಹ ಅದರ ಜೊತೆಯಲ್ಲಿ ೧೦೦ ಕಬ್ಬುಗಳು ಮತ್ತು ಆ ಕಾಲದ ನಾಣ್ಯ ಒಂದು ರೂಪಾಯಿ ನಾಲ್ಕಾಣೆ ಕಾಣಿಕೆಯನ್ನು ಶ್ರೀ ಮಠಕ್ಕೆ ಒಪ್ಪಿಸುತ್ತಿದ್ದರು. ಅವರ ಕಾಲಾನಂತರ ಇಂದಿಗೂ ಆ ಸಂಪ್ರದಾಯವು ಅವರ ಮಕ್ಕಳಿಂದ

ಮುಂದುವರಿದಿದೆ. [೮]

ಸುಂದರ ನಾಥಜೀಯವರ ಬಳಿಕ ಬಂದವರೇ ರಾಜ ಟೆಹಲ್‌ನಾಥಜೀ. ಅವರು ತಮ್ಮ ಯೋಗಿ ಜೀವನದಲ್ಲಿ ಗ್ರಹಸ್ಥರು ಧರಿಸುವ ಬಟ್ಟೆಯನ್ನು ಧರಿಸುತ್ತಿದ್ದುದರಿಂದಾಗಿ ಅವರನ್ನು ಮಂಜುನಾಥ ಗರ್ಭಗುಡಿ ಪ್ರವೇಶಕ್ಕೆ ಬ್ರಾಹ್ಮಣ ಅರ್ಚಕರು ನಿಷೇಧ ಹೇರಿದರು.

ಬ್ರಾಹ್ಮಣ ಅರ್ಚಕರ ಧೋರಣೆಯನ್ನು ವಿರೋಧಿಸಿ ಟೆಹಲ್‌ನಾಥರು ಕೋರ್ಟಿನ ಮೆಟ್ಟಿಲು ಹತ್ತಿದರು. ಪರಿಣಾಮವಾಗಿ ೧೯೧೪-೧೫ರಲ್ಲಿ ಈ ಪ್ರಕಾರಣವು ಆಗಿನ ಸಿವಿಲ್ ನ್ಯಾಯಾಧೀಶ ಮುಂಡಪ್ಪ ಬಂಗೇರರ ವ್ಯಾಪ್ತಿಗೆ ಬಂತು. ಅದಕ್ಕಾಗಿ ಅವರಿಗೆ ದೇವಸ್ಥಾನದ ಗರ್ಭಗುಡಿ ಪ್ರವೇಶಿಸಬೇಕಾಯಿತು. ಸತ್ಯಾ ಸತ್ಯತೆಯನ್ನು ಮನಗಂಡ ಇವರು ನಾಥರ ಪರ ನ್ಯಾಯ ಒದಗಿಸಿಕೊಟ್ಟರು. ಆದರೂ ಈ ಪ್ರಕರಣ ಸುಖ್ಯಾಂತ್ಯ ಕಾಣಲಿಲ್ಲ. ನ್ಯಾಯಧೀಶರು ಗರ್ಭಗುಡಿ ಪ್ರವೇಶಿಸಿದ ಶುದ್ಧಿಗಾಗಿ ಶ್ರೀ. ಮಂಜುನಾಥ ದೇವಸ್ಥಾನದಲ್ಲಿ ೧೯೧೬ ಮೇ ೭ ತಾರೀಕು ಬ್ರಹ್ಮಕಲಶೋತ್ಸವ ನಡೆಯಿತು.

೧೯೩೨ರಲ್ಲಿ ಯೋಗಿ ಚಮನ್‌ನಾಥಜೀಗಳವರು ಪೀಠಾಧಿಪತಿಯಾಗಿ ಅಧಿಕಾರ ವಹಿಸಿಕೊಂಡರು. ಆದರೆ, ಆವರೆಗೂ ಕದ್ರಿ ದೇವಸ್ಥಾನದಲ್ಲಿ ಮೊಕ್ತೇಸರರಾಗಿದ್ದ ಪಟೇಲ್ ಬಾಳೆಬೈಲು ನಾರಾಯಣ ಆಚಾರ್ಯರನ್ನು ಮೊಕ್ತೇಸರಿಕೆಯಿಂದ ತೆಗೆದು ಜೋಗಿ ಮಠದ ಅರಸರೇ ಮುಂದಿನ ವಾರಸುದಾರರು ಎಂದು ೧೯೪೧ರಲ್ಲಿ ಧಾರ್ಮಿಕ ದತ್ತಿ ಇಲಾಖೆ ಆದೇಶ ಹೊರಡಿಸಿತು. ಇವರ ಕಾಲನಂತರ ಶ್ರೀ ರಾಮನಾಥ್‌ಜೀ ಮಠದ ಉಸ್ತುವಾರಿ ವಹಿಸಿಕೊಂಡರು.

೧೯೩೮ರಲ್ಲಿ ಜೋಗಿ ಸಮುದಾಯದ ಗ್ರಹಸ್ಥ ಜೋಗಿಗಳಲ್ಲಿ ಕೆಲವು ಗಣ್ಯರು ಸೇರಿಕೊಂಡು 'ಜೋಗಿ ಜಾತಿ ಗೋರಕ್ಷನಾಥ ವಿದ್ಯಾದಾಯಿನಿ ಸಮಿತಿ 'ಎಂಬ ಸಂಘವನ್ನು ಕಟ್ಟಿಕೊಂಡರು. ಮಠದ ಆವರಣದೊಳಗೆ ಹುಲ್ಲು ಛಾವಣಿಯ ಒಂದು ಸಣ್ಣ ಸಭಾಂಗಣವನ್ನು ನಿರ್ಮಿಸಿ, ಅಲ್ಲಿ ಸಾಂಸ್ಕೃತಿಕ, ಧಾರ್ಮಿಕ, ಸೇರಿದಂತೆ ಜೋಗಿ ಸಮುದಾಯದ ಬಾಂದವರ ಕಾರ್ಯಕ್ರಮ ನಡೆಸಲು ಅನುಕೂಲ ಮಾಡಿಕೊಟ್ಟರು.

ಮುಂಡಾಣ, ದೇವಸ್ಯ ಕದ್ರಿ ಕೈಬಟ್ಟಲು, ಯೆಯ್ಯಾಡಿ ಎಂಬ ನಾಲ್ಕು ಮಠಗಳ ವ್ಯಾಪ್ತಿಗೆ ಒಳಪಟ್ಟ ಮುಖ್ಯಸ್ಥರು, ಮತ್ತು ಮಂಗಳೂರು ಪೇಟೆಯಿಂದ ಒಬ್ಬ ಮುಖ್ಯಸ್ಥ ಸೇರಿದಂತೆ ಐವರು ಇದರಲ್ಲಿ ಕೋತ್ವಾಲ್ ಪದವಿಯಲ್ಲಿದ್ದರು. ೧೯೪೩ರಲ್ಲಿ ನವೆಂಬರ್ ೧೫ರ ಧಾರ್ಮಿಕ ದತ್ತಿ ಆದೇಶದಂತೆ ಕದಲೀ ಶ್ರೀ ಮಂಜುನಾಥ ದೇವಸ್ಥಾನದ ಎಲ್ಲಾ ಚರ-ಸ್ಥಿರ ಆಸ್ತಿ, ಸ್ವತ್ತುಗಳ ಜವಾಬ್ದಾರಿಕೆಯನ್ನು ಮಠಾಧಿಪತಿಗಳು (ಅನುವಂಶಿಕ ಮೊಕ್ತೇಸರ) ಮತ್ತು ಇಬ್ಬರು ಅನುವಂಶಿಕರಲ್ಲದ ಮೊಕ್ತೇಸರರಿಗೆ ನೀಡಿತ್ತು. ಅವರಲ್ಲಿ ಒಬ್ಬರು ಬ್ರಾಹ್ಮಣ ಮತ್ತೊಬ್ಬ ಬಂಟ ಸಮಾಜದವರಾಗಿದ್ದು ಅವರನ್ನು ಎಂಡೋಮೆಂಟ್ ಬೋರ್ಡಿನವರೇ ಚುನಾಯಿಸಿ ಇಲ್ಲಿಗೆ ನಿಯುಕ್ತಿ ಗೊಳಿಸುವ ಕ್ರಮವಿತ್ತು.

೧೯೪೫ರಲ್ಲಿ ಶ್ರೀ ಮಠಕ್ಕೆ ಚಮೇಲಿನಾಥಜೀ ನಿಯುಕ್ತರಾದರು. ೧೯೪೭ರಲ್ಲಿ ಪಿ. ಎಸ್. ಸುಬ್ಬರಾಯರು ದೇವಸ್ಥಾನದ ಮೆನೇಜರ್ ಆಗಿಯೂ ೧೯೪೮ರಲ್ಲಿ ಕೊಡಿಯಾಲ್‌ಗುತ್ತು ಕೆ. ಕೃಷ್ಣಯ್ಯ ಹೆಗ್ಡೆ ಪಾರಂಪರಿಕವಲ್ಲದ ಮೊಕ್ತೇಸರರಾಗಿಯೂ ಮತ್ತು ಕದ್ರಿ ಅರಸರು ಅನುವಂಶಿಕ ಮೊಕ್ತೇಸರರಾಗಿಯೂ ಮುಂದುವರಿಯುವಂತೆ ದತ್ತಿ ಇಲಾಖೆ ಆದೇಶ ಮಾಡಿತ್ತು. ಈ ಕ್ರಮವನ್ನು ವಿರೋಧಿಸಿ

ಚಮೇಲಿನಾಥಜೀಯವರು ನ್ಯಾಯಾಲಯದಲ್ಲಿ ದಾವೆ ಹೂಡಿದರು. ಅಲ್ಲದೆ ಆದಿ ಚುಂಚನಗಿರಿ ಮಠದ ಸ್ವಾಧೀನತೆ ಬಗ್ಗೆಯೂ ನ್ಯಾಯಾಲಯದಲ್ಲಿ ಮನವಿ ಮಾಡಿಕೊಂಡರು. ಈ ನಡುವೆ ಪ್ರಕರಣದ ಪರಿಹಾರಕ್ಕಾಗಿ ಮಧ್ಯಸ್ಥಿಕೆ ವಹಿಸುವಂತೆ ಶೃಂಗೇರಿ ಪೀಠಾಧಿಪತಿಗಳ, ಮತ್ತು ಮೈಸೂರಿನ ಅರಸ ಶ್ರೀ ಜಯಚಾಮರಾಜೇಂದ್ರ ಒಡೆಯರಲ್ಲಿಯೂ ಕೂಡಾ ಭಿನ್ನವಿಸಿಕೊಳ್ಳಲಾಯಿತು. ೧೯೫೩ರಲ್ಲಿ ಕದಲೀ ಮಂಜುನಾಥನ ಗುಡಿಗೆ ಭೇಟಿ ಇತ್ತ ಜಯಚಾಮರಾಜೇಂದ್ರ ಒಡೆಯರ್‌ವರು ರಾಜ ಚಮೇಲಿನಾಥಜೀವರನ್ನು ಕಂಡು ನಿಷ್ಪಕ್ಷಪಾತ ನ್ಯಾಯ ಒದಗಿಸಿಕೊಡಲು ಪ್ರಯತ್ನಿಸುವುದಾಗಿ ಆಶ್ವಾಸನೆ ಕೊಟ್ಟರಾದರೂ ಅದು ನೆರವೇರಲಿಲ್ಲ.

ಮುಂದಕ್ಕೆ ೧೯೫೭ರಲ್ಲಿ ಶ್ರೀ ಶಾಂತಿನಾಥಜೀಯವರು ಕದಲೀಮಠದ ಪೀಠಾಧಿಪತಿಗಳಾದರು. ಆದರೆ, ಚಮೇಲಿನಾಥರು ನ್ಯಾಯಾಲಯದಲ್ಲಿ ಹೂಡಿದ್ದ ಕದ್ರಿ ದೇವಸ್ಥಾನದ 'ಹಕ್ಕುದಾರಿಕೆ' ಕುರಿತ ಪ್ರಕರಣದ ವಿಚಾರಣೆಗೆ ಇವರು ಕದ್ರಿ ಮಠದ ಪರವಾಗಿ ವಕೀಲರನ್ನು ಕಳುಹಿಸದೇ ಇದ್ದ ಕಾರಣ ೭-೮-೧೯೫೮ರಲ್ಲಿ ಮಾನ್ಯ ಕೋರ್ಟು ಈ ಪ್ರಕರಣದ ಕುರಿತ ಅರ್ಜಿಯನ್ನು ತಳ್ಳಿ ಹಾಕಿತು. ಈ ಸಂಬಂಧವಾಗಿ ಧಾರ್ಮಿಕ ದತ್ತಿ ಇಲಾಖೆಯು ೫ ವರ್ಷಗಳಿಗೊಮ್ಮೆ ದೇವಸ್ಥಾನದ ಆಡಳಿತೆಗಾಗಿ ಒದೊಂದು ಸಮಾಜದಿಂದ ಒಬ್ಬೊಬ್ಬರು ಧರ್ಮದರ್ಶಿಗಳನ್ನು ಮತ್ತು ಬಂಟರ ಸಮುದಾಯದಿಂದ ಒಬ್ಬರು ಆಡಳಿತ ಮೊಕ್ತೇಸರರನ್ನು ಧಾರ್ಮಿಕ ಕ್ಷೇತ್ರಗಳಲ್ಲಿ ಅವರು ಪಡೆದಿರುವ ಅನುಭವಗಳ ಆಧಾರದ ಮೇಲೆ ನೇಮಿಸುವಂತೆ ಆದೇಶವನ್ನು ಖಾಯಂ ಮಾಡಿತ್ತು.

ಶ್ರೀ ಶಾಂತಿನಾಥಜೀಯವರ ಆಡಳಿತಾವಧಿಯಲ್ಲಿ ಕದ್ರಿಯ ಪಾದುವ ಶಾಲಾ ಮೈದಾನದ ಬಳಿಯಿರುವ 'ಶ್ರೀ ಭದ್ರಕಾಳಿ'ಯ ಗುಡಿಯನ್ನು ಜೀರ್ಣೋದ್ಧಾರ ಮಾಡಿ ಶ್ರೀ ದೇವಿಯ ಶಿಲಾಮಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಇವರಿಂದ ಅಂದು ದೀಕ್ಷೆ ಪಡೆದಿದ್ದ ಜೋಗಿ ಸಮುದಾಯದ ಶ್ರೀ ಉಮೇಶ್‌ನಾಥರೇ ಇಂದಿಗೂ ಶ್ರೀ ಭದ್ರಕಾಳಿ ಗುಡಿಗೂ ಕದಲಿ ಮಠದ ಕಾಳಭೈರವ ದೇವರಿಗೂ ಪ್ರಧಾನ ಅರ್ಚಕರಾಗಿ ಸೇವೆ ಮಾಡುತ್ತಾ, ಭಕ್ತ ಜನರ ಗಮನ ಸೆಳೆದಿದ್ದಾರೆ. ಶಾಂತಿನಾಥರು ಹನ್ನೆರಡು ವರ್ಷಗಳನ್ನು ಪೂರೈಸುವುದಕ್ಕೆ ಮುನ್ನವೇ ೧೯೬೨ರಲ್ಲಿ ಮೂಲ ಗುರುಮಠವನ್ನು ಸೇರಿದ್ದರಿಂದ ದೇವಸ್ಥಾನದ ವರ್ಷಾವಧಿ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಯೋಗಿ ರಾಮ್‌ನಾಥ್ ಶಾಸ್ತ್ರೀಜೀಯವರು ದೆಹಲಿಯಿಂದ ಬರುತ್ತಿದ್ದರು. ದರ್ಶನಿ ಯೋಗಿಗಳಾಗಿದ್ದ ಇವರು ಬಿಳಿ ಪಂಚೆ ಮತ್ತು ಬಿಳಿ ನಿಲುವಂಗಿ ತೊಟ್ಟು ಗಾಂಧಿ ಟೋಪಿ ಧರಿಸುತ್ತಿದ್ದರು.

೧೯೬೯ರಲ್ಲಿ ಬೈರಾಗ್ ಪಂಥದ ರಮ್ತೇ ಜೋಗಿಗಳಾದ ಶ್ರೀ ಸೋಮನಾಥ್‌ಜೀಗಳು ಪೀಠಾಧಿಪತಿಗಳಾಗಿ ಬಂದರು. ಇವರಿಗೆ ೬೫ ವರ್ಷ ವಯಸ್ಸಾಗಿತ್ತು. ಸಜ್ಜನ ಯೋಗಿಯಾಗಿದ್ದ ಇವರ ಕಾಲದಲ್ಲಿ ಮಠದ ಆರ್ಥಿಕ ಪರಿಸ್ಥಿತಿ ಅಷ್ಟೇನು ಚೆನ್ನಾಗಿರಲಿಲ್ಲ. ಇವರು ಕದ್ರಿ ದೇವಸ್ಥಾನದ ವರ್ಷಾವಧಿ ಕಾಲದಲ್ಲಿ ದೇವರಿಗೆ ತೊಡಿಸುವ ಚಿನ್ನ, ಬೆಳ್ಳಿಯ, ಆಭರಣಗಳಿದ್ದ ಪೆಟ್ಟಿಗೆಗಳ ಕೀಲಿ ಕೈಯನ್ನು ದೇವಸ್ಥಾನದ ಅಂದಿನ ಮುಕ್ತೇಸರರಾಗಿದ್ದ ವಾಸುದೇವ ಭಟ್ಟರಿಗೆ ನೀಡಿದ್ದರು. ಆದರೆ, ಜಾತ್ರೆ ಮುಗಿದ ಮೇಲೂ ವಾಸುದೇವ ಭಟ್ಟರು ಮಠಕ್ಕೆ ಕೀಲಿಕೈಯನ್ನು ವಾಪಾಸು ನೀಡದೇ ಇದ್ದುದರಿಂದಾಗಿ ಕೀಲಿಕೈಯು ಮಠಾಧಿಪತಿಗಳ ವಶವಿರುವ ಪದ್ಧತಿಯ ಪರಂಪರೆಯು ಅಂದಿಗೆ

ಕೊನೆಯಾಯಿತು. ಹಾಗಾಗಿ ವಾಸುದೇವ ಭಟ್ಟರ ನಂತರದಲ್ಲಿ ಬಂಟ ಸಮಾಜದಿಂದ ಆಡಳಿತ ಮೊಕ್ತೇಸರರನ್ನು ಆಯ್ಕೆ ಮಾಡುವ ಪದ್ಧತಿಯು ಪುನರಾವರ್ತನೆಯಾಯಿತು.

೧೯೮೧ರಲ್ಲಿ ಕದಲೀ ಮಠಕ್ಕೆ ಪೀಠಾಧಿಪತಿಗಳಾಗಿ ಬಂದವರು ಡಾ. ಸೋಮನಾಥಜೀಯವರು ಇವರು ಸ್ಥಳೀಯ ಭಕ್ತರೊಂದಿಗೆ ಉತ್ತಮವಾಗಿ ಒಡನಾಡಿಕೊಂಡವರು. ಅವರ ಕಾಲದಲ್ಲಿ ಕಾಶೀ ಕಾಳಭೈರವ ದೇವರ ಪ್ರಾರ್ಥನಾ ಮಂದಿರದ ನವೀಕರಣವಾಯಿತು. ಈ ಸಂದರ್ಭದಲ್ಲಿ ಭಕ್ತರಿಗಾಗಿ ಕ್ಷೇತ್ರ ಪುರಾಣ ಮತ್ತು ಪೂಜಾ ಸಾಮಾಗ್ರಿಗಳ ಮಾರಾಟಕ್ಕೆಂದು ಒಂದು ಅಂಗಡಿ ಕೋಣೆಯನ್ನು ಅದರ ಜೊತೆಗೆ ಜೋಗಿ ಸಮುದಾಯದ ಅನುಕೂಲಕ್ಕಾಗಿ ಒಂದು ಕಛೇರಿಯನ್ನು ಕಟ್ಟಿಸಲಾಯಿತು. ಕರ್ನಾಟಕ ಜೋಗಿ ಸಮಾಜ ಸುಧಾರಕ ಸಂಘಕ್ಕೆ 'ಗೋರಕ್ಷನಾಥ' ಜ್ಞಾನ ಮಂದಿರವೆಂಬ ಸಭಾಭವನವನ್ನು ನಿರ್ಮಿಸಲು ನಿವೇಶನದ ಹಕ್ಕು ಪತ್ರವನ್ನು ಇವರ ಅಧಿಕಾರವಧಿಯಲ್ಲಿ ನೀಡಲಾಯಿತು. ತಮ್ಮ ಆಡಳಿತವಧಿಯಲ್ಲಿ ಇವರು ಉತ್ತಮ ಹೆಸರು ಸಂಪಾದಿಸಿ ತರುವಾಯ ತಮ್ಮ ಮೂಲ ಮಠಕ್ಕೆ ತೆರಳಿದರು. ಇವರ ನಂತರದಲ್ಲಿ ಇಲ್ಲಿಗೆ ಪೀಠಾಧಿಪತಿಯಾಗಿ ಬಂದವರು ಶ್ರೀ ಮೋಹನ್ ನಾಥ್ ಜೀ ಕಪಲಾನಿ. ಅಳೆತ್ತರದ ಸುಂದರ ಮುಖ ಕಾಂತಿಯಿಂದ ಕೂಡಿದ ಇವರು ಕದ್ರಿ ಜೋಗಿ ಮಠದ ಸಂಪತ್ತನ್ನು ತನ್ನ ಊರಿನ ಮಠಕ್ಕೆ ಸಾಗಿಸಿದ್ದರೆಂಬ ಅಪಕೀರ್ತಿಗೆ ಒಳಗಾಗಿದ್ದರು. ಇವರ ನಿರ್ಗಮನದ ಸಮಯದಲ್ಲಿ ಝುಂಡಿಯ ಕಾರ್ಯಕಾರಿ ಸಮಿತಿ ಅಧ್ಯಕ್ಷರಾಗಿದ್ದ ಶ್ರೀ ಸೂರಜ್‌ನಾಥರು 'ದಲೀಚಾ'ಸಭೆಯಲ್ಲಿ ವಿರುದ್ದದ ಆರೋಪ ಸಾಬೀತಾಗಿ ಇವರಿಗೆ ೧ ಕೋಟಿ ೫೦ಲಕ್ಷ ರೂಪ್ಯಾಯಿಗಳಷ್ಟು ದಂಡ ವಿಧಿಸಿದ್ದರು, ದಂಡ ತೆರಲು ವಿಫಲರಾದರೆ ಊರಿನಲ್ಲಿರುವ ಇವರ ಆಸ್ತಿಯನ್ನು ಮುಟ್ಟುಗೋಲು ಹಾಕುವಂತೆ ತೀರ್ಮಾನಿಸಲಾಗಿತ್ತು. ಅಲ್ಲದೆ ಹಿಂದೊಮ್ಮೆ ಇದು ಜೋಗಿ ಮಠ ಅಲ್ಲ. ಸುವರ್ಣ ಕದಲೀ ಮಠ ಎಂದು ಹೇಳುವ ಮೂಲಕ ವಿವಾದ ಸೃಷ್ಟಿಸಿದ್ದರು.

ಇವರ ನಂತರ ೨೦೦೪ರಲ್ಲಿ ಜೋಗಿ ಮಠದ ಅರಸರಾಗಿ ನಿಯುಕ್ತಿಗೊಂಡವರು ಶ್ರೀ ಸಂಧ್ಯಾನಾಥ್‌ಜೀಯವರು. ಇವರು ರಾಜಸ್ಥಾನದ ರೇಬಾರಿ ಎಂಬ ಪಶುಪಾಲಕ ಸಮುದಾಯದವರು. ಇವರ ಆಡಳಿತವಧಿಯಲ್ಲಿ ಕದ್ರಿ ಮಠವು ರಾಜಸ್ಥಾನೀ ಮೂಲದ ಭಕ್ತಾರಿಂದಲೇ ತುಂಬಿ ಹೋಗಿತ್ತು. ರಾಜಸ್ಥಾನಿಗಳಿಗೆ ಭಂಗಿ ಸೇವನೆಯ ಅಭ್ಯಾಸವಿದೆಯೆಂದು ತಿಳಿಯುತ್ತದೆ. ನಾಥ ಸಮುದಾಯದ ಯೋಗಿಗಳಲ್ಲೂ ಯೋಗ ಸಾಧನೆಗಾಗಿ ಭಂಗಿ ಸೇವನೆ ಅನಿವಾರ್ಯವೆಂದು ಹೇಳಲಾಗುತ್ತದೆ. ಮೇಲಾಗಿ ಸಂಧ್ಯಾನಾಥರು ಕೂಡಾ ರಾಜಾಸ್ಥಾನಿಗಳೇ. ಹಾಗಾಗಿ ಇಲ್ಲಿನ ನಾಥ ಮಠಕ್ಕೆ ರಾಜಸ್ಥಾನೀ ಭಕ್ತರು ಹೆಚ್ಚು ಅಕರ್ಷಿತರಾಗಲು ಕಾರಣವಾಗಿರಬಹುದು. ಇದೇ ಸಲುಗೆಯಿಂದ ಎಂಬಂತೆ ರಾಜಸ್ಥಾನಿಗಳೆಲ್ಲ ಸೇರಿಕೊಂಡು ಸುಸಜ್ಜಿತವಾದ ಸಭಾಭವನವೊಂದನ್ನು ನಿರ್ಮಿಸಿ ಕದಲೀ ಮಠಕ್ಕೆ ಬಿಟ್ಟು ಕೊಟ್ಟಿದ್ದರು. ಆದರೆ, ಕೆಲವು ಜೋಗಿ ಸಮುದಾಯದ ಮಂದಿಗಳನ್ನು ತಮ್ಮ ಹತ್ತಿರಕ್ಕೂ ಬಿಟ್ಟು ಕೊಡದ ಸಂಧ್ಯಾನಾಥರು ಇಲ್ಲಿರುವ ನಾಥ ಮಠಕ್ಕೂ ಸಮುದಾಯಕ್ಕೂ ಯಾವುದೇ ಸಂಬಂದವಿಲ್ಲವೆಂದು ಹಿಂದೊಮ್ಮೆ ಕಡ್ಡಿ ತುಂಡಾದಂತೆ ನುಡಿದ್ದರು. ಈ ವಿಚಾರವಾಗಿ ಹಲವು ಬಾರಿ ಗುರು ಮತ್ತು ಶಿಷ್ಯೆಂದಿರಿಗೆ ಘರ್ಷಣೆಗಳು ಏರ್ಪಟ್ಟಿವೆ. ಸದ್ಯ ತನ್ನ ಹನ್ನೆರಡು ವರುಷಗಳ ಅಧಿಕಾರವನ್ನು ಮುಗಿಸಿ 'ಜಲಸಮಾಧಿ' ಸಂಕೇತವನ್ನು ಆಚರಿಸಿ ಸಂಧ್ಯಾನಾಥರು ಇಲ್ಲಿಂದ ತೆರಳಿದ್ದಾರೆ. ಇದೀಗ ೨೦೧೬ರಲ್ಲಿ ನೂತನ ಮಠಾಧಿಪತಿಯಾಗಿ ಮತ್ತೆ ರಾಜಸ್ಥಾನೀ ಮೂಲದವರೇ ಆಗಿರುವ ಶ್ರೀ ನಿರ್ಮಲನಾಥಜೀ ಯವರು ಪಟ್ಟಾಭಿಷಿಕ್ತರಾಗಿದ್ದಾರೆ. ೩೭ರ ಹರೆಯದ ಪದವೀದರ ಎನ್ನಲಾದ

ಇವರು ಕದ್ರಿ ಸೀಮೆಯ ಜೋಗಿಗಳ ಅಶೋತ್ತರಗಳಿಗೆ ಸ್ಪಂದಿಸುವ ಅರಸರಾಗುತ್ತಾರಾ? ಎಂಬ ಕುತೂಹಲವು ಇದೆ.

ಕದಲೀ ಮಠದ ದಾಖಲೆ :-

೧೪ನೇ ಶತಮಾನದ ಮಂಗಲನಾಥರ (ಕ್ರಿ.ಶ. ೧೩೯೭)ಕಾಲದಿಂದ ಕದ್ರಿ ಮಠದ ನಾಥರ ದಾಖಲೆಯು ಶುರುವಾಗುತ್ತದೆ. ಆದರೆ, ಮುಂದಿನ ೧೯ನೇ ಶತಮಾನದವರೆಗೆ ದಾಖಲೆಗಳು ಅಲಭ್ಯವಾಗಿದೆ. ಕಳೆದ ಸುಮಾರು ಒಂದೂವರೆ ಶತಮಾನದಲ್ಲಿ ಆಗಿ ಹೋದ ನಾಥರಲ್ಲಿ ಜ್ವಾಲಾನಾಥ ೧೮೫೮–೧೮೬೦; ಭವಾನಿನಾಥ ೧೮೬೦–೧೮೭೨; ಹೀರಾನಾಥ; ೧೮೭೨–೧೮೯೬, ಕಾಶಿನಾಥ ೧೮೯೬–೧೯೦೮; ಸುಂದರನಾಥ ೧೯೦೮–೧೯೨೧; ಟೆಹಲ್‌ನಾಥ ೧೯೨೧–೧೯೩೩; ಚಿಮನ್‌ನಾಥ ೧೯೩೩–೧೯೪೫; ಚಮೇಲಿನಾಥ ೧೯೪೫–೧೯೫೭; ಶಾಂತಿನಾಥ ೧೯೫೭–೧೯೬೯; ಸೋಮನಾಥ ೧೯೬೯–೧೯೮೧; ಸೋಮನಾಥ ೧೯೮೧–೧೯೯೨; ಮೋಹನನಾಥ ೧೯೯೨–೨೦೦೪; ಸಂದ್ಯಾನಾಥ ೨೦೧೪–೨೦೧೬, ನಿರ್ಮಲನಾಥ ೨೦೧೬– ಇವರಲ್ಲಿ ಇಬ್ಬರು ಸೋಮನಾಥರು ಕ್ರಮವಾಗಿ ಬೈರಾಗ್ ಹಾಗೂ ದರಿಯಾ ಪಂಥಕ್ಕೆ ಸೇರಿದವರು, ಕದ್ರಿ ಮಠದ ರಾಜನ ಗೈರಿನಲ್ಲಿ ವಿಟ್ಲ ಮಠದ ಪೀಠಾಧಿಪತಿಯನ್ನು ಕರೆಸಿ ಆಚರಣೆಗಳನ್ನು ಪೂರೈಸುತ್ತಾರೆ. ಕದ್ರಿ ಮಠದ ನಾಥರಲ್ಲೇ ತುಂಬಾ ಪ್ರಸಿದ್ಧಿಯನ್ನು ಪಡೆದವರೆಂಬ ಖ್ಯಾತಿ ಹೊಂದಿದ್ದ ಶ್ರೀ ಸುಂದರನಾಥರು ಕೇರಳದಲ್ಲಿ ಹಿಂದುಳಿದ ವರ್ಗಗಳ ಚಳುವಳಿ ಆರಂಭಿಸಿದ ಈಳವ ಸಮಾಜದ ನಾಯಕ ನಾರಾಯಣ ಗುರುಗಳಿಗೆ ದೀಕ್ಷೆ ಕೊಟ್ಟವರು.[೯]

ಲಿಂಗ ರೂಪಿಯಾಗಿ ಉದ್ಭವಿಸಿದ ಮಂಜುನಾಥ:-

ಕದ್ರಿ ಬೆಟ್ಟದ ಕೆಳಗೆ ಕದ್ರಿ ಮಂಜುನಾಥನ ಗುಡಿಯಿದೆ. ಗುಡಿಯ ಹೊರ ಭಾಗದ ಮೂರು ದಿಕ್ಕುಗಳಲ್ಲಿ ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಚೌರಂಗಿನಾಥರ ಮೂರ್ತಿಗಳಿವೆ. ಮತ್ಸ್ಯೇಂದ್ರನಾಥನು ಪಶ್ಚಿಮಕ್ಕೆ ಸಮುದ್ರಮುಖಿಯಾಗಿ ಪದ್ಮಾಸನದ ಭಂಗಿಯಲ್ಲಿದ್ದಾನೆ. ಗೋರಕ್ಷನಾಥ ಮತ್ತು ಚೌರಂಗಿನಾಥನು ಗುಡಿಯ ಪೂರ್ವಕ್ಕೆ ಮುಖ ಮಾಡಿ ಯೋಗಭಂಗಿಯಲ್ಲಿ ಕುಳಿತ್ತಿದ್ದರೆ, ಗೋರಕನದ್ದು ಎದ್ದು ಹೊರಡಲನುವಾದ ಭಂಗಿ. ಅವನ ಬಲಗೈಯಲ್ಲಿ ಜಪಸರವಿದೆ, ಎಡಗೈಯಲ್ಲಿನ ತೋರುಬೆರಳು ಮತ್ತು ಹೆಬ್ಬೆರಳು ಸೇರಿಸಿ ವೃತಾಚರಿಸುತ್ತಿರುವ ಮುದ್ರೆಯಿದೆ. ಕಾಲ ಬುಡದಲ್ಲಿ ಒಂದು ನಾಯಿಯೂ ಇದೆ. ಗುಡಿಯ ಮೇಲಿನ ದೇವಸ್ಥಾನದ ಒಳಗಿನ ಎಡಬದಿಯಲ್ಲಿ ಶ್ರೀ ಮಲರಾಯ ದೈವ ಮತ್ತು ಎತ್ತರವಾದ ತುಳಸೀ ಕಟ್ಟೆಯೊಂದಿದೆ. ಮಂಜುನಾಥನ ನೇರ ಎದುರಿನ ಉಪ್ಪರಿಗೆಯಲ್ಲಿ ಅಣ್ಣಪ್ಪ ದೈವದ ಮೂರ್ತಿಯಿದೆ. ಮಂಜುನಾಥನ ನಿತ್ಯದ ಅಭಿಷೇಕಕ್ಕೆ ಬಳಸುವ ಪವಿತ್ರ ಬಾವಿಯ ಪಕ್ಕದಲ್ಲಿ ನಾಗನ ವಿಗ್ರಹಗಳಿರುವ ಈ ಕಡೆಗೆ ನವಗ್ರಹ ಮೂರ್ತಿಗಳ ಕಟ್ಟೆಯೂ ಇದೆ. ದೇವಸ್ಥಾನದ ರಾಜಾಂಗಣದಲ್ಲಿ ಶ್ರೀ ಶಾಸ್ತಾವು ಗುಡಿ, ಗಣಪತಿ ದೇವಸ್ಥಾನ, ಬೆಳ್ಳಿರಥವಿರಿಸುವ ಕೋಣೆ, ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನವಿದೆ. ಮಂಜುನಾಥನ ಗುಡಿಯ ಮೇಲ್ಭಾಗದಲ್ಲಿ ಒಂಬತ್ತು ಕೆರೆಗಳಿವೆ. (ನವನಾಥ ಕುಂಡ) ಪಕ್ಕದಲ್ಲಿ ನಿರಂತರ ನೀರು ಹರಿಯುವ ಚಿಲುಮೆಯಿದೆ. ಇದಕ್ಕೆ ಶಿಲೆಯಲ್ಲಿ ಕೆತ್ತಿದ ಗೋವಿನ ಮುಖವನ್ನು ಅಳವಡಿಸಲಾಗಿದೆ. ಇದಕ್ಕೆ 'ಕಾಶೀ ಭಾಗೀರಥಿ' ತೀರ್ಥವೆಂದು ಹೇಳುತ್ತಾರೆ. ಇದು ೦೩-೨-೨೦೧೪ ರಂದು ಪುನರ್‌ಪ್ರತಿಷ್ಠೆಗೊಂಡಿದೆ ಅದರ

ಪಕ್ಕಕ್ಕೆ ಮೇಲ್ಭಾಗದಲ್ಲಿ ಚಂದ್ರಮೌಳೇಶ್ವರ ಛತ್ರವಿದೆ. ಇಲ್ಲಿ ಯೋಗಿಗಳು ಧುನಿ ಹಾಕಿಕೊಂಡು 'ಆದೇಶ್' ಎಂದು ನಮಸ್ಕಾರ ಮಾಡುವ ಜಾಗವಿದೆ. ಗೋಡೆಗಳಲ್ಲಿ ಇದನ್ನು ನೆನೆಪಿಸುವ ಭಿತ್ತಿ ಚಿತ್ರವೂ ಇದೆ. ೨೦೧೬ರ ಝುಂಡಿಯಲ್ಲಿ ಬಂದಿರುವ ಜಟಾಜೂಟ ಸಾಧುವೊಬ್ಬ ಈ ಛತ್ರದಲ್ಲಿ ಇದೀಗ ಉಳಿದು ಕೊಂಡಿರುವುದು ಕಾಣುತ್ತದೆ.

ಕದ್ರಿಯ ಮಂಜುನಾಥ ದೇವಾಲಯದಲ್ಲಿರುವ ಮೂರ್ತಿಶಿಲ್ಪ ಮತ್ತು ಶಾಸನಗಳು ಜೋಗಿ ಮಠದ ಅಸ್ತಿತ್ವವನ್ನು ೧೦ನೇ ಶತಮಾನಕ್ಕೆ ಕೊಂಡೊಯ್ಯುತ್ತದೆ. ಅಲುಪ ರಾಜ ಕುಂದವರ್ಮನು ಕಲಿ ವರ್ಷ ೪೦೬೮, ಕನ್ಯಾರಾಶಿಯಲ್ಲಿ ಗುರು, ರೋಹಿಣಿ ನಕ್ಷತ್ರವಿರುವಾಗ 'ಕದರಿಕಾ' ಎಂಬ ಸುಮನೋಹರ ವಿಹಾರದಲ್ಲಿ ಲೋಕೇಶ್ವರನೆಂಬ ದೇವರ ಪ್ರತಿಷ್ಠೆ ಮಾಡಿದ್ದಾನೆ ಎಂಬಿತ್ಯಾದಿ ವಿವರಗಳು ಲೋಕೇಶ್ವರ ಮೂರ್ತಿಯ ಪೀಠದಲ್ಲಿರುವ ಶಾಸನದಲ್ಲಿದೆ. ಇದು ಸಂಸ್ಕೃತ ಭಾಷೆ ಗ್ರಂಥ ಲಿಪಿಯಲ್ಲಿದೆ. ಕ್ರಿಶ ೯೬೮ ವರ್ಷ ಜನವರಿ ತಿಂಗಳಿನಿಂದ ೧೩ನೇ ತಾರೀಕಿಗೆ ಈ ಲೆಕ್ಕಾಚಾರ ತಾಳೆ ಬರುತ್ತದೆ ಎಂದು ಶಾಸನ ತಜ್ಞರ ಅಭಿಮತ. ಜಟಾಮುಕುಟದ ಪದ್ಮಾಸನದಲ್ಲಿ ಕುಳಿತ ಧ್ಯಾನಿ ಬುದ್ಧನಾಗಿರುವ ಈ ಮೂರ್ತಿಗೆ ಮೂರು ಮುಖಗಳು ಮತ್ತು ಆರು ಕೈ ಗಳಿವೆ. ಎಡ ಹೆಗಲಿನಿಂದ ಎದೆಯ ಭಾಗವಾಗಿ ಇಳಿಬಿದ್ದ ಅಜಿನ ಉಪವೀತವಿದೆ. ಈ ಉಪವೀತದಲ್ಲಿ ಕೃಷ್ಣ ಮೃಗದ ತಲೆಯನ್ನು ತೋರಿಸಲಾಗಿದೆ. ಮೃಗದ ತಲೆಯ ಮೇಲ್ಭಾಗದಲ್ಲಿ ನಾಥ ಪಂಥೀಯ ಯೋಗಿಸಾಧುಗಳು ಊದುವ ಸಿಂಗನಾದ ಕಾಣುತ್ತಿದೆ. ನಾಥ ಪಂಥಕ್ಕಷ್ಟೇ ಸೀಮಿತವಾಗಿರುವ ಈ ಪೀಪಿ ಯನ್ನು ಶಿಲ್ಪದಲ್ಲಿ ಕಾಣಿಸಿರುವುದು ಮತ್ಸ್ಯೇಂದ್ರನಾಥನನ್ನು ಅವಲೋಕಿತೇಶ್ವರ ನೊಡನೆ ಸಮೀಕರಿಸಿರುವುದಕ್ಕೆ ಪುರಾವೆ. ಈ ದೇವರನ್ನೇ ಶಾಸನದಲ್ಲಿ ಲೋಕೇಶ್ವರ ಎನ್ನಲಾಗಿದೆ. ಲೋಕೇಶ್ವರ ಎನ್ನುವುದು ಅವಲೋಕಿತೇಶ್ವರನದ್ದು ಮತ್ತೊಂದು ಹೆಸರು. ಅವನಿಗೆ ಆರು ರೂಪ ಬೇದಗಳಿದ್ದು, ಮಂಜುನಾಥ ಎಂಬುವುದು ಆರನೇ ರೂಪ. ಈ ಕುರಿತಾದ ಜ್ಞಾನ ಶ್ಲೋಕವು ಬಾರ್ಜ್ ವೆಸ್ಟರ್ ಬ್ರಿಗ್ಸ್ ಎಂಬ ಲೇಖಕ ಬರೆದ "ಗೋರಖನಾಥ ಆಂಡ್ ಕಾನ್‌ಫಟ್ ಯೋಗಿ" ಎಂಬ ಪುಸ್ತಕದಲ್ಲಿ ನೇಪಾಲದಲ್ಲಿ ಮತ್ಸ್ಯೇಂದ್ರನಾಥನನ್ನು ಅವಲೋಕಿತೇಶ್ವರನೊಡನೆ ಸಮೀಕರಿಸಿರುವುದರ ಬಗ್ಗೆ ಮಾತ್ರವಲ್ಲದೆ ೨೦ನೇಯ ಶತಮಾನದ ಆದಿಭಾಗದಲ್ಲಿ ಉತ್ತರ ಭಾರತದಲ್ಲಿ ವಿಶೇಷ ಅಧ್ಯಯನ ನಡೆಸಿ ತಾನು ಕಲೆಹಾಕಿ ಕೊಂಡಿರುವ ನಾಥ ಸಂಪ್ರದಾಯದ ವಿವರಗಳನ್ನು ದಾಖಲಿಸಿಕೊಂಡಿದ್ದಾನೆ ಎನ್ನಲಾಗುತ್ತದೆ. [೧೦]

ಕದ್ರಿಯ ಜೋಗಿ ಮಠಕ್ಕೂ ಮಂಜುನಾಥ ಗುಡಿಗೂ ಅತ್ಯಂತ ಹಳೆಯ ಸಂಬಂಧ. ಸಂಶೋಧನಾ ಅಧ್ಯಯನದ ಪ್ರಕಾರ ಗುಡಿಯು ವಜ್ರಯಾನ ಪಂಥಕ್ಕೆ ಸೇರಿದ್ದು, ನಂತರದಲ್ಲಿ ನಾಥ ಪಂಥದ ಕೇಂದ್ರವಾಯಿತೆನ್ನಲಾಗಿದೆ. ಗುಡಿಯಲ್ಲಿದ್ದ ಮತ್ಸ್ಯೇಂದ್ರ ರೂಪಿ ಅವಲೋಕಿತೇಶ್ವರನನ್ನು ಗೌಣ ಮಾಡಿ ಶಿವಲಿಂಗವನ್ನು ಸ್ಥಾಪಿಸಿದ ಬಳಿಕ ಅದರ ಪೌರೋಹಿತ್ಯದ ಅಧಿಕಾರ ವೈದಿಕರ ಕೈ ಸೇರಿತೆಂಬ ಚರ್ಚೆಯಿದೆ. ಅಂದಿನಿಂದ ಬ್ರಾಹ್ಮಣರಿಗೂ ನಾಥರಿಗೂ ಘರ್ಷಣೆ ಏರ್ಪಟ್ಟು ಪ್ರಕರಣ ಕೋರ್ಟಿನವರೆಗೂ ಹೋಯಿತೆಂದು, ನಂತರದಲ್ಲಿ ಹೊಸ ಸ್ಥಳ ಪುರಾಣಗಳು ಸೃಷ್ಟಿಸಲ್ಪಟ್ಟವು ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

ಕದಳೀ ಮಂಜುನಾಥ ದೇವಳದಲ್ಲಿ ಅನೇಕ ವರ್ಷಗಳ ಹಿಂದೆ ಅರ್ಚಕರಾಗಿದ್ದರೆನ್ನಲಾದ ಪೊಳಲಿ ರಾಜರಾಜೇಶ್ವರಿ ದೇವಸ್ಥಾನಕ್ಕೆ ಸಂಬಂಧಪಟ್ಟ ವೇದಮೂರ್ತಿ ಮಾಧವ ಭಟ್ಟ, ಮೆನೇಜರ್ ಶ್ರೀ ಅಚ್ಚುತಭಟ್ಟ ಮತ್ತು ಮಂಗಳೂರಿನ ಮಂಗಳಾದೇವಿ ದೇವಸ್ಥಾನದ ಅರ್ಚಕ ಮೊಕ್ತೇಸರರಾಗಿದ್ದ ಶ್ರೀ ಸುಬ್ರಹ್ಮಣ್ಯ ಐತಾಳರಲ್ಲಿ ನಷ್ಟವಾಗದೇ ಉಳಿದಿದ್ದ ಗ್ರಂಥಗಳ ಕೆಲವೊಂದು ಪ್ರತಿಗಳನ್ನು ಕಷ್ಟಪಟ್ಟು ಯಥಾಮಿತಿ ತಿದ್ದಿ ಪರಿಷ್ಕರಿಸಿ ಮುಂದಿನ ಪೀಳಿಗೆಗೆ ಕೊಡುಗೆ ನೀಡಿರುವ ವೇದಾಂತ ಶಿರೋಮಣಿ ಕಡವ ಶಂಭುಶರ್ಮರು ನಾಥ ಸಂಪ್ರದಾಯವು ಪ್ರಾಚೀನ ಕಾಲದಿಂದಲೂ ಪ್ರಚಲಿತವಾಗಿದ್ದು, ಯೋಗದಿಂದ ಇಂದ್ರಿಯಗಳನ್ನು ಜಯಿಸಿ ಶಿವಶಕ್ತಿಯ ದಿವ್ಯ ಸಾನಿಧ್ಯ ಪಡೆಯುವುದು ಈ ಪಂಥದ ತಿರುಳು ಎಂಬುವುದಾಗಿ ಸಿದ್ದ ಸಿದ್ದಾಂತ ಪದ್ಧತಿಯ ಕೃತಿಯಲ್ಲಿ ಹೇಳಿದ್ದಾರೆ. ನವನಾಥರಿಂದ ನಿರ್ಮಾಣಗೊಂಡ ಶೈವಮತಕ್ಕೆ 'ಕಾಳಯಾಮಳ' ಶಾಖೆ ಎಂದು ನಿಜಗುಣರು 'ವಿವೇಕ ಚಿಂತಾಮಣಿ' ಕೃತಿಯಲ್ಲಿ ಹೇಳಿದ್ದಾರೆ. ನಾಥ ಪಂಥವು ಹತ್ತನೆಯ ಶತಮಾನದ ಮಧ್ಯಭಾಗದಲ್ಲಿ ದಕ್ಷಿಣ ಕನ್ನಡವನ್ನು ಪ್ರವೇಶ ಮಾಡಿತು ಎಂದು ಡಾ. ಗುರುರಾಜ ಭಟ್ಟರು (ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್) ಕೃತಿಯಲ್ಲಿ ಹೇಳಿದ್ದಾರೆ. ತಪೋ ಭೂಮಿಯನ್ನು ಹರಿಸಿ ಬಂದ ಭಾರ್ಗವ ರಾಮನು ಪರಮೇಶ್ವರನನ್ನು ಕುರಿತು ಮಾಡಿದ ಸ್ತೋತ್ರದಿಂದ ಸಂತುಷ್ಟನಾಗಿ ಬಾಲರೂಪ ದಾರಿಯಾಗಿ ಗೋಚರಿಸಿದ ಪರಮೇಶ್ವರನು ಭಾರ್ಗವನ ಮೇಲಿನ ಪ್ರೀತಿಗಾಗಿಯೂ ಲೋಕದ ಹಿತಕ್ಕಾಗಿಯೂ ಕದಲೀ ವನವೆಂಬ ಈ ಕ್ಷೇತ್ರದಲ್ಲಿ ರಸಕೂಪದೊಳಗೆ ವಾಸವಾಗಿರುವೆನು ಎಂದಿದ್ದಾನೆ. [೧೧]

ಪೊಳಲಿಯ ವೇ.ಮಾಧವ ಭಟ್ಟರ ತುಳು ಬರಹದಲ್ಲಿರುವ ತಾಳಪತ್ರದ ಗ್ರಂಥವು ಹೇಳುವ ಪ್ರಕಾರ ಹಿಂದೆ ಮತ್ಸ್ಯೇಂದ್ರನಾಥ ಗೋರಖನಾಥ ಎಂಬ ಗುರು ಶಿಷ್ಯರು ಋಷಿ ಮುನಿಗಳ ಜೊತೆಗೂಡಿ ಕದ್ರಿ ಮಠದಲ್ಲಿ ತಪಸ್ಸು ಮಾಡುತ್ತಿರಲು ಮತ್ಸ್ಯೇಂದ್ರನಿಗೆ ಶಿವ ಮಂದಿರ ಕಟ್ಟಿಸಬೇಕೆಂಬ ಬಯಕೆಯಾಗಿ ತನ್ನ ಶಿಷ್ಯನನ್ನು ಶಿವಲಿಂಗ ತರಲೆಂದ ಕಾಶಿಗೆ ಕಳುಹಿಸಿ ತಪೋ ನಿರತನಾಗುತ್ತಾನೆ. ಹಲವು ವರುಷಗಳ ಕಾಲ ಶಿಷ್ಯನು ಮರಳಿ ಬಾರದಿರಲು ತನ್ನ ಛಲಬಿಡದ ತಪಸ್ಸಿಗೆ ಸಂತುಷ್ಟನಾಗಿ ಭುವಿಯೊಳಗಿಂದ ಬ್ರಹ್ಮ, ವಿಷ್ಣು, ಮಹೇಶ್ವರರು ಏಕಲಿಂಗಾಕಾರದಿಂದ ಅರ್ಧಲಿಂಗಾಕಾರವಾಗಿ ಪ್ರತ್ಯಕ್ಷವಾಗಲು. ಅ ಲಿಂಗವು ಮಂಜಿನಂತೆ ಗೋಚರಿಸುತ್ತದೆ. ಅದನ್ನು ಕಂಡ ಮತ್ಸ್ಯೇಂದ್ರನು 'ಮ್ಯೆಂಜ್‌ನಾಥ' ಆಗಯ ಎನ್ನಲು ಅದೇ ಮುಂದೆ 'ಮಂಜುನಾಥ' ಎಂದು ಹೆಸರಾಯಿತು. ನಂತರದಲ್ಲಿ ಗೋರಕ್ಷನಾಥನು ಕಾಶಿಯಿಂದ ಲಿಂಗವ ತರಲು, ಇಲ್ಲಿ ಮೊದಲೇ ಉದ್ಭವ ಲಿಂಗವು ಗೋಚರಿಸಿದ್ದರಿಂದ ಆ ಲಿಂಗವನ್ನು ತೀರ್ಥ ಕುಂಡದಲ್ಲಿ ಇರಿಸಲಾಯಿತು. ಈ ಪ್ರಕಾರವಾಗಿ ಸ್ಥಳ ಪುರಾಣವು ಕದ್ರಿಯ ಗುಡಿಯು ಮೂಲತ ಶೈವವೆಂದೂ, ಇಲ್ಲಿರುವ ಲಿಂಗವು ಉದ್ಭವವಾದುದ್ದೆಂದೂ ಶಿಷ್ಯ ಗೋರಕನು ಕಾಶಿಯಿಂದ ತಂದ ಲಿಂಗ ಇಲ್ಲಿ ಸ್ಥಾಪನೆಯಾಗಲಿಲ್ಲ ಎಂದು ಅಭಿಪ್ರಾಯ ಪಡಲಾಗಿದೆ. [೧೨]

ಸೂಕ್ಷ್ಮವಾಗಿ ನೋಡಿದಾಗ ತಿಳಿದು ಬರುವ ಸಂಗತಿಯೇಂದರೆ ಮಂಜುನಾಥ ದೇವಸ್ಥಾನವನ್ನು ನಾಥ ಸಂಪ್ರದಾಯದ ತಳಕಿನಿಂದ ಬೇರ್ಪಡಿಸಲು ಸಾಧ್ಯವಾಗದಿರುವುದು. ಆದರೆ, ಗುಡಿಯು ಇಂದಿಗೂ ಬೌದ್ಧ, ನಾಥ ಹಾಗೂ ಆಗಮ ಶೈವದ ಮೂರು ಕುರುಹುಗಳನ್ನು ಇರಿಸಿಕೊಂಡಿದೆ ಎಂದು ತಿಳಿಬಹುದು. ಗರ್ಭಗ್ರಹದಲ್ಲಿ ಆಗಮೋಕ್ತ ಪೂಜೆ ಪಡೆಯುವ ಶಿವಲಿಂಗ, ಗರ್ಭಗುಡಿಯ

ಹೊರಗೆ ಅವಲೋಕಿತೇಶ್ವರ, ಬುದ್ಧ ಹಾಗೂ ಮಂಜುಶ್ರೀ ಘೋಷರ ಮೂರ್ತಿಗಳು ಗುಡಿಯ ಮೂರು ದಿಕ್ಕುಗಳಲ್ಲಿರುವ ಗೋರಖ, ಮತ್ಸ್ಯೇಂದ್ರ, ಚೌರಂಗಿನಾಥರ ಮೂರ್ತಿಗಳಿಂದ ಇದು ಸ್ಪಷ್ಟವಾಗುತ್ತದೆ. ಮತ್ಸೇಂದ್ರನಾಥ, ಚೌರಂಗಿನಾಥರನ್ನು ಉಳಿದು ಗೋರಕ್ಷನಾಥರ ಮೂಲಸ್ಥಾನ ಪಲ್ಲಟವಾಗಿದೆ. ಬಹುಶ ಮೊದಲ ಹಂತದಲ್ಲಿ ಭೌದ್ಧ ಮತ್ತು ನಂತರದ ಹಂತದಲ್ಲಿ ನಾಥ ಕೊನೆಯ ಹಂತದಲ್ಲಾದ ಶಿವಲಿಂಗದ ಸ್ಥಳಾಂತರವನ್ನು ಇದನ್ನು ಸ್ಥಳ ಪುರಾಣವೇ ತಿಳಿಸುತ್ತದೆ. ಆದರೆ, ಜೋಗಿ ಮಠದ ನಾಥನನ್ನು ಕದ್ರಿಯ ಮಂಜುನಾಥನ ಜಾತ್ರೆಯ ಉತ್ಸವಕ್ಕೆ ಆಮಂತ್ರಿಸಿ ಗೌರವಿಸುವ ಕ್ರಮವು ಇಂದಿಗೂ ನಡೆದು ಬಂದಿದೆ.

ಕದಿರೆಯ ದೇವಾಲಯದಲ್ಲಿ ಕ್ರಿ.ಶ. ೧೪೭೫ ರ ಶಾಸನದಲ್ಲಿ ನಾಥ ಪಂಥದ ಕುರಿತ ಉಲ್ಲೇಖವಿದೆ. ಶ್ರೀ ಚಂದ್ರನಾಥ ಒಡೆಯರ ಶಿಷ್ಯರು ಶ್ರೀ ಮಂಗಲನಾಥ ಒಡೆಯರಿಗೆ ಕದಿರೆಯ ನಾಲ್ಕು ಸ್ಥಾನಿಕರು ಒಟ್ಟಾಗಿ ಭೂದಾನ ಮಾಡುತ್ತಾರೆ. ಇದು ಗೋರಖ ಮತ್ತು ಚಂದ್ರನಾಥರ ಪೂಜಾ ಕೆಂಕರ್ಯಕ್ಕೆ ಮತ್ತು ಒಂದು ವರ್ಷದ ಭಿಕ್ಷೆ ಅಯನಕ್ಕೆ ಬಂದ ಸಮಯಕ್ಕೆ ಒಂದು ಹೊತ್ತಿನ ಊಟಕ್ಕೂ ಎಂದಿದೆ.

ನಾಥ ಸಂಪ್ರದಾಯದ ಪ್ರಚಾರಮಂತ್ರಿ ಶ್ರೀ ಭೂತನಾಥೇಶ್ವರ್ ನಾಥ್‌ಜೀ ಯವರು ೧೯೫೦ರಲ್ಲಿ ಕದಳೀ ಯೊಗೇಶ್ವರ ಮಠದಲ್ಲಿ ಪ್ರಚಾರ ಕಾರ್ಯದಲ್ಲಿದ್ದಾಗ ತ್ರಿಬಾಷ ಪಂಡಿತ ಮುತ್ತೂರಿನ ಕಡವ ಶಂಭು ಶರ್ಮ ಮತ್ತು ಡಾ. ಎನ್. ವಿ. ಉಪಾಧ್ಯಾಯ ಇವರಿಂದ ನಾಥಸಂಪ್ರದಾಯದ ಬಗ್ಗೆ ತಾನು ಸಂಗ್ರಹಿಸಿಟ್ಟಿದ ಆಧಾರ ಬರಹಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಈ ಕೆಳಗಿನ ಗ್ರಂಥ ಬಿಡುಗಡೆಗೊಳಿಸಿದರು.

೧. ಅಮರಕಥಾ ಮತ್ತು ಅಮರಲೋಕ
೨. ಗೋರಕ್ಷ ಪದ್ಧತಿ (ಯೋಗ)
೩. ಭಾರದ್ವಾಜ ಸಂಹಿತಾರ್ಗತ ಕದಲಿ ಮಂಜುನಾಥ ಮಹಾತ್ಮ್ಯಮ್
೪. ಚರ್ಪಟನಾಥ ಶತಕಂ
೫. ನವನಾಥ ಕಥಾ
೬. ಅಮನಸ್ಕ ಯೋಗ ಮತ್ತು ಆತ್ಮವಾದ
೭. ಯೋಗೀಂದ್ರ ಭರ್ತ್ನ್ರಹರಿ ವಿರಚಿತ ವೈರಾಗ್ಯ ಶತಕಂ
೮. ಯೋಗೀಂದ್ರ ಭರ್ತ್ನ್ರಹರಿ ವಿರಚಿತ ನೀತಿ ಶತಕಂ
೯. ಅಮರೌಘ ಶಾಸನಂ
೧೦. ಗೋರಕ್ಷ ಸಿದ್ಧಾಂತ ಸಂಗ್ರಹ
೧೧. ಗೋರಕ್ಷ ಸಿದ್ಧ ಸಿದ್ದಾಂತ ಪದ್ಧತಿ
೧೨. ಯೋಗ ಬೀಜಂ ಮತ್ತು ಗೋರಕ್ಷ ಸಹಸ್ರನಾಮ ಸ್ತೋತ್ರಂ[೧೨]

ಕ್ರಿ.ಶ ೧೪೪೦ರ ಶಾಸನವೊಂದರಲ್ಲಿ ಅನುಪಮನಾಥನ ಒಡೆಯನ ಶಿಷ್ಯ ಸುಬುದ್ಧಿನಾಥನನ್ನು ಕದಿರೆಯಲ್ಲಿ ಅರಸುತನದ ಪಟ್ಟಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಚೌಳಿಕೇರಿಯ ಐವರು

ಪ್ರಮುಖರು ತಡೆದು, ಅನುಪಮನಾಥ ಒಡೆಯನ ಮಠದ ಗೋರಕ್ಷನಾಥನ ಪೂಜೆಯ ಸಲುವಾಗಿ ಭೂದಾನ ಮಾಡಿದ ಉಲ್ಲೇಖವಿದೆ.

ಜೋಗಿ ಅರಸನು ಮಂಜುನಾಥ ಸನ್ನಿಧಿಯಲ್ಲಿ ನಡೆಯುವ ಕಾಲವದಿ ಉತ್ಸವದಲ್ಲಿ ಸಕ್ರೀಯವಾಗಿ ಭಾಗಿಯಾಗುತ್ತಾನೆ. ಕಾಲಾವಧಿ ಜಾತ್ರೆಯ ಕರೆಯೋಲೆ ಇವನ ಹೆಸರಿನಲ್ಲೇ ಪ್ರಕಟವಾಗುತ್ತದೆ. ಕದ್ರಿಯ ಪುಣ್ಯ ತೀರ್ಥ ಸ್ನಾನವನ್ನು ಸಂಪ್ರದಾಯದಂತೆ ಅರಸನು ಗೋಮುಖ ಬಾಗೀರಥಿ ತೀರ್ಥದಲ್ಲಿ ಮಾಡುತ್ತಾನೆ. ಮುಹೂರ್ತಕ್ಕೆ ಸರಿಯಾಗಿ ಕಾಶಿಯಿಂದ ಬರುವ ಪುಷ್ಪವೊಂದು ಅರಸರ ಮುಕುಟವನ್ನು ಅಲಂಕರಿಸುತ್ತದೆ ಎನ್ನುವ ಐತಿಹ್ಯವಿದೆ. ಕದ್ರಿ ಮಂಜುನಾಥ ದೇವರ ಕಟ್ಟೆ ಪೂಜೆಯ ಸವಾರಿ ಬಲಿ ನಡೆಯುವ ಸಂದರ್ಭ ನಾಲ್ಕು ದಿನಗಳಲ್ಲೂ ಕೂಡಾ ಅರಸನು ಸವಾರಿ ಬಲಿ ಜೊತೆಯಲ್ಲಿ ಉಪಸ್ಥಿತರಿರಬೇಕು. ಮೊದಲ ದಿನದ ಸವಾರಿ ಬಲಿ ಬಿಕರ್ನಕಟ್ಟೆ (ಪೂರ್ವ ದಿಕ್ಕು) ೨ನೇ ದಿನದ ಸವಾರಿ ಬಲಿ ಮಲ್ಲಿಕಟ್ಟೆ (ದಕ್ಷಿಣ ದಿಕ್ಕು) ಮೂರನೇ ದಿನದ ಸವಾರಿ ಬಲಿ ಮುಂಡಾಣ ಕಟ್ಟೆ (ಪಶ್ಚಿಮ) ನಾಲ್ಕನೇ ದಿನದ ಸವಾರಿ ಬಲಿ ಯೆಯ್ಯಾಡಿ, ಕೊಂಚಾಡಿ (ಉತ್ತರ ದಿಕ್ಕು) ಕಡೆಗೂ ಹೊರಡುತ್ತದೆ. ಅರಸನು ಕಟ್ಟೆ ಪೂಜೆಗೆ ಹೊರಡುವ ಸಂದರ್ಭದಲ್ಲಿ ಮೊದಲು ಮಠದಲ್ಲಿರುವ ಪಟ್ಟಾಭಿಷೇಕದ ಪೀಠದಲ್ಲಿ ಅರಸನನ್ನು ಕುಳ್ಳಿರಿಸಿ ಆರತಿ ಮಾಡಿ ನಂತರ ಕಟ್ಟೆ ಪೂಜೆಗೆ ಹೊರಡುವ ಕ್ರಮವಿದೆ. ಕದ್ರಿಯಲ್ಲಿ ನಡೆಯುವ ದೀಪದ ಬಲಿಗೂ ಕೊಡಿಬಲಿಗೂ ಅರಸನು ಬರಬೇಕು. ರಥ ಎಳೆಯುವ ಮುನ್ನ ಅರಸನು ರಥಕ್ಕೆ ಒಂದು ಸುತ್ತು ಹಾಕಿ, ಕಾಯಿ ಒಡೆದು ಕುದುರೆ ಏರಬೇಕು. ರಥ ಎಳೆಯುತ್ತಿರುವಾಗ ಅಶ್ವರೂಢನಾಗಿ ಗುಡಿಯ ಹೊರಬಾಗದಿಂದ ಸುತ್ತು ಬರಬೇಕು. ಕದ್ರಿಯಲ್ಲಿ ದೇವರ ಕಂಬಳವೆಂದೇ ಪ್ರಸಿದ್ಧಿ ಪಡೆದ ಕಂಬಳದ ಗದ್ದೆಗೆ ಜೋಗಿ ಅರಸನು ಬಂದು ಪರಶುರಾಮ ಧುನಿಯ ಭಸ್ಮವನ್ನು ಪ್ರೋಕ್ಷಿಸಿ ಕಂಬಳಕ್ಕೆ ಅಪ್ಪಣೆ ಕೊಡುವ ಕ್ರಮವಿದೆ. ಕಳೆದೆರಡು ವರ್ಷಗಳಿಂದ ಕಂಬಳ ಕ್ರೀಡೆ ನಡೆಯುತ್ತಿಲ್ಲ. ಇದಕ್ಕೆ ಕಾರಣ ಕಂಬಳದ ಗದ್ದೆಯಲ್ಲಿ ಇದೀಗ ಬಹುಮಹಡಿ ಕಟ್ಟಡ ನಿರ್ಮಾಣವಾಗುತ್ತದೆ. ಕದ್ರಿ ಜಾತ್ರೆಯ ೯ನೇ ದಿನ ಜೋಗಿ ಅರಸನು ದೇವಸ್ಥಾನದ ಒಳಗೆ ಪ್ರವೇಶಿಸುವುದನ್ನು ಗುಂಡದ ಬಾಗಿಲು ತೆರೆಯುವುದು ಎಂಬುದಾಗಿ ಹೇಳುತ್ತಾರೆ. ಅಂದು ಅರಸರ ಉಪಸ್ಥಿತಿಯಲ್ಲಿ ಶತಕುಂಭಾಭಿಷೇಕ ನಡೆಯುತ್ತದೆ. ದೇವಸ್ಥಾನದಲ್ಲಿ ನಡೆಯುವ ಕಲಾವಧಿಯ ಎಲ್ಲಾ ಉತ್ಸವಗಳಲ್ಲೂ ಅರಸನ ಉಪಸ್ಥಿತಿಯು ಮಠ ಮತ್ತು ಮಂಜುನಾಥ ದೇವಸ್ಥಾನಕ್ಕೆ ಇದ್ದ ನಿಕಟ ಸಂಬಂಧಕ್ಕೆ ಪುಷ್ಟಿ ನೀಡುತ್ತದೆ.ಜಾತ್ರೆ ಮುಗಿದ ಒಂದೆರಡು ದಿನಗಳಲ್ಲಿ ದೈವಸ್ಥಾನದಲ್ಲಿ ನೇಮ ನಡೆಯುತ್ತದೆ.

ಕದ್ರಿ ಕೈಬಟ್ಟಲು ಎಂಬ ಹೆಸರಿಗೆ ಸಂಬಂಧಿಸಿದಂತೆ ಸ್ವಾರಸ್ಯಕರವಾದ ಐತಿಹ್ಯವಿದೆ ಕತೆಯಿದೆ. ಒಮ್ಮೆ ಅರ್ಚಕರಾದ ನೀಲೇಶ್ವರದ ತಂತ್ರಿಗಳು ಜೋಗಿ ಅರಸನಿಲ್ಲದೆ ರಥೋತ್ಸವ ನಡೆಸಲು ಮುಂದಾದರು. ಮಂಜುನಾಥ ದೇವರನ್ನು ರಥದಲ್ಲಿರಿಸಿದ ಬಳಿಕ ಪೂಜೆ ಸಲ್ಲಿಸಿ, ರಥ ಎಳೆಯಲು ಅಪ್ಪಣೆಯನ್ನು ನೀಡಿದರಂತೆ. ಆದರೆ, ಭಕ್ತರೆಲ್ಲರೂ ಸೇರಿ ರಥವನ್ನು ಎಷ್ಟೇ ಎಳೆದರೂ ಅದು ಒಂದ್ಜೂರು ಚಲಿಸಲಿಲ್ಲ. ಕೊನೆಗೆ ದೇವಸ್ಥಾನದಲ್ಲಿರುವವರಿಗೆ ತಮ್ಮ ತಪ್ಪಿನ ಅರಿವಾಗಿ ಕದ್ರಿ ಮಠದ ಅರಸನ ಕ್ಷಮೆ ಯಾಚಿಸಿ, ಅವರನ್ನು ಸಕಲ ಮರ್ಯಾದೆಯಿಂದ ಅರಸನ್ನು ಕರೆದು ತಂದು ರಥದ ಮುಂದೆ ನಿಲ್ಲಿಸಲಾಯಿತು. ಆಗ ಜೋಗಿ ಅರಸನು "ಆವೋ ಬೇಟಾ ಮಂಜುನಾಥ" ಎಂದು

ಹೇಳಿ ರಥದ ಹಗ್ಗವನ್ನು ಹಿಡಿದು ಎಳೆದಾಗ ರಥವು ಧರಧರನೇ ಚಲಿಸಿತು. ಈ ಘಟನೆಯಿಂದ ಅವಮಾನಿತರಾದ ನೀಲೇಶ್ವರದ ತಂತ್ರಗಳು ತನ್ನ ಕೈಯಲ್ಲಿದ್ದ ತಂತ್ರಿ ತೂಗುವ ಬೆಳ್ಳಿಯ ಬಟ್ಟಲನ್ನು (ಕೈಬಟ್ಟಲು) ಎತ್ತಿ ಬಿಸಾಡಿ ಹಿಂತಿರುಗಿ ನೋಡದೆ ನಡೆದು ಹೋದವರು ಅನಂತರದಲ್ಲಿ ಇತ್ತ ಬರಲಿಲ್ಲವಂತೆ. ಆವತ್ತು ತಂತ್ರಿಗಳು ಬಿಸಾಡಿದ ಬಟ್ಟಲು ಮಾರು ದೂರ ಹೋಗಿ ಬಿದ್ದ ಜಾಗವು 'ಕದ್ರಿ ಕೈಬಟ್ಟಲು' ಎಂದು ಹೆಸರಾಯಿತು.[೧೪] ಇದು ಜೋಗಿಗಳು ಮತ್ತೆ ಮಂಜುನಾಥನ ಗುಡಿಗಿರುವ ನಾಥನ ಮೂಲ ಸಂಬಂಧವು ಕಡಿಯದಂತೆ ಮಾಡಿದ ಸೆಣಸಾಟದಂತೆ ಕಾಣುತ್ತದೆ.[೧೬]

ಗೌಡ ಸಾರಸತ್ವ ಮತ್ತು ಜೋಗಿಗಳು :–

ರಥ ಬೀದಿಯ ವೆಂಕಟರಮಣ ದೇವಸ್ಥಾನದಲ್ಲಿರುವ ಗೌಡ ಸಾರಸತ್ವ ಬ್ರಾಹ್ಮಣರ ಆರಾಧ್ಯ ಮೂರ್ತಿಗಳಾದ ಶ್ರೀ ದೇವಿ, ಭೂದೇವಿ, ಮತ್ತು ವೀರ ವೆಂಕಟೇಶ ದೇವರಿಗೂ ಜೋಗಿಗಳಿಗೂ ಕಾರಣದಿಂದ ಸಂಬಧ ಬೆಸೆಯಲಾಗಿದೆ. ಅದಕ್ಕೆ ಸಂಬಂದಿಸಿದಂತೆ ಐತಿಹ್ಯ ಹೀಗಿದೆ. ಕ್ರಿ.ಶ. ೧೭೩೫ರಲ್ಲಿ ಮಂಗಳೂರಿಗೆ ಬಂದಿದ್ದ ಬೈರಾಗ್ ಪಂಥದ ರಮ್ತೇ ಜೋಗಿಯೊಬ್ಬರು ತನಗಾದ ಆರ್ಥಿಕ ಸಮಸ್ಯೆ ನಿವಾರಿಸಿಕೊಳ್ಳಲು ಮಂಗಳೂರಿನ ಕೆಳ ರಥಬೀದಿಯಲ್ಲಿದ್ದ ಉದ್ಯಮಿ ಸಾಹುಕಾರ್ ತಿಮ್ಮಪ್ಪೈಯವರಲ್ಲಿಗೆ ತನ್ನ ಬಂದು ತನ್ನ ಬಳಿಯಲ್ಲಿದ್ದ ಜೋಳಿಗೆಯನ್ನು ಅವರಲ್ಲಿ ಗಿರಿವಿ ಇಟ್ಟು ಹಣ ಪಡೆದುಕೊಂಡು ಹೋದರಂತೆ. ಅಂಗಡಿ ಮಾಲಕ ಪೈಗಳು ಅಂದಿನ ತಮ್ಮ ವ್ಯವಹಾರ ಮುಗಿಸಿ ಬಾಗಿಲು ಮುಚ್ಚಿ ಮನೆಗೆ ತೆರೆಳಿದರು. ಆದರೆ, ರಾತ್ರಿಯ ಹೊತ್ತು ಬಾಗಿಲು ಮುಚ್ಚಿದ ಅಂಗಡಿ ಕೋಣೆಯೊಳಗಡೆ ವಿಚಿತ್ರ ಘಟನೆಯೊಂದು ನಡೆಯಿತು. ಅದೇನೆಂದರೆ ಯೋಗಿಯು ಪೈಗಳ ಬಳಿ ಗಿರಿವಿ ಇಟ್ಟು ಹೋಗಿದ್ದ ಜೋಳಿಗೆಯೊಳಗಿಂದ ದಟ್ಟವಾದ ಹೊಗೆ ಹೊರಬರಲು ತೊಡಗಿತ್ತು. ವಿಷಯ ಅರಿತ ಮಾಲಕರು ಓಡೋಡಿ ಬಂದು ಕೋಣೆಯ ಬಾಗಿಲು ತೆರೆದು ನೋಡಲು, ಸಾಧುಗಳು ತಮ್ಮ ಬಳಿ ಗಿರಿವಿ ಇಟ್ಟಿದ್ದ ಚೀಲದೊಳಗಿನಿಂದ ಹೊಗೆಯು ಬರುತ್ತಿತ್ತು. ಅದನ್ನು ತೆರೆದು ನೋಡಿದಾಗ ಒಳಗಡೆ ಶ್ರೀ ದೇವಿ, ಭೂದೇವಿ, ಮತ್ತು ವೀರ ವೆಂಕಟರಮಣ ಮೂರ್ತಿಯಿರುವುದು ಕಂಡಿತು. ಅವರು ತಕ್ಷಣವೇ ಅದನ್ನೆತ್ತಿ ತಂದು ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಒಪ್ಪಿಸಿದರು. ದೈವಸಂಕಲ್ಪದ ಮಹತ್ಕಾರ್ಯದಿಂದಾಗಿ ಗೌಡ ಸಾರಸತ್ವ ಬ್ರಾಹ್ಮಣರ ಏಳಿಗೆಯೂ ಆಯಿತು.[೧೫] ಈ ಉದ್ದೇಶಕ್ಕಾಗಿ ಕದ್ರಿ ರಥೋತ್ಸವ ಸಂದರ್ಭದಲ್ಲಿ ಜೋಗಿ ಅರಸರು ಕುದುರೆಯೇರಿ ಬ್ರಹ್ಮ ರಥದೊಡನೆ ದೇವಸ್ಥಾನಕ್ಕೆ ಪ್ರದಕ್ಷಿಣೆ ಬರುವ ಸಡಗರವನ್ನು ನೋಡಲು ಮಂಗಳೂರಿನ ಈ ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಬರುವುದು ವಾಡಿಕೆ.

ಕಂಚಿನ ಹಣತೆ :–

ಕದ್ರಿಯ ದೇವಸ್ಥಾನದ ಕಾಲಾವಧಿ ಜಾತ್ರೆಯಲ್ಲಿ ದೀಪದ ಬಲಿ ಉತ್ಸವವು ನಡೆಯುತ್ತದೆ. ಈ ಸಂದರ್ಭದಲ್ಲಿ ದೀಪಸ್ತಂಭದ ಎಲ್ಲಾ ಅಂಕಣಗಳಲ್ಲಿ ದೀಪ ಹಚ್ಚುವುದು ಮತ್ತು ಏಳನೇಯ ದೀಪೋತ್ಸವದಂದು ಮತ್ತು ಲಕ್ಷದೀಪೋತ್ಸವದಂದು ಏಳು ಅಂಕಣಗಳಲ್ಲಿ ಮಾತ್ರ ದೀಪ ಹಚ್ಚುವ ಪದ್ದತಿ ರೂಢಿಯಲ್ಲಿದೆ. ಸೂಕ್ಷ್ಮವಾಗಿ ಗಮನಿಸಿದರೆ ಈ ದೀಪ ಸ್ತಂಭದ ಬುಡದಲ್ಲಿರುವ ಶಿಲಾ ಪೀಠದಲ್ಲಿ ಯೋಗಿವರ್ಯರೊಬ್ಬರಿಗೆ ಬಲಬದಿಯಲ್ಲಿ ನಿಂತು ಚಾಮರ ಬೀಸುವ ಮತ್ತು ಎಡ ಬದಿಯಲ್ಲಿ ಛತ್ರವನ್ನು ಹಿಡಿದು ನಿಂತು ಕೊಂಡಿರುವ ಇಬ್ಬರು ಜೋಗಿ ಪುರುಷರ ಉಬ್ಬು ಶಿಲ್ಪ

ಕಾಣಿಸುತ್ತದೆ. ಈ ಶಿಲ್ಪದ ಹಿಂದೆಯೂ ಒಂದು ಐತಿಹ್ಯವಿದೆ.

ಕದ್ರಿ ದೇವಸ್ಥಾನದ ಪೂರ್ವದಿಕ್ಕಿನ ಎತ್ತರದಲ್ಲಿದ್ದ ಬಡ ಬಿಲ್ಲವ ಸಮುದಾಯದ ಕುಟುಂಬವೊಂದು ತಮ್ಮ ಮನೆಯಂಗಳದಲ್ಲೇ ಶೇಂದಿ ವ್ಯಾಪಾರ ಮಾಡಿಕೊಂಡಿತ್ತು. ಹೆಚ್ಚಿನ ಶೇಂದಿಯನ್ನು ಯಜಮಾನನೇ ಕುಡಿದು ತೂರಾಡುತ್ತ ಹೆಂಡತಿ ಮಕ್ಕಳನ್ನು ಹೊಡೆದು ಹಿಂಸಿಸುತ್ತಿದ್ದನು. ತಂದೆಯ ಹಿಂಸೆ ತಾಳದೆ ಮಕ್ಕಳಿಬ್ಬರು ಮನೆ ಬಿಟ್ಟು ದೇವಸ್ಥಾನದ ಕಡೆಗೆ ಓಡಿ ಬರಲು, ಯೋಗಿ ಪುರುಷರಿಬ್ಬರು ಇದನ್ನು ಕಂಡು ಅವರ ದುಃಖಕ್ಕೆ ಕಾರಣವನ್ನು ತಿಳಿದರು. ತಮ್ಮ ಯೋಗ ಶಕ್ತಿಯಿಂದ ಆ ಮಕ್ಕಳನ್ನು ಚಿಕ್ಕ ಪುತ್ಥಳಿಗಳನ್ನಾಗಿ ಪರಿವರ್ತಿಸಿ ಜೋಳಿಗೆಯಲ್ಲಿ ತುಂಬಿದರು. ಮನೆಯೊಡತಿಯು ಮಕ್ಕಳಿಗಾಗಿ ರೋದಿಸುತ್ತಿರುವುದನ್ನು ಕಂಡ ಆಕೆಯ ದುಃಖಕ್ಕೆ ಕಾರಣವಾದ ಪತಿಯನ್ನು ವಿಚಾರಿಸಲು ಆತ ಬರುವ ತನಕ ದೇವಸ್ಥಾನದ ಧ್ವಜ ಸ್ಥಂಭದ ಬಳಿಯ ಒಂದು ನಿರ್ದಿಷ್ಟ ಸ್ಥಳದಲ್ಲಿ ಕುಳಿತರು. ಶೇಂದಿಯ ಅಮಲಿನಲ್ಲಿ ತೂರಾಡುತ್ತಾ ಮನೆಯೊಳಕ್ಕೆ ತೆರಳಿದ ಮಕ್ಕಳ ತಂದೆಯನ್ನು ಕಂಡು ಜೋಗಿ ಪುರುಷರು ಆತನನ್ನು ಬಳಿಗೆ ಕರೆದರು. ಅವರನ್ನು ಕಂಡ ಕೂಡಲೇ ಆತನ ಕುಡಿತದ ಅಮಲು ಇಳಿಯಿತು. ಅವನಿಗೆ ತನ್ನ ತಪ್ಪಿನ ಅರಿವಾಯಿತು. ಮಕ್ಕಳು ಕಾಣೆಯಾಗಿರುವ ಬಗ್ಗೆ ತಿಳಿದುಕೊಂಡ ಆತ ದುಃಖಿತನಾದನು. ಜೋಗಿ ಪುರುಷರ ಪಾದಗಳ ಮೇಲೆ ಬಿದ್ದು ತನ್ನ ಮಕ್ಕಳನ್ನು ಹುಡುಕಿ ಕೊಡಬೇಕೆಂದು ಕಣ್ಣೀರಿಟ್ಟನು. ಆಗ ಜೋಗಿ ಪುರುಷರು ತಮ್ಮ ಜೋಳಿಗೆಯಿಂದ ಪುತ್ಥಳಿಗಳೆರಡನ್ನು ಹೊರ ತೆಗೆದು ಅದಕ್ಕೆ ಜೀವದಾನ ನೀಡಿದರು. ಇನ್ನು ಮುಂದೆ ನಿನ್ನ ಮಡಕೆಯಲ್ಲಿ ಶೇಂದಿಯು ಅಕ್ಷಯವಾಗಲಿ. ನೀವು ಸುಖವಾಗಿ ಬಾಳಿರೆಂದು ಹರಸಿ ಅದೃಶ್ಯರಾದರು.

ಜೋಗಿ ಪುರುಷರ ಆಶೀರ್ವಾದಿಂದ ಎಷ್ಟು ಮಾರಾಟ ಮಾಡಿದರೂ ಮುಗಿಯದೆ ಮಡಿಕೆಯಲ್ಲಿದ್ದ ಶೇಂದಿಯು ಉಕ್ಕಿ ಹರಿಯ ತೊಡಗಿತ್ತು. ಇದು ಕಾಶೀ ಭಾಗೀರಥಿ ತೀರ್ಥಕ್ಕೆ ಬೆರೆಯುವ ಮುನ್ನ ಬಿಲ್ಲವ ದಂಪತಿಗಳು ಓಡೋಡಿ ಬಂದು ಪಕ್ಕದಲ್ಲೆ ಒಂದು ಹೊಂಡವನ್ನು ಅಗೆದು ಶೇಂದಿಯು ಅದರಲ್ಲಿ ಶೇಖರಣೆಯಾಗುವಂತೆ ಮಾಡಿದರು. ಆದರೆ, ಆ ಹೊಂಡದಲ್ಲಿಯೂ ಶೇಂದಿ ತುಂಬಿ ಹೊರ ಹರಿಯಿತು. ಇನ್ನು ಇದು ಮಂಜುನಾಥನ ಪವಿತ್ರ ತೀರ್ಥದಲ್ಲಿ ಬೆರೆಯಬಹುದೆಂದು ಹೆದರಿ ಆ ಮಹಿಳೆ ಜೋಗಿ ಪುರುಷರನ್ನು ನೆನೆದಳು ಕ್ಷಣಾರ್ದದಲ್ಲೇ ಶೇಂದಿಯ ಹೊರ ಹರಿಯುವಿಕೆಯು ನಿಂತು ಹೋಗಿ ಮಡಕೆ ಮಾತ್ರ ಅಕ್ಷಯವಾಗಿ ಉಳಿಯಿತು. ಆ ಕಾರಣಕ್ಕೆ ಆಕೆಯು ಮಂಜುನಾಥನಿಗೆ ಕಂಚಿನ ಹಣತೆಯಲ್ಲಿ ದೀಪ ಉರಿಸುತ್ತೇನೆಂದು ಹರಕೆ ಹೊತ್ತು ಕೊಂಡಳು. ಕಾಶೀ ಭಾಗೀರಥ ತೀರ್ಥದ ಬಳಿಯ ಹೊಂಡದಲ್ಲಿ ತುಂಬಿರುವ ಶೇಂದಿಯು ಪವಿತ್ರ ಗಂಗೆಯಾದರೆ ದುರ್ಗಾದೇವಿಗೆ ಚಿನ್ನದ ಮೂಗುತಿಯನ್ನು ಅರ್ಪಿಸುತ್ತೇನೆಂದು ಸಂಕಲ್ಪ ಮಾಡಿ ಕೊಂಡಳು. ಮರುದಿನ ಮುಂಜಾನೆ ಆಕೆ ಶೇಂದಿಯ ಮಡಕೆಯ ಬಳಿ ಬರವಾಗ ಮಡಕೆಯ ಅಡಿಯಲ್ಲಿ ಸುತ್ತಿ ಇಟ್ಟಿದ್ದ ಬಟ್ಟೆಯು ಹೆಡೆ ಎತ್ತಿ ಕುಳಿತಿರುವ ಸರ್ಪವಾಗಿತ್ತು, ನೀರೆತ್ತಲು ಕಾಶೀ ಭಾಗೀರಥಿಗೆ ಬರುವಾಗ ಪಕ್ಕದ ಹೊಂಡದಲ್ಲಿದ್ದ ಶೇಂದಿಯು ಗಂಗೆಯಾಗಿ ಪರಿವರ್ತನೆಯಾಗಿತ್ತು, ಇದನ್ನು ಕಣ್ಣಾರೆ ಕಂಡ ಆಕೆ ಮತ್ತೆ ಜೋಗಿ ಪುರುಷರನ್ನು ಸ್ಮರಿಸಿಕೊಂಡಾಗ ಅವರು ಕಾಣಿಸಿಕೊಂಡು "ನಿನ್ನ ಪತ್ನಿಯನ್ನು ಕಾಣಲು ನಾವು ಕಾದು ಕುಳಿತ ಸ್ಥಳದಲ್ಲಿ ಕಂಚಿನ ದೀಪ ಸ್ಥಂಭವನ್ನು

ನಿರ್ಮಿಸಿ ಮಂಜುನಾಥನಿಗೆ ಹೇಳಿದ ಹರಕೆಯನ್ನು ತೀರಿಸಕೋ. ಮುಂದಕ್ಕೆ ನಿಮ್ಮ ವಂಶಸ್ಥರಿಂದಲೇ ಕಂಚಿನ ಹಣತೆಗಳಲ್ಲಿ ದೀಪವು ಜಾತ್ರೆ ಸಮಯದಲ್ಲಿ ಬೆಳಗುತ್ತಿರಲಿ" ಎಂದು ಹರಿಸಿದರು. ಅಂದುಕೊಂಡಂತೆ ದೀಪಸ್ಥಂಭ ಸ್ಥಾಪನೆಯಾಯಿತು. ಮೊದಲ ಬಾರಿಗೆ ಜಾತ್ರಾ ಉತ್ಸವದ ಸಂದರ್ಭದಲ್ಲಿ ಧ್ವಜಾರೋಹಣದ ದಿನ ಇದೇ ಕಂಚಿನ ತಿಬಿಲೆಗಳಲ್ಲಿ (ಕಂಚಿನ ಹಣತೆ) ದೀಪ ಹಚ್ಚಲಾಯಿತು. ಆದರೆ, ಏಳನೇ ದೀಪೋತ್ಸವ ದಿವಸ ದೀಪ ಹಚ್ಚುವವನು ಮೇಲಿನ ಅಂಕಣದಿಂದ ಹಚ್ಚಿಕೊಂಡು ಕೆಳಕ್ಕೆ ಬರುವ ಬದಲು ಕೆಳಗಿಂದ ಮೇಲಕ್ಕೆ ಹಚ್ಚಿಕೊಂಡು ಹೋದನು. ಆತ ಏಳು ಅಂಕಣಗಳನ್ನು ತಲುಪುವಾಗ ಉರಿಯುತ್ತಿರುವ ದೀಪಗಳ ತಾಪಕ್ಕೆ ಮೈ ಉರಿ ಬರಲು ಮುಂದಿನ ಅಂಕಣಗಳನ್ನು ಹಚ್ಚದೇನೆ ದೀಪಸ್ಥಂಭದ ಮೇಲಕ್ಕೇರಿ ಜೋಗಿ ಪುರುಷರನ್ನು ನೆನೆದುಕೊಂಡು ದೇವಸ್ಥಾನದ ಮೇಲ್ಭಾಗದಲ್ಲಿರುವ ಕೊಳಕ್ಕೆ ದುಮುಕಿ ಅಲ್ಲಿಯೇ ಕಲ್ಲಾದನು. [೧೬]

ಬೆಸ್ತರು ಮತ್ತು ನಾಥ ಪಂಥೀಯರು :-

ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರ ಸಮಾಜದವರು ಶ್ರಾವಣ ಹುಣ್ಣಿಮೆಯ ದಿನ ಕದ್ರಿ ಜೋಗಿ ಮಠದ ಅರಸರಿಂದ ಬೋಳೂರಿನ ಕಡಲ ಕಿನಾರೆಯಲ್ಲಿ ಸಮುದ್ರ ಪೂಜೆ ಮಾಡಿಸುವ ವಾಡಿಕೆ ಇದೆ. ಅಂದು ತೆಂಗಿನ ಕಾಯಿ ಮತ್ತು ಹಾಲನ್ನು ಕಡಲಿಗೆ ಸಮರ್ಪಿಸುವ ಮೂಲಕ ಮತ್ಸ್ಯ ಸಮೃದ್ಧಿಗಾಗಿ ಜೋಗಿ ಅರಸರು ಪ್ರಾರ್ಥನೆ ಮಾಡುತ್ತಾರೆ.

ಕದ್ರಿ ಮಂಜುನಾಥನ ವರ್ಷಾವಧಿ ಜಾತ್ರೆಯ ಆರಂಭದ ಮೊದಲ ದಿವಸ ಸಾಯಂಕಾಲ ಧ್ವಜಸ್ತಂಭ ಏರಿಸುವ ಕಾರ್ಯಕ್ರಮವಿದೆ. ಈ ಸಂದರ್ಭ ಏಳು ಪಟ್ಣ ಮೊಗವೀರ ಸಮಾಜದವರು ನಾಥರ ಮಠಕ್ಕೆ ಬಂದು, ಕಾಳಭೈರವ ಸನ್ನಿಧಿಯಲ್ಲಿ ಪೂಜೆ ಸಲ್ಲಿಸುತ್ತಾರೆ. ನಂತರ ಮಠಾಧಿಪತಿಗಳಿಂದ ಪ್ರಸಾದ ಸ್ವೀಕರಿಸಿ ಅಲ್ಲಿಂದ ಅರಸರೊಂದಿಗೆ ಕದ್ರಿ ದೇವಸ್ಥಾನಕ್ಕೆ ತೆರಳಿ ಪೂಜೆ ನಡೆಸುತ್ತಾರೆ. ಧ್ವಜಾರೋಹಣರ ಮುನ್ನ ನಡೆಯುವ ಪೂಜಾ ವಿಧಿ ವಿಧಾನಗಳು ತಂತ್ರಿಗಳವರಿಂದ ಜರಗಿದ ನಂತರ ಈ ಸಮಾಜದವರು ಧ್ವಜ ಸ್ತಂಭವನ್ನು ಏರಿಸಿ ನಿಲ್ಲಿಸುತ್ತಾರೆ. ಹತ್ತನಾಜೆ ದಿನದಂದು ಧ್ವಜಸ್ಥಂಭವನ್ನು ಇಳಿಸುವ ಕಾರ್ಯವನ್ನು ಮೊಗವೀರ ಸಮಾಜದವರೇ ನೆರವೇರಿಸುತ್ತಾರೆ. ಮತ್ಸ್ಯೇಂದ್ರನು ಮೀನಿನ ಹೊಟ್ಟೆಯಲ್ಲಿ ಹುಟ್ಟಿದನೆಂಬ ಐತಿಹ್ಯದಂತೆ ಅವನೊಬ್ಬ ಬೆಸ್ತರ ಮನೆಯವನು. ಬೆಸ್ತರು ಶಿವನ ಮಡದಿಯಾದ ಗಂಗೆಯ ಮಕ್ಕಳು. ಇವರು ಶಿವನಿಗೂ ಮಕ್ಕಳು. ಹಾಗಾಗಿ ಶಿವನ ಶಿಷ್ಯ ಮತ್ಸ್ಯೇಂದ್ರ ಇಲ್ಲಿ ಸಾಂಸ್ಕೃತಿಕ ನಾಯಕನಾಗಿ ಕಂಡು ಬರುತ್ತಾನೆ. ಮತ್ಸ್ಯೇಂದ್ರನ ಮೂರ್ತಿಯು ಕದ್ರಿಯ ಜೋಗಿ ಮಠ, ಮಂಜುನಾಥನ ಗುಡಿ, ಮಂಗಳೂರಿನ ಬಿಜೈಯಲ್ಲಿರುವ ಮಂತಿಬಾಯಿ ಸ್ಮಾರಕ ಸರಕಾರಿ ಮ್ಯೂಸಿಯಂನಲ್ಲೂ ಇದೆ. ಅಲ್ಲದೆ ಕದ್ರಿ ಮಠದಲ್ಲಿ ರೋಟ್ ಪೂಜೆಯ ಪ್ರಸಾದವನ್ನು ಮೀನಿಗೂ ಹಾಕುವ ಆಚರಣೆ ಇತ್ತು. ನಾಥರಲ್ಲಿ ಮತ್ಸ್ಯೇಂದ್ರ ನಾಥನಲ್ಲದೆ ಮೀನನಾಥ ಎಂಬ ಯೋಗಿಯೂ ಇದ್ದಾನೆ. ಅನಿಮಿಷನಾಥನೂ ಕೂಡಾ ಮೀನಿನ ಸಂಕೇತದವನೇ. [೧೭]

ಕದಿರು ತುಂಬುವ ಹಬ್ಬ :-

ಇದೊಂದು ವಿಶೇಷವಾದ ಆಚರಣೆಯಾಗಿದ್ದು, ಕದ್ರಿಯ ಮಂಜುನಾಥನ ಗುಡಿಯಿಂದ ಮಠಕ್ಕೆ ಹೋಗುವ ದಾರಿ ಮಧ್ಯೆಯಿರುವ ಮಲರಾಯ ದೈವ ಸ್ಥಾನದ ಸ್ವಲ್ಪ ಮುಂದೆ ಒಂದು ಕಟ್ಟೆ ಇದೆ. ಇದನ್ನು 'ಪುದ್ದರ್ ಕಟ್ಟೆ' ಎನ್ನುತ್ತಾರೆ. ಬಾದ್ರಪದ ಶುಕ್ಲದ ಚೌತಿಯ ಹಿಂದಿನ ದಿನ

ಗೌರಿ ತದಿಗೆಯಂದು ಭತ್ತದ ಕದಿರುಗಳನ್ನು ತಂದು ಕಟ್ಟೆಯ ಮೇಲಿಡುತ್ತಾರೆ. ಅಲ್ಲಿ ಮಠದ ಅರ್ಚಕರು ಅದಕ್ಕೆ ಪೂಜೆ ಸಲ್ಲಿಸುತ್ತಾರೆ. ನಂತರ ಗ್ರಾಮದ ಜನರಿಗೂ ಹಂಚುತ್ತಾರೆ. ಇನ್ನೊಂದು ಹೊರೆ ಕದಿರನ್ನು ಜೋಗಿ ಮಠಕ್ಕೆ ಕೊಂಡೊಯ್ದು, ಕಾಳ ಬೈರವನ ಸನ್ನಿದಿಯಲ್ಲಿಟ್ಟು ಪೂಜೆ ಮಾಡುತ್ತಾರೆ. ತಮ್ಮ ಶಿಷ್ಯಯವರ್ಗಕ್ಕೂ ಕದಿರು ನೀಡುತ್ತಾರೆ. ಅಂದು ಮಂಜುನಾಥ ದೇವಸ್ಥಾನಕ್ಕೆ ಮಠದ ವತಿಯಿಂದ ಅಂದಿನ ನೈವೇದ್ಯಕ್ಕೆ ಒಂದು ಮುಡಿ ಬೆಳ್ತಿಗೆ ಅಕ್ಕಿಯನ್ನು ಕೊಡಲಾಗುತ್ತದೆ. ಆ ಅಕ್ಕಿಯಿಂದ ನೈವೇದ್ಯವನ್ನು ಮಾಡಿ ಮಂಜುನಾಥನಿಗೆ ಅರ್ಪಿಸಿ, ನಂತರ ಪೀಠಾಧಿಪತಿಗಳಿಗೆ ಅದನ್ನು ಒಪ್ಪಿಸುವುದು ಪದ್ಧತಿ.

ಮಹಾಲಯ ಹಾಗೂ ನವರಾತ್ರಿ ಆಚರಣೆ :-

ಮಹಾಲಯ ಅಮವಾಸ್ಯೆಯಂದು ದೇವಸ್ಥಾನದ ಅರ್ಚಕ ವರ್ಗವನ್ನೆಲ್ಲ ಜೋಗಿ ಮಠಕ್ಕೆ ಅಹ್ವಾನಿಸಿ, ಪೀಠಾಧಿಪತಿಗಳು ಪಡಿದಾನ ಮಾಡುತ್ತಾರೆ. ಮರುದಿನ ನವರಾತ್ರಿಯ ಕಾರ್ಯಕ್ರಮದ ಪ್ರಯುಕ್ತವಾಗಿ ತಂತ್ರಿಗಳಿಂದ ಕಲಶ ಸ್ಥಾಪನೆಯನ್ನು ಮಾಡಿಸುತ್ತಾರೆ. ಈ ಕಲಶಕ್ಕೆ ತುಂಬಿಸುವ ನೀರನ್ನು ಪವಿತ್ರ ಜಲವಾದ 'ರಾಮಲಕ್ಷ್ಮಣ' ಜಲಧಾರೆಯಿಂದಲೇ ತರಬೇಕು. ಅಂದಿನಿಂದ ನವಮಿವರೆಗೂ ನಿತ್ಯವೂ ಬ್ರಾಹ್ಮಣರಿಂದ ಶ್ರೀ ದೇವಿ ಪಾರಾಯಣ ಮಾಡಿಸಲಾಗುತ್ತದೆ. ಅಷ್ಟಮಿಯಂದು ಶ್ರೀ ದುರ್ಗಾ ಹೋಮ, ಜ್ವಾಲಮಾಹಾಮಾಯಿ ಪೂಜೆಯೂ ಇದೆ. ಮಠದ ಆಡಳಿತಕ್ಕೊಳಪಟ್ಟ ಭದ್ರಕಾಳಿಯ ಪೂಜೆಯು ಕೂಡಾ ಪೀಠಾಧಿಪತಿಗಳ ಉಪಸ್ಥಿತಿಯಲ್ಲಿ ನಡೆಯುತ್ತದೆ.

ನವಮಿಯಂದು ನಡೆಯುವ ೯ ದಿನಗಳ ಪೂಜೆಯಲ್ಲಿ ನವ ದುರ್ಗೆಯರ ಪ್ರತೀಕವಾಗಿ ೯ ಕನ್ಯೆಯರನ್ನು ಪೂಜಿಸುವ ಕ್ರಮವಿದೆ. ಈ ಕನ್ಯೆಯರು ೯ ದಿನಗಳೂ ಕೂಡಾ ಮಠದಲ್ಲೇ ಇದ್ದುಕೊಂಡು ಪೂಜಾಧಿ ಕ್ರಮಗಳನ್ನು ಪೂರೈಸುತ್ತಾರೆ. ೯ನೇ ದಿನ ಸಾಯಂಕಾಲ ಕನ್ಯೆಯರಿಗೆ ಸ್ನಾನ ಮಾಡಿಸಿ, ಹೊಸ ಬಟ್ಟೆಗಳನ್ನು ತೊಡಿಸಿ, ಹೂಹಾರ ಹಾಕಿ ನವದುರ್ಗೆಯರ ಪೂಜಾ ಕ್ರಮದಲ್ಲೇ ಪೂಜೆ ಮಾಡಿ ನೈವೇದ್ಯ ನೀಡುವುದು ವಾಡಿಕೆ. ವಿಜಯ ದಶಮಿಯಂದು ಭೈರವನಿಗೆ 'ರೋಟ್' ಪೂಜೆ ಮಾಡಿ ಜ್ವಾಲಾ ಮಹಾಮಾಯಿಗೂ ನೈವೇದ್ಯ ಸಮರ್ಪಿಸಿ ನಂತರ ಕಳಸ ವಿಸರ್ಜನೆ ಮಾಡುತ್ತಾರೆ. ಸಾಯಂಕಾಲ ಪೀಠಾಧಿಪತಿಗಳು ತನ್ನ ಶಿಷ್ಯ ಮತ್ತು ಭಕ್ತ ವೃಂದದೊಡನೆ ಕಳಸ ಸ್ಥಾಪನೆಯಂದು ಭಿತ್ತಿರುವ ಮೊಳಕೆ ಬಂದಿರುವ ನವದಾನ್ಯಗಳನ್ನು ಹಿಡಿದು ಕೊಂಡು ಶ್ರೀ ಮಂಜುನಾಥ ಕ್ಷೇತ್ರಕ್ಕೆ ಹೋಗಿ ದೇವರಿಗೂ ಪರಿವಾರ ದೈವಗಳಿಗೂ ಪ್ರಸಾದ ಅರ್ಪಿಸಿ, ಅಲ್ಲಿನ ಅರ್ಚಕ ಹಾಗೂ ಪರಿಚಾರಕ ವರ್ಗಕ್ಕೆ ದಕ್ಷಿಣೆಯನ್ನು ಕೊಟ್ಟು, ಶಾಂತಿ ಕಟ್ಟೆಯ ಹಾದಿಯಾಗಿ ಬರುತ್ತಾರೆ. ನಂತರ ಮಠದ ಆವರಣದೊಳಗೆ ತಲುಪಿ ಅಲ್ಲಿ ನೆಟ್ಟಿರುವ ಗೊನೆ ಬಿಟ್ಟಿರುವ ಬಾಳೆಯ ಗಿಡವನ್ನು ಪರಂಪರೆಯಂತೆ ಬಾಣಬಿಟ್ಟು ತುಂಡರಿಸುತ್ತಾರೆ.[೮] ಇದು ನವರಾತ್ರಿ ಹಬ್ಬದ ಆಚರಣೆಯ ಮುಕ್ತಾಯ.

ವಿಟ್ಲ ಜೋಗಿ ಮಠ :

ರಾಜಗುರು ಬಿರುದ ಹೊಂದಿರುವ ವಿಟ್ಲ ಜೋಗಿ ಮಠಕ್ಕೆ ವಿಟ್ಲದ ಡೊಂಬ ಹೆಗ್ಗಡೆ ಅರಸರು ೧೦೧ ಎಕ್ರೆ ಭೂಮಿಯನ್ನು ದಾನ ಮಾಡಿ ನಾಥ ಯೋಗಿಗಳಿಗೆ ಆಶ್ರಯ ನೀಡಿದರು. ವಿಟ್ಲದ ಯೋಗೀಶ್ವರ ಮಠವು ಸತ್ಯನಾಥ್ ಬ್ರಹ್ಮ ಪಂಥಕ್ಕೆ ಸೇರಿದ ಯೋಗಿಗಳ ಮಠವಾಗಿದೆ.

ಶಿಲಾ ಶಾಸನಗಳು

ON A SLAB SET UP IN THE COURT-YARD OF THE MANJANATHA TEMPLE AT KADRI, SAME TALUK AND DISTRICT.

1 ಸ್ವಸ್ತಿ [।*] ಶ್ರೀಮ[ತ್]ಪ್ರತಾಪ[illegible] [illegible]
2 [illegible]
3 [illegible]
4 [illegible]

ON ANOTHER SLAB IN THE SAME PLACE, RIGHT OF ENTRANCE.

First Face.

1 [ಶ್ರೀ [।*] ನಮಸ್ತುಂಗಶಿರಶ್ಚುಂಬಿಚಂದ್ರ]ಚಾಮರಚಾರವೇ [।*] ತ್ರೈಲೋಕ್ಯನಗರಾರಂಭಮೂಲಸ್ತಂ-ಭಾ-
2 [illegible]
3 [illegible]
4 [illegible]
5 . . . . [illegible]
6 . . . . [illegible]
7 . . . . [illegible]
8 [illegible] . . . [illegible] . . .
9 . . . . . [illegible] . . . .
10 . . . . . [illegible]
11 . . . . [illegible] . . . . [illegible] . . .
12 [illegible] . . . . . . [illegible] . . . [illegible]
13 [illegible]
14 [illegible] . . . . . . [illegible]
15 . . . . . . [illegible] . . [illegible]
16 . . . . [illegible] . . . . [illegible]
17 [illegible]
18 [illegible]
19 [illegible]
20 [illegible] . . . .
21 [illegible]
22 [illegible]
23 [illegible]
24 [illegible]
25 [illegible]
26 [illegible]
27 [illegible]
28 [illegible]
29 . . [illegible]
30 [illegible]
31 . . [illegible]

Second Face.

32 [illegible]
33 [illegible]
34 [illegible] . . .
35 [illegible]
36 [illegible]
37 [illegible]
38 [illegible]
39 [illegible]
40 [illegible]

ON A SLAB SET UP NEAR THE BATHING-TANK IN THE SAME PLACE.

First Face.

21 . . [illegible]
22 [illegible] . . . .
23 . . . . . [illegible] . . [illegible] . . .
24 . . . . [illegible] . . . .
25 . . . . [illegible] . . . .
26 . . . .
27 [illegible] . . . . . .
28 [illegible]
29 [illegible]
30 [illegible] . . . .
31 [illegible] . . .
32 [illegible] . . . . [illegible] . [illegible]
33 [illegible]
34 [illegible]
35 [illegible]
36 [illegible]
37 [illegible]
38 [illegible] . .
39 [illegible]
40 [illegible]
41 [illegible]
42 [illegible]

Second Face.

43 . . . . [illegible]
44 . . . . [illegible]
45 . . . . [illegible] . . . . . .

46 [illegible]
47 [illegible]
48 [illegible]
49 [illegible]
50 [illegible]
51 [illegible]
52 [illegible]
53 [illegible]
54 [illegible]
55 [illegible]
56 [illegible]
57 [illegible]
58 [illegible]
59 [illegible]
60 [illegible]
61 [illegible]
62 [illegible]
63 [illegible]

ON THE PEDESTAL OF THE BRONZE IMAGE OF LOKESVARA IN THE SAME TEMPLE.

1 [illegible]
2 [illegible]
3 [illegible]
4 [illegible]

ON A SLAB LYING UNDER THE IMAGE OF MATSYENDRANATHA AT THE JOGI-MATHA ON THE HILL AT THE SAME VILLAGE.

1 [illegible]
2 [illegible]
3 [illegible]
4 [illegible]

5 [illegible]
6 [illegible]
7 [illegible]
8 [illegible]
9 [illegible]
10 [illegible]

ON A SCULPTURE IN THE BASEMENT OF THE LAMP-PILLAR IN FRONT OF THE MANJANATHA TEMPLE AT THE SAME VILLAGE.

1 [illegible]

ON A SLAB SET UP NEAR THE JOGI-MATHA ON THE HILL AT THE SAME VILLAGE.

1 [illegible]
2 [illegible]
3 [illegible]
4 [illegible]
5 [illegible]
6 [illegible]
7 [illegible]
8 [illegible]
9 [illegible]
10 [illegible]
11 [illegible]
12 [illegible]
13 [illegible]
14 [illegible]
15 [illegible]
16 [illegible]
17 [illegible]
18 [illegible]
19 [illegible]
20 [illegible]
21 [illegible]
22 [illegible]
23 [illegible]
24 [illegible]
25 [illegible]
26 [illegible]
27 [illegible]
28 [illegible]

29 ತೇ ಶ್ರವಿ[ಸ] ॥ ಯಿ ಧ(ಂ)ಮ್ಮ್ರಕ್ಕೆ ಆರು ಕೆಲಂಬರು ಅಳುಪಿದವರು ವಾರಣಾಸಿಯಲ್ಲಿ ಸಹಸ್ರಕ-
30 ಪಿಲೆಯ ಕೊಂದ ದೋಷಕ್ಕೆ ಹೋಹರು [।] ಯೀ ಧರ್ಮ್ಮವ ಪಾಲಿಸ್ತವರು ವಾರಣಾಸಿಯಲ್ಲಿ ಸಹಸ್ರ-
ಕಪಿಲೆ-
31 ಯ ದಾನವ ಮಾಡಿದ ಪುಂಣ್ಯವ ಪ್ರಾಪ್ತ[ವ]ರು ॥ [ಶು]ಭಮಸ್ತು [॥]

ON ANOTHER SLAB IN THE SAME PLACE.

1 ಸ್ವಸ್ತಿ ಶ್ರೀ [।] ಶಕವರುಷ ೧೩೮೪ ವರ್ತ್ತಮಾನ ಚಿತ್ರಭಾನ್ಯ[ಸಂ] ಸಂವತ್ಸರದ ಪಾ[ಲ್ಗು]ಣ [ಶು]-
2 ದ್ಧ ೫ ಸೋಮವಾರ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ವಿಜಯಭೂ-
3 ಪತಿರಾಯರ [ರಾಜ್ಯಾ]ಭ್ಯುದಯ ಕಾಲದಲ್ಲು ಆ [ಮ]ಹಾಪ್ರಧಾನ ಬಯಿಚದಂಣ್ಣಾ-
4 ಯಕರ ನಿರೂಪದಿಂ [ನಾಗ]ಣ್ಣೊಡೆಯರು ಮಂಗಳೂರ ಪಾಲಿಸುವ ಕಾ-
5 ಲದಲು ಆ ರಾಯ ನಿರೂಪದಿ[ಂ] ಶ್ರೀಕಂಠೇಶ್ವರ[ದೇವ]ರಿಗೆ ನಾಗಂಣ್ಣೊಡೆಯ-
6 ರು ಮೃತ್ಯುಂಜಯ . . . . . . ಮಾಧವ[ಗ]ಳ ಮನಿಷ್ಠಗೋತ್ರದ
7 ಸಾಮಶಾಖೆಯ ಜೋಯಿಸ [ಮಾದಂಣ]ಗಳಿಗೆ ದಂಣಪಟ್ಟಿಯ [ಪುರ]-
8 ವರಿಯೊಳಗೆ ಅಯಿವತ್ತು . . . . . . ಮರಿಯಾದೆಯಲ್ಲಿ ಕೊಟ್ಟ[ರು]
9 ಯಿದರು ಕರರಿಸೋಟಿ ತಿಮರು . . ಮು ೧ ವಳತಿಮರು ಮು ೧ ಕೊಳಕ ತಿ-
10 ಮರು ಮೂ ೩ ಕುಂಟ ಬಟನರಿ ಮಾದಂಡ ತಿಮರು ಮು ೪ ಪುಮು-
11 ವಾಳಾ ತಿಮರು(ಮರು) ಮು ೨ ಅಸ್ತು ಬಯಲು ಮುರಿ ತಾರ ೧೧ ಯಿದಕ್ಕೆ
12 ಸಲುವ ಬೇಣ ಮಾಜಲು . . . ಹಲ ಮನ ಬಾವಿ ಚತುಸ್ಸೀಮ-
13 ಯ ನೀರ ಆ[ರಿ]ಯ ನಿಧಿ ನಿಕ್ಷೇಪ ಜಲ ಪಾಷಾಣ ಅಕ್ಷೀಣಿ ಆಗಾಮಿ ಸಿ-
14 ದ್ಧ ಸಾಧ್ಯ ಅಷ್ಟಭೋಗತೇಜ ಸಾಮ್ಯ . . . ನ್ಯವಾಗಿ ನಾಗಂಣ್ಣೊ[ಡೆ]-
15 ಯರು ಆ ಮಾದಂಣ್ಣಗಳಿಗೆ ಸರ್ವಮಾನ್ಯೋದಕಧಾರಾ-
16 ಪೂರ್ವಕವಾಗಿ ಕೊಟ್ಟ ಪ್ರತ್ತರ ಶಿಲಾಶಾಸನ ಯಿದಕ್ಕೆ ಅಳುಪಿದ-
17 ವರು ವಾರಣಾಸಿಯಲ್ಲಿ ಸಾವಿರ ಕಪಿಲೆ ಸಾವಿರಮಂದಿ ಬ್ರಾಹ್ಮರ
18 [ಕೊ]ಂದ ಪಾ[ಪ]ಕ್ಕೆ ಹೋಹರು [।] ಶುಭಮಸ್ತು ॥

ಮೇಲಾಗಿ ಇದು ೧೬ ಗ್ರಾಮಗಳ ಜೋಗಿ ಸಮುದಾಯಕ್ಕೆ ಗುರು ಪೀಠವೂ ಹೌದು. ಈ ಮಠದ ಮೂಲ ಸ್ಥಾಪಕ ಯೋಗಿ ಮೆಹರ್‌ನಾಥ ಎಂದು ಶಾಸನವಿದೆ. ಅವರ ನಂತರ ೬ ನಾಥರು ಆಗಿ ಹೋಗಿದ್ದಾರೆ. ೧೭೦೦ ರಲ್ಲಿ ಇಲ್ಲಿನ ಪೀಠಾಧಿಪತಿಯಾದವರು ಹರಿದ್ವಾರನಾಥ. ಈ ಆಧಾರದಲ್ಲಿ ೧೬ನೇ ಶತಮಾನದಲ್ಲೇ ಈ ಮಠವಿತ್ತೆಂದು ತಿಳಿಯಬಹುದು. ಆದರೆ, ಮಠದಲ್ಲಿ ಸದ್ಯ ಲಭ್ಯವಿರುವ ನಾಥ ಅರಸರ ದಾಖಲೆಯಂತೆ ಶ್ರೀ ಹರಿದ್ವಾರ ನಾಥಜೀ ೧೭೦೦; ಶ್ರೀ ಹೀರನಾಥ ಜೀ ೧೭೮೭, ಶ್ರೀ ರಾಜಲಕ್ಷ್ಮೀ ನಾಥಜೀ (ರಾವ್ ಸಾಹೇಬ್) ೧೮೭೨, ಶ್ರೀ ರಾಜ ಚಮೇಲಿನಾಥ ಜೀ ೧೯೪೭, ಶ್ರೀ ರಾಜಾಚಂದ್ರನಾಥಜೀ ೧೯೫೭, ಶ್ರೀ ರಾಜಗುರು ಈಶ್ವರನಾಥಜೀ ೧೯೮೧, ಯೋಗಿ ಲಾಲಾನಾಥ್‌ಜೀ ೧೯೮೯, ಯೋಗಿ ಲಾಲಾನಾಥ್‌ಜೀ ೧೯೯೨ ಇವರು ೨೦೦೬ರಲ್ಲಿ ಶಿವೈಕ್ಯರಾದರು. ಈ ನಡುವೆ ಬಂದ ರಾಮ್‌ನಾಥ್ ಜೀ ಯವರು ಪೀಠಾಧಿಪತಿಗಳಾಗಿ ೨೦೧೬ ತನಕ ಇದ್ದು ೨೦೧೬ ರ ಝುಂಡಿಯಲ್ಲಿ ಬಂದ ನೂತನ ಪೀಠಾಧಿಪತಿ ಶ್ರೀ ಶ್ರಧಾನಾಥ್ ಜೀ ಯವರಿಗೂ ಕದ್ರಿ ಮಠದ ಅರಸನ ಜೊತೆಯಲ್ಲೇ ಪಟ್ಟಾಭಿಷೇಕವಾಗಿದೆ.

ವಿಟ್ಲ ಮಠಕ್ಕೆ ಮುಖ್ಯಸ್ಥರಾಗಿದ್ದವರಲ್ಲಿ ಶ್ರೀ ರಾಜಾ ಲಕ್ಷ್ಮೀನಾಥ ಅರಸು ಮತ್ತು ಶ್ರೀ ಈಶ್ವರ ನಾಥರು ಕನ್ನಡಿಗರು. ಲಕ್ಷ್ಮೀನಾಥ ಅರಸರು ವಿಟ್ಲದಲ್ಲಿ ಶಿಕ್ಷಣ ಕ್ರಾಂತಿಗೆ ಮುನ್ನುಡಿ ಬರೆದವರು. ಆಧುನಿಕ ಶಿಕ್ಷಣವನ್ನು ಮಕ್ಕಳಿಗೆ ನೀಡಿದ ಮಹತ್ಕಾರ್ಯಕ್ಕಾಗಿ ಇವರಿಗೆ ಬ್ರಿಟೀಷರು ರಾವ ಸಾಹೇಬ ಬಿರುದು ನೀಡಿದರು. ವಿಟ್ಲ ತಾಲೂಕಿನ ಕೇಪು ಗ್ರಾಮದವರಾಗಿದ್ದ ಅವರು ಸಿರಿವಂತ ಶಾಸ್ತ್ರೀ ಕುಟುಂಬದವರು. ಅಲ್ಲದೆ ದೀರ್ಘಕಾಲದವರೆಗೂ ಮಠಾಧಿಪತಿಯಾಗಿ ಆಡಳಿತ ನಡೆಸಿದ ಹೆಗ್ಗಳಿಕೆ ಗಳಿಸಿದ್ದರು.

ಮಠದಲ್ಲಿ ತೂಗು ಹಾಕಿದ ಪೋಟೋ ಒಂದು ಅವರ ವ್ಯಕ್ತಿತ್ವವನ್ನು ಹೇಳುತ್ತದೆ. ಮೈಸೂರು ರೇಷ್ಮೆ ಪೇಟ ಧರಿಸಿ ಜೇಬಿನಿಂದ ಚಿನ್ನದ ಸರಪಳಿ ಇಳಿ ಬಿಟ್ಟಿರುವ ಪುಲ್‌ನೆಕ್ ಕಾಲರಿನ ಕೋಟಿನಲ್ಲಿ ತೆಗೆದ ಪೋಟೋ ರಾಜ ಠೀವಿಯನ್ನು ನೆನಪಿಸುತ್ತದೆ. ಇವರ ಕರ್ಣಕುಂಡಲಗಳಿಂದ ಮಾತ್ರ ಇವರೊಬ್ಬ ನಾಥ ಯೋಗಿಗಳೆಂದು ತಿಳಿಯಬೇಕು. ವಿಶೇಷವೆಂದರೆ ಲಕ್ಷ್ಮೀನಾಥಜೀ ಅವರನ್ನು ಹೀರಾನಾಥಜೀ ಯವರು ದತ್ತು ತೆಗೆದುಕೊಂಡಿದ್ದರು. ಆದರೆ, ಲಕ್ಷ್ಮೀನಾಥರು ತಮ್ಮ ಜೀವಿತಾವಧಿಯಲ್ಲಿ ಯಾರನ್ನೂ ಶಿಷ್ಯ ಸ್ವೀಕಾರ ಮಾಡದೇ ಇದ್ದುದರಿಂದಾಗಿ ಅವರ ನಂತರ ವಿಟ್ಲ ಯೋಗೀಶ್ವರ ಮಠ ಹರಿದ್ವಾರದಲ್ಲಿನ ನಾಥ ಪಂಥದ ಅಖಿಲ ಭಾರತ ವರ್ಷೀಯ ಅವಧೂತ್ ಬೇಕ್ ಬಾರಹಾ ಪಂಥ ಯೋಗಿ ಮಹಾಸಭಾದ ಕೈಸೇರಿತು ಹಿಂದೊಮ್ಮೆ ಆದಿ ಚುಂಚನಗಿರಿ ಮಠವು ನಾಥರಿಂದ ಕೈಬಿಟ್ಟು ಹೋದಾಗ ಸರಕಾರ ಮಟ್ಟದಲ್ಲಿ ಹೋರಾಟ ಮಾಡಿ ಇವರು ಕೋರ್ಟಿನಲ್ಲಿ ದಾವೆಯೂ ಹಾಕಿದ್ದರು.ಇವರ ನಂತರ ೧೯೫೭ ರಿಂದ ೧೨ ವರ್ಷಗಳಿಗೊಮ್ಮೆ ಮಠಾಧಿಪತಿಯನ್ನು ಭೂಸುಧಾರಣಾ ಕಾಯ್ದೆಯಂತೆ ಗೇಣಿದಾರರ ಪಾಲಾಯಿತು. ಪ್ರಸ್ತುತ ೨೩ ಎಕರೆ ಭೂಮಿ ಮಠದ ವಶವಿದೆಯೆಂದು ಹೇಳಲಾಗುತ್ತದೆ ತಿಳಿಯುತ್ತದೆ. ಇಲ್ಲಿ ಇಂದಿಗೂ ಶೈವಾಗಮ ಪದ್ಧತಿಯಂತೆ ಪೂಜೆ ನಡೆಯುತ್ತಿದ್ದು, ಪ್ರಧಾನ ದೇವರಾದ ಕಾಶೀ ಕಾಳಬೈರವ, ಉಯ್ಯಾಲೆಯಲ್ಲಿರುವ ವ್ಯಾಘ್ರ ಚಾಮುಂಡಿ, ಪೂರ್ವ ದಿಕ್ಕಿನಲ್ಲಿರುವ ಕಲ್ಲುರ್ಟಿ–ಕಲ್ಕುಡ ಮುಂತಾದ ಹಲವಾರು ಭೂತಗಳಿಗೆ ಇಲ್ಲಿ ಪೂಜೆ ನಡೆಯುತ್ತದೆ. ಈ ಮಠದಲ್ಲಿರುವ ಧುನಿಯಲ್ಲಿ ಸದಾಕಾಲ ಸಗಣಿಯ ಭರಣಿಯಿಂದ ಅಗ್ನಿ ಉರಿಯುತ್ತಾ ಇರುತ್ತದೆ. ಕುಂಡದ ಭಸ್ಮವು ಶಿಷ್ಯರಿಗೂ ಹಾಗೂ ಭಕ್ತಾದಿಗಳಿಗೂ ಪವಿತ್ರ ಪ್ರಸಾದವಾಗಿದೆ.[೨]

೧೯೫೬ರ ಝುಂಡಿಯಲ್ಲಿ ನೇಮಕವಾದ ಈಶ್ವರನಾಥಜೀಯವರು ತುಂಬಾ ಪ್ರತಿಭಾವಂತರೂ, ವಾಗ್ಮಿಗಳು ಆಗಿದ್ದರೆಂದು ತಿಳಿಯುತ್ತದೆ. ಅವರಿಗೆ ಪಟ್ಟಾಭಿಷೇಕವಾಗುವಾಗ 'ಧಾರವಾಡದ ಕನ್ನಡಿಗ ಈಶ್ವರನಾಥರಿಗೆ ಪಟ್ಟಾಭಿಷೇಕ ಸಂಭ್ರಮ'ವೆಂದು ಪತ್ರಿಕೆಗಳು ವರದಿ ಮಾಡಿದ್ದವು. ಆದರೆ, ಅವರಿಗಿದ್ದ ದುರಬ್ಯಾಸದ ವಿರುದ್ಧ ಸ್ಥಳೀಯರೇ ಹರಿದ್ವಾರದಲ್ಲಿದ್ದ ಬಾರಹ ಪಂಥದ ಮುಖ್ಯ ಕಛೇರಿಗೆ ದೂರು ಕೊಟ್ಟರು. ಅವರು ಬಂದು ವಿಚಾರಣೆ ಮಾಡಿ ಈಶ್ವರ ನಾಥರನ್ನು ಅಧಿಕಾರದಿಂದ ಕಿತ್ತು ಹಾಕಿದರು. ಕೆಲಕಾಲದವರೆಗೆ ನಿಗೂಢವಾಗಿ ಬದುಕಿದ್ದ ಈಶ್ವರನಾಥರು ನಂತರ ತೀರಿಕೊಂಡರು. ಅವರ ಜಾಗಕ್ಕೆ ಚಂದ್ರಗುತ್ತಿ ಮಠದಲ್ಲಿದ್ದ ಲಾಲಾನಾಥರನ್ನು ನೇಮಕ ಮಾಡಲಾಯಿತು. ೧೯೯೨ರ ಝುಂಡಿಯಲ್ಲಿ ಲಾಲಾನಾಥರು ಇಲ್ಲಿನ ಮರು ಆಯ್ಕೆಯಾದರು. ಲಾಲಾನಾಥರು ಸ್ಥಳೀಯ ಇಲ್ಲಿನ ಭಾಷೆ ಕಲಿತು, ದೇವಸ್ಥಾನಿದ ನವೀಕರಣ ಕಾರ್ಯ ಮಾಡಿದರೆಂದು ತಿಳಿಯುತ್ತದೆ.[೨೦]

ಇಂಡಿಯನ್ ಆಕ್ಟ್ ನಂ.೨೧ ಆಫ್ ೧೯೬೦ ಇದರ ಅನ್ವಯ ಅಖಿಲ ಭಾರತ ವರ್ಷಿಯ ಅವಧೂತ್ ಬೇಖ್ ಬಾರಹ ಪಂಥ್ ಯೋಗಿ ಮಹಾಸಭಾದ ಸಂಸ್ಥೆಯು ೧೯೭೪ರಲ್ಲಿ ಮಾಡಿಕೊಂಡ ಹೊಸ ನಿಬಂಧನೆಗಳ ಪ್ರಕಾರ ಪದಾಧಿಕಾರಿಗಳ ಪಟ್ಟಿ ಹೀಗಿದೆ.

ಶ್ರೀ ಮಹಂತ್ ಅವೇಧ್ಯ ನಾಥ್ ಜೀ ಅಧ್ಯಕ್ಷರು	ಗೋರಖನಾಥ ಮಂದಿರ ಗೋರಕ್‌ಪುರ, ಉತ್ತರ ಪ್ರದೇಶ
ಶ್ರೀ ಮಹಂತ್ ಶ್ರೇಯೋನಾಥ್ ಜೀ ಉಪಾಧ್ಯಕ್ಷರು	ಅಸ್ತಲ್ ಬೋಹರ್, ಜಿಲ್ಲಾ ರೋಹ್‌ತಕ್, ಹರಿಯಾಣ
ಶ್ರೀ ಮಹಂತ್ ಹನುಮಾನ್ ನಾಥ್ ಜೀ ಉಪಾಧ್ಯಕ್ಷರು	ಅಮೃತ್‌ನಾಥ್ ಯೋಗಾಶ್ರಮ ಫತೇಪುರ, ಶೇಕಾವತಿ ರಾಜಸ್ಥಾನ
ಶ್ರೀ ಪೀರ್ ಶ್ರದ್ಧಾನಾಥ್ ಜೀ ಉಪಾಧ್ಯಕ್ಷರು	ಗೋರಕ್ಷ ಟಿಲ್ಲಾ ಅನಾಜ್ ಮಂದಿರ ಅಂಬಾಲನಗರ
ಶ್ರೀ ಯೋಗಿ ರಾಮನಾಥ್ ಜೀ ಶಾಸ್ತ್ರಿ, ಉಪಾದ್ಯಕ್ಷರು ಹಾಗೂ ಖಜಾಂಚಿ	ಶಿವನಾಥ್ ಯೋಗಾಶ್ರಂ ರಮೇಶ್ ನಗರ ಹೊಸದಿಲ್ಲಿ
ಶ್ರೀ ವೈದ್ಯ ಚೇತಾಯಿ ನಾಥ್ ಜೀ ಪ್ರದಾನ ಕಾರ್ಯದರ್ಶಿ	ಕಂಡೇಲಾ, ಜಿಂದ್ ಜಿಲ್ಲಾ ಹರಿಯಾಣ
ಶ್ರೀ ಶಂಭುನಾಥ್‌ಜೀ ಯೋಗಿ ಜಂಟಿ ಕಾರ್ಯದರ್ಶಿ	ಗೋರಖ್‌ನಾಥ್ ಮಂದಿರ ಹರಿದ್ವಾರ್, ಸಹರಾಣ್‌ಪುರ
ಶ್ರೀ ಯೋಗಿ ರವಿನಾಥ್ ಜೀ ಜಂಟಿ ಕಾರ್ಯದರ್ಶಿ	ಅಮೃತ್‌ನಾಥ್ ಆಶ್ರಮ,ಫತೇಪುರ್,ಶೇಕಾವತಿ, ರಾಜಸ್ಥಾನ.

[೨೧]

ಒಟ್ಟಿನಲ್ಲಿ ಇಂತಹದೊಂದು ದಾರ್ಶನಿಕ ಪರಂಪರೆಯ ಹಿನ್ನಲೆಯನ್ನು ಹುಡುಕುತ್ತಾ ಪ್ರಾಚೀನ ಭಕ್ತಿ ಪಂಥವೆಂಬ ನಾಥಪಂಥದ ವಿಶ್ವರೂಪವೇ ನಮಗಾಗುತ್ತದೆ. ಬ್ರಹ್ಮಚರ್ಯೆ ಮತ್ತು ಸನ್ಯಾಸಕ್ಕೆ ಪ್ರಾನ್ಯತೆ ಕೊಡುವ ವಿರಕ್ತ ಪಂಥವಾದ ನಾಥ ಪಂಥವು ಹಲವು ಪಂಥಗಳ ಜೊತೆಗೆ ಅನುಸಂಧಾನ ಮಾಡಿಕೊಂಡಿರುವ ನಂತರ ಶೀಲ ಪಂಥಗಳಲ್ಲಿ ಒಂದು ಎಂದು ತಿಳಿಯುತ್ತದೆ.

ಸಂದರ್ಭ ಸೂಚಿ

೧ ಜೋಗಿ ಆನಂದನಾಥ್, ನಾಥಪಂಥ ಕ್ಷೇತ್ರ ಕದ್ರಿ ಕದ್ರಿ ಜೋಗಿ ಮಠ, ನಾಥ ಸಂಪ್ರದಾಯದ ಪ್ರಚಾರ ಸಮಿತಿ, ೨೦೦೩ ಪುಟ–೨೪–೨೬,

೨ ರೆಹಮತ್ ತರಿಕೆರೆ, ಕರ್ನಾಟಕದ ನಾಥ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೬, ಪುಟ ೧೦೬

೩ ಅದೇ ೨೦೦೬, ಪುಟ–೧೧೧

೪ ಚಂದ್ರಕಾಂತ ಪೋಕಳೆ, ನಾಥ ಸಂಪ್ರದಾಯ ಇತಿಹಾಸ, ಕನ್ನಡ ಜಾಗೃತಿ ಪುಸ್ತಕ ಮಾಲಿ, ೨೦೦೪ ಪುಟ–೩೪

೫ ಟಿ. ಶತೀಶ್ ಯು. ಪೈ, ತರಂಗವಾರ ಪತ್ರಿಕೆ, ಮಣಿಪಾಲ, ೨೦೧೬ ಪುಟ–೭೨

೬ ಜೋಗಿ ಆನಂದನಾಥ್, ನಾಥಪಂಥ ಕ್ಷೇತ್ರ ಕದ್ರಿ ಕದ್ರಿ ಜೋಗಿ ಮಠ, ನಾಥ ಸಂಪ್ರದಾಯದ ಪ್ರಚಾರ ಸಮಿತಿ, ೨೦೦೩ ಪುಟ–೩೧

೮ ಅದೇ೨೦೦೩ ಪುಟ–೩೯

೯ ರಹಮತ್ ತರಿಕೆರಿ, ಕರ್ನಾಟಕದ ನಾಥ ಪಂಥ ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ೨೦೦೬ ಪುಟ ೧೩೦

೧೦ ಮಂಜೇಶ್ವರ ಮುಕುಂದ ಪ್ರಭು, ಸತ್ಯಂ, ಶಿವಂ, ಸುಂದರಂ, ಕೋಡ್‌ವಾರ್ಡ್ ಪ್ರೊಸೆಸ್ ಅಂಡ್ ಪ್ರಿಂಟರ್ಸ್, ೨೦೦೭, ಪುಟ – ೧೯

೧೧ ಕಡವ ಶಂಭಾಶರ್ಮ, ಕದಲೀ ಮಂಜುನಾಥ ಮಹಾತ್ಮೆ, ಕಡವ ಶಂಭು ಶರ್ಮ ಸ್ಮಾರಕ ಪ್ರತಿಷ್ಠಾನ ಪುತ್ತೂರು, ೨೦೦೩ ಪುಟ ೩೨)

೧೨ ರೆಹಮತ್ ತರಿಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬, ಪುಟ– ೧೩೧

೧೩ ಜೋಗಿ ಆನಂದನಾಥ್, ನಾಥಪಂಥ ಕ್ಷೇತ್ರ ಕದ್ರಿ ಕದ್ರಿ ಜೋಗಿ ಮಠ, ನಾಥ ಸಂಪ್ರದಾಯದ ಪ್ರಚಾರ ಸಮಿತಿ, 2003 ಪುಟ–66

೧೪ ಅದೇ, ೨೦೦೩ ಪುಟ–೭೯

೧೫ ಅದೇ, ೨೦೦೩ ಪುಟ–೨೮

೧೬ ಅದೇ, ೨೦೦೩ ಪುಟ–೪೯

೧೮ ಜೋಗಿ ಆನಂದನಾಥ್, ನಾಥಪಂಥ ಕ್ಷೇತ್ರ ಕದ್ರಿ ಕದ್ರಿ ಜೋಗಿ ಮಠ, ನಾಥ ಸಂಪ್ರದಾಯದ ಪ್ರಚಾರ ಸಮಿತಿ, 2003 ಪುಟ-72

೧೯ ಅದೇ ೨೦೦೩, ಪುಟ-೧೮-೨೨

೨೦ ರೆಹಮತ್ ತರಿಕೆರೆ ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ೨೦೦೬, ಪುಟ-೧೩೪

೨೧ ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ಪ್ರಕಾಶ್ ಗ್ರಾಫಿಕ್ಸ್ ಮಂಗಳೂರು, ೨೦೦೩, ಪುಟ -೫೧

ಅಧ್ಯಾಯ : ೭

ಉಪಸಂಹಾರ

ತುಳುನಾಡಿನ ಕರಾವಳಿ ಜಿಲ್ಲೆಯಲ್ಲಿ ನಾಥ ಸಂಪ್ರದಾಯವು ಬೀರಿದಷ್ಟು ಪ್ರಭಾವವನ್ನು ಮತ್ಯಾವುದೇ ಧರ್ಮವು ಬೀರಿಲ್ಲ ಎಂಬುವುದು ಅಧ್ಯಯನಕಾರರ ಬರವಣಿಗೆಯಿಂದ ಖಚಿತವಾಗುತ್ತಿದೆ.

ಮತ್ಸ್ಯೇಂದ್ರನಾಥ ಮತ್ತು ಗೋರಖನಾಥರು ನಾಥ ಸಂಪ್ರದಾಯದ ಪ್ರಸಾರಕ್ಕಾಗಿಯೇ ಅವತರಿಸಿದರೆಂದು ಐತಿಹ್ಯವು ಹೇಳುತ್ತದೆ. ಕಾಳ ಅಂದರೆ ಶಕ್ತಿ ಮತ್ತು ಭೈರವ ಅಂದರೆ ಶಿವ ಹೀಗಾಗಿ ಶಿವ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳಲು ತತ್ತ್ವೋಪದೇಶವೊಂದೇ ಸಾಲದು ಬದಲಾಗಿ ಕಠಿಣ ಹಠಯೋಗದಂತಹ ತಪಸ್ಸಿನ ಅಗತ್ಯವಿದೆ ಎಂಬ ಮುನ್ಸೂಚನೆಯನ್ನು ಹೇಳಲಾಗಿದೆ.[೧]

ನಾಥಪಂಥದ ದೇವಾಲಯಗಳು ಶೈವ ಧರ್ಮಕ್ಕೆ ಸೇರಿದವುಗಳಾಗಿದ್ದರೂ ಕೂಡಾ ಶೈವ, ವೈಷ್ಣವ, ಸ್ಮಾರ್ತರೆನ್ನದೆ ಹಿಂದೂಗಳೆಲ್ಲರೂ ಈ ನಾಥ ಗುಡಿಗಳಿಗೆ ನಡೆದುಕೊಳ್ಳುತ್ತಿರುವುದು ತಿಳಿಯುತ್ತದೆ.

ಲೇಖಕ ರಹಮತ್ ತರಿಕೆರೆ ಮತ್ತು ಜೋಗಿ ಆನಂದನಾಥರವರು ಹೇಳುವಂತೆ ಹಿಂದೆ ನಾಥ ಪಂಥದ ಹಿಡಿತದಲ್ಲಿದ್ದ ಕದ್ರಿ ಮಂಜುನಾಥ ಗುಡಿಯ ಅಧಿಕಾರವು ನಂತರದಲ್ಲಿ ನಾಥ ಜೋಗಿಗಳ ಕೈಯಿಂದ ತಪ್ಪಿ ಹೋಗಿರುವುದು ದಿಟವಾಗುತ್ತದೆ. ಆದರೆ, ಇಂದಿಗೂ ಕೂಡಾ ಅಲ್ಲಿನ ಕಾಲಾವಧಿ ಉತ್ಸವದ ಸಂದರ್ಭದಲ್ಲಿ ನಾಥ ಅರಸನ ಹೆಸರನ್ನು ಆಮಂತ್ರಣ ಪತ್ರಿಕೆಯಲ್ಲಿ ಮುದ್ರಿಸುವುದು ಕಾಣುತ್ತದೆ. ಅಲ್ಲದೆ ಕದ್ರಿಯ ಗುಡಿಯ ಮೂರು ದಿಕ್ಕುಗಳಲ್ಲಿರುವ ನಾಥರ ಮೂರ್ತಿಗಳು ಮತ್ತು ರಥೋತ್ಸವದ ಸಂದರ್ಭ ನಾಥನು ಅಶ್ವಾರೂಢನಾಗಿ ಬಂದು ಉತ್ಸವದಲ್ಲಿ ಪಾಲ್ಗೊಳ್ಳುವುದು ನಾಥ ಜೋಗಿಗಳಿಗೆ ಹಿಂದೆ ಮಂಜುನಾಥನ ದೇವಸ್ಥಾನದಲ್ಲಿದ್ದ ಅಧಿಕಾರವನ್ನು ಸೂಚಿಸುತ್ತದೆ.[೨]

ತುಳುನಾಡಿನ ಜೋಗಿಗಳು ಪ್ರಸ್ತುತ ವಿವಿಧ ಕ್ಷೇತ್ರಗಳಲ್ಲಿ ಹಂಚಿ ಹೋಗಿದ್ದು, ತಮ್ಮ ಗುರುಮಠಗಳಿಗೆ ಸೆಳೆಯಲ್ಪಡುತ್ತಿಲ್ಲ. ಅಷ್ಟೇ ಅಲ್ಲದೆ ಗುರುಪರಂಪರೆಯನ್ನು ಉಳಿಸಿ ಬೆಳೆಸುವ ಬಗ್ಗೆಯೂ ಇವರಲ್ಲಿ ಆಸಕ್ತಿ ಕಾಣುತ್ತಿಲ್ಲ ಎಂಬುವುದು ಅಧ್ಯಯನದಿಂದ ವರದಿಯಲ್ಲಿ ತಿಳಿದು ಬರುತ್ತದೆ.

ವಿಶೇಷವೆಂದರೆ, ಜೋಗಿ ಸಮುದಾಯದ ಕೆಲವು ಗಣ್ಯರು ತಮ್ಮ ಗತದ ಪರಂಪರೆಯ ಅಭ್ಯುದಯಕ್ಕಾಗಿ ಜಾತಿ ಸಂಘಟನೆಯ ಅಡಿಯಲ್ಲಿ ಸಂಘಟಿತವಾಗಿರುವುದು ಕಾಣುತ್ತದೆ. ಇವರು ಜೋಗಿ ಸಮಾಜ ಮತ್ತು ನಾಥಪಂಥದ ಮಹತ್ವವನ್ನು ಎಲ್ಲೆಡೆ ಚದುರಿಹೋಗಿರುವ ತಮ್ಮ ಸಮುದಾಯದ ಮಂದಿಗಳಿಗೆ ತಲುಪಿಸುವ ಮಹತ್ಸಾದನೆಯಲ್ಲಿ ತೊಡಗಿಕೊಂಡಿರುವುದು ತಿಳಿಯುತ್ತದೆ.

ತುಳುನಾಡಿನ ನಾಥ ಸಂಪ್ರದಾಯದ ಮಠಗಳಿಗೆ ಉತ್ತರ ಭಾರತದಿಂದ ಆಯ್ಕೆಯಾಗಿ ಬರುವ ಅರಸರು ಸ್ಥಳೀಯ ಭಾಷೆಯಾದ ತುಳು, ಕನ್ನಡ ಭಾಷೆಯನ್ನು ಕಲಿತುಕೊಂಡು ಭಕ್ತ ಜನರೊಂಡನೆ ವ್ಯವಹರಿಸುವುದು ಕಂಡು ಬರುತ್ತಿಲ್ಲ. ಪ್ರಸ್ತುತ ಜೋಗಿ ಮಠದ ಅರಸರಾಗಿರುವ ನಿರ್ಮಲನಾಥಜೀಯವರು ರಾಜಸ್ಥಾನ ಮೂಲದವರಾಗಿದ್ದು, ಮಂಗಳೂರಿನ ಬಹುತೇಕ ವ್ಯಾಪಾರಿಗಳು ಕೂಡಾ ರಾಜಸ್ಥಾನದವರೇ ಆಗಿದ್ದಾರೆ. ಇವರು ನಿರ್ಮಲನಾಥಜೀಯವನ್ನು ಭೇಟಿಯಾಗಲು ಬರುತ್ತಿದ್ದು ಜೋಗಿ ಸಮುದಾಯವೆಂದರೆ ಕೇವಲ ರಾಜಸ್ಥಾನಿಗಳ ಬೇಟಿಯಾಗದೆ

ಕರಾವಳಿ ಜಿಲ್ಲೆಯ ತುಳುನಾಡಿನ ಸಮಸ್ತ ಜೋಗಿ ಬಾಂಧವರ ಮುಖಾಮುಖಿಗೆ ವೇದಿಕೆಯಾಗಬೇಕು ಎಂಬ ಅಭಿಪ್ರಾಯ ಜೋಗಿ ಸಮುದಾಯದವರಲ್ಲಿ ಮೂಡಿರುವುದು ತಿಳಿದು ಬರುತ್ತಿದೆ.

ಭಾರತೀಯ ಧರ್ಮ ಸಾಧನೆಯ ಸುದೀರ್ಘ ಇತಿಹಾಸದಲ್ಲಿ ನಾಥ ಪಂಥವು ಸಣ್ಣ ಮಜಲಷ್ಟೆ ಈ ದೇಶದಲ್ಲಿ ಆರ್ಯರು ಬರುವುದಕ್ಕೆ ಮುಂಚೆ ಅನೇಕ ಅನಾರ್ಯ ಜನಾಂಗಗಳಿದ್ದವು. ಅವುಗಳಲ್ಲಿ ಎರಡರ ಪ್ರಭಾವ ಪ್ರಮುಖವಾಗಿದೆ. ಮೊದಲನೆಯದ್ದು ಯಕ್ಷ ಜನಾಂಗದ ಪ್ರಭಾವ. ಎರಡನೇಯದು ಪ್ರಾಯಶಃ ಉಳಿದೆಲ್ಲ ಜನಾಂಗದ ಪ್ರಭಾವ. ಇಂತಹ ಪರಿಸ್ಥಿತಿಯಲ್ಲಿ ಆರ್ಯರು ಹೊರಗಿನಿಂದ ಬಂದರು. ಈ ಮೂವರ ನಡುವೆ ಇದ್ದ ಭೇದವೇ ಇತಿಹಾಸ ನಿರ್ಮಿಸಿತು.[೩] ಹೀಗೆನ್ನುವ ಲೇಖಕ ಮ.ಸು. ಕೃಷ್ಣ ಮೂರ್ತಿಯವರ ಅನಿಸಿಕೆಯನ್ನು ಕೆದಕುತ್ತಾ ಹೊರಟರೆ, ಈ ದೇಶದಲ್ಲಿ ಮೂರು ಜನಾಂಗಗಳು ಸೇರಿದಾಗ ಒಂದು ಮತ್ತೊಂದರ ಮೇಲೆ ಸಹಜವಾಗಿ ಪ್ರಭಾವ ಬೀರಿತು ಎಂಬುದು ಸ್ಪಷ್ಟವಾಗುತ್ತದೆ.

ಮತ್ಸ್ಯೇಂದ್ರನಾಥನ ಕುರಿತು ಹುಟ್ಟಿದ ಐತಿಹ್ಯವೊಂದು ಶಿವನ ವೀರ್ಯವು ನೀರಿನಲ್ಲಿ ಬಿದ್ದು ಅದನ್ನು ಮೀನು ನುಂಗಿ ಅದರ ಹೊಟ್ಟೆಯಲ್ಲಿ ಮತ್ಸ್ಯೇಂದ್ರ ಬೆಳೆಯುವುದು. ಪಾರ್ವತಿಗೆ ಶಿವನು ಜಲಮಧ್ಯದ ಏಕಾಂತದಲ್ಲಿ ರಹಸ್ಯವಿದ್ಯೆಯನ್ನು ಹೇಳಿಕೊಡುವುದನ್ನು ಮೀನಿನ ಹೊಟ್ಟೆಯಲ್ಲಿದ್ದ ಮತ್ಸ್ಯೇಂದ್ರ ನಾಥನು ಕದ್ದು ಕೇಳಿ ಪರಮ ಜ್ಞಾನಿಯಾಗುವುದು. ಬೆಸ್ತನ ಮನೆಯಲ್ಲಿ ಬೆಳೆದು, ದೇಶ ಸಂಚಾರಕ್ಕೆ ಹೋಗುವಾಗ ಸಂತಾನ ಭಾಗ್ಯವಿಲ್ಲದ ಹೆಂಗಸಿಗೆ ಮಕ್ಕಳಾಗುವಂತೆ ಹರಸಿ ವಿಭೂತಿಯನ್ನು ನೀಡುವುದು. ಹನ್ನೆರಡು ವರುಷಗಳ ಬಳಿಕ ಮತ್ಸ್ಯೇಂದ್ರ ಬಂದು ತಿಪ್ಪೆ ಗುಂಡಿಯಿಂದ ಗೋರಕ್ಷನಾಥನನ್ನು ಹೊರತರುವುದು. ಇವು ನಾಥರ ಜೊತೆ ಜೋಡಣೆ ಗೊಂಡಿರುವ ಸಾಮಾಜಿಕ ಆಯಾಮಗಳನ್ನು ಬಿಂಬಿಸುತ್ತದೆ. ಮತ್ಸ್ಯೇಂದ್ರನಾಥನ ಕಾರಣದಿಂದ ನಾಥ ಪಂಥವು ಕೆಳ ಸ್ತರದ ಸಮುದಾಯದಲ್ಲಿ ಬೇರು ಬಿಟ್ಟಿತು. ಇದಕ್ಕೆ ಗೋರಖನು ಕೆಳ ಜಾತಿಯ ಹೆಂಗಸಿಗೆ ಮತ್ಸ್ಯೇಂದ್ರ ಕೊಟ್ಟ ವಿಭೂತಿಯಿಂದ ತಿಪ್ಪೆಯಲ್ಲಿ ಹುಟ್ಟಿದನೆಂಬ ಹೋಲಿಕೆ ಪೂರಕವಾಗಿದೆ.

ಇಲ್ಲಿ ಗಮನಿಸತಕ್ಕ ಇನ್ನೊಂದು ವಿಚಾರವೆಂದರೆ, ಶರಣರು ನಾಥರಿಂದ ಪ್ರೇರಣೆ ಪಡೆದಿರುವ ಸಾಧ್ಯತೆಯನ್ನು ವಿದ್ವಾಂಸರು ದೃಢ ಪಡಿಸುವುದು. ಶಂಬಾ ಪ್ರಕಾರ, ನಾಥ ಸಂಪ್ರದಾಯದಿಂದ ಸ್ಫೂರ್ತಿ ಪಡೆದ ಶ್ರೀ. ಪ್ರಭುದೇವರು 'ಲಿಂಗವಂತ' ಮತದ ಉದ್ಧಾರಕರಾದರು.ಡೇರೆಯವರು ಶಿವಶರಣರ ಮೇಲೆ ಆಗಿರುವ ನಾಥ ಪಂಥದ ಪ್ರಭಾವವನ್ನು ನಾಥ ಲಿಂಗಾಯುತ ಎಂಬ ಪರಿಬಾಷೆಯ ಮೂಲಕ ವಿವರಿಸುವುದು. ಇಲ್ಲಿ ದಾರ್ಶನಿಕ ಪ್ರೇರಣೆಗಳನ್ನು ಶರಣರು ನಾಥರಿಂದ ಪಡೆದಿದ್ದರೆ ಅದರಲ್ಲಿ ಅಚ್ಚರಿ ಪಡುವಂತದ್ದೇನಿಲ್ಲ. ಭಾರತದ ಯಾವುದೇ ತಾತ್ವಿಕ ಸಂಪ್ರದಾಯವು ಶೂನ್ಯದಲ್ಲಿ ಅವತರಿಸಿಲ್ಲ. ಆದರೂ ಕೂಡಾ ನಾಥ ಮತದ ಆಚರಣೆಯಲ್ಲಿ ಶರಣರಿಗೆ ಭಿನ್ನಾಭಿಪ್ರಾಯವಿತ್ತು ಎಂದು ಲೇಖಕರು ಹೇಳುತ್ತಿರುವುದು ವಚನಗಳ ಆಧಾರದ ಮೇಲೆ ಎಂದು ಸ್ಪಷ್ಟವಾಗುತ್ತದೆ.[೪] ಕರ್ನಾಟಕದ ನಾಥ ಪಂಥವು ಸಂಗೀತ ಕಥನಗಳಿಗೆ ಮಾತ್ರವಲ್ಲದೆ ಅಭಿನಯ ರಂಗಭೂಮಿಗೂ ಕಾರಣವಾಗಿದೆ ಎಂಬುವುದು ತಿಳಿಯುತ್ತದೆ.

ಹೈದರಾಬಾದ್- ಕರ್ನಾಟಕಗಳಲ್ಲಿ ಗೋರಖ, ಮಚ್ಚೇಂದ್ರನಾಥರ ಡಪ್ಪಿನಾಟ ಮುಂಬೈ ಕರ್ನಾಟಕದಲ್ಲಿ ಮಯಮಚ್ಚೇಂದ್ರ ಆಟ, ಮಧ್ಯ ಕರ್ನಾಟಕದಲ್ಲಿ ಲುಂಕೆ ಮಲೆಸ್ವಾಮಿ ಮಹಾತ್ಮೆ

ದೊಡ್ಡಾಟದಂತಹ ರಂಗ ಪ್ರಯೋಗಗಳು ಹುಟ್ಟಿವೆ. ಕರಾವಳಿಯಲ್ಲಿ ಕದ್ರಿ ಕ್ಷೇತ್ರ ಮಹಾತ್ಮೆ, ಶ್ರೀ ಮಂಗಳಾದೇವಿ ಚರಿತ್ರೆ ಪುರುಷ ಪ್ರವೇಶವಿಲ್ಲದ ಸ್ತ್ರೀ ರಾಜ್ಯದ ಪಿಂಗಳೆಯ ಅರಮನೆಗೆ ಮತ್ಸ್ಯೇಂದ್ರನ ಪ್ರವೇಶ. ಪಿಂಗಳೆ ಮತ್ಸ್ಯೇಂದ್ರನಾಥನನ್ನು ಹಿಂಬಾಲಿಸಿ ಬಂದು ಮಂಗಳ ದೇವಿಯಾಗಿ ನೆಲೆಸುವ ಪ್ರಸಂಗವೂ ಇದೆ. ಇನ್ನೂ ಮೂಲತ ಕೋಟ ಸೀಮೆಯ ಸ್ಥಳೀಯ ದೇವತೆ 'ಅಮೃತೇಶ್ವರಿ ಮಹಾತ್ಮೆ'ಯಲ್ಲಿ ಗೋರಖ ಮತ್ಸ್ಯೇಂದ್ರರ ಕಥೆಯನ್ನು ಅಂತರ್ಗತ ಮಾಡಲಾಗಿದೆ ಅಮೃತೇಶ್ವರಿಯು ಮೂಲದಲ್ಲಿ ವಜ್ರಯಾನ ತಾರಾಭಗವತಿಯಾಗಿದ್ದು, ನಂತರ ನಾಥ ಪಂಥದ ಶಕ್ತಿದೇವತೆಯಾಗಿ ಬದಲಾದಳು ಈಕೆಗೆ ಹಲವು ಮಕ್ಕಳ ತಾಯಿ ಎಂಬ ಹೆಸರಿದ್ದು, ಸಂತಾನಕ್ಕಾಗಿ ಹರಕೆ ಹೊತ್ತವರು ಹೆಚ್ಚಾಗಿ ಈ ಪ್ರಸಂಗವನ್ನು ಆಡಿಸುತಾರೆ ಈ ಯಕ್ಷಗಾನದಲ್ಲಿ ಕರಾವಳಿಯನ್ನು ಆಳುತ್ತಿದ್ದ, ಇಬ್ಬರು ಅರಸರಲ್ಲಿ ಒಬ್ಬನು ತಾನು ಯುದ್ಧದಲ್ಲಿ ಗೆಲ್ಲುವಂತೆ ಹರಸಲು ಮತ್ಸ್ಯೇಂದ್ರನಾಥನಲ್ಲಿ ಬೇಡಿಕೊಳ್ಳುತ್ತಾನೆ. ಅಗ ಮತ್ಸ್ಯೇಂದ್ರನು ಅಮೃತೇಶ್ವರಿಗೆ ಹರಕೆ ಕಟ್ಟಲು ಸಲಹೆ ಮಾಡುತ್ತಾನೆ ಈ ಪ್ರಕಾರವಾಗಿ ಆಕೆಯ ಕೃಪೆಯಿಂದ ಯುದ್ಧ ಗೆಲ್ಲುತ್ತಾನೆ. ಜೋಗದ ಜೋಗಿಲು ಇದರಲ್ಲಿ ಸ್ಥಳಿಯ ಜೋಗಿಗಳು ತಮ್ಮ ಸಾಂಸ್ಕೃತಿಕ ಅಸ್ಮಿತತೆಯನ್ನು ಪಡೆದುಕೊಳ್ಳುವ ಸನ್ನಿವೇಶಗಳನ್ನು ಕಟ್ಟಿ ಕೊಡಲಾಗಿದೆ.[೫] ಈ ಎಲ್ಲಾ ಆಟಗಳಲ್ಲೂ ಗೋರಖ, ಮತ್ಸೇಂದ್ರರ ಪಾತ್ರಗಳು ಬರುವುದು ಕಂಡುಬರುತ್ತದೆ.[೬]

ಕದ್ರಿ ಮತ್ತು ವಿಟ್ಲ ಮಠಗಳು ಇತರ ಜೋಗಿಮಠಗಳಿಗಿಂತ ಹೆಚ್ಚು ಸಂಸ್ಕೃತೀಕರಣ ಪಡೆದಿರುವುದು ಕಂಡು ಬರುತ್ತದೆ. ಕದ್ರಿ ಪರಿಸರದ ಜೋಗಿ ಸಮುದಾಯದವರು ತಮಗೆ ಗುರುಗಳಾದ ನಾಥ ಜೋಗಿಗಳನ್ನು ಕರಾವಳಿಯ ಬ್ರಾಹ್ಮಣ ಮಠಗಳ ಸ್ವಾಮೀಜಿಗಳ ಜೊತೆ ತುಲನೆ ಮಾಡಿ ನೋಡುವ ಅಭ್ಯಾಸವಿದೆ. ನಾಸಿಕ್ ನಿಂದ ಬಂದಿರುವ ಕೆಲವು ನಾಥರು ಇಲ್ಲಿ ಶುಚಿತ್ವಕ್ಕೆ ಗಮನ ಕೊಡುವುದಿಲ್ಲ. ಬೆಳಿಗ್ಗೆ ಎದ್ದ ತಕ್ಷಣ ಸಿಗರೇಟು, ಗಾಂಜಾ ಸೇದುವುದು, ಒರಟುತನ, ಪ್ರದರ್ಶನ ಗರ್ವಿಷ್ಟಸ್ವಭಾವ ಇದೆಲ್ಲ ಇಲ್ಲಿನ ಪರಿಸರದ ಜೋಗಿಗಳಿಗೆ ಹಿಡಿಸಿದಂತಿಲ್ಲ. ತಮ್ಮ ಮದುವೆ ಸಮಾರಂಭಗಳಲ್ಲೂ ಬ್ರಾಹ್ಮಣ ಪುರೋಹಿತರನ್ನು ಕರೆಯಿಸುವ ಸಂಪ್ರದಾಯವಿರುವ ಅವರಿಗೆ ಹೀಗೆ ಅನಿಸುವುದು ಸಹಜ. ಇದು ಇಲ್ಲಿನ ಮಠಗಳು ಸಂಸ್ಕೃತೀಕರಣ ಪಡೆದಿದೆ ಎನ್ನುವುದಕ್ಕೆ ಪುರಾವೆಯಾಗಿದೆ.

ಬೆಸ್ತರಿಗೂ ನಾಥ ಪಂಥಕ್ಕೂ ಕಾರಣದಿಂದ ಸಂಬಂಧಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರು ಬೋಳೂರು ಕಡಲ ಕಿನಾರೆಯಲ್ಲಿ ಜೋಗಿ ಅರಸರಿಂದ ಸಮುದ್ರ ಪೂಜೆಯನ್ನು ಮಾಡಿಸುತ್ತಾರೆ. ಕದ್ರಿಯಲ್ಲಿ ಮೊಗವೀರರು ಜಾತ್ರೆಯ ಸಂದರ್ಭದಲ್ಲಿ ಧ್ವಜಕಂಬ ನಿಲ್ಲಿಸುತ್ತಾರೆ. ರೋಟ್ ಪೂಜೆಯ ಪ್ರಸಾದವನ್ನು ಮಚ್ಚೇಂದ್ರನ ಸ್ಮರಣೆಗಾಗಿ ಮೀನಿಗೆ ಹಾಕುವ ಕ್ರಮವೂ ಇದೆ. ಅಲ್ಲದೆ ಕದ್ರಿ ದೇವಸ್ಥಾನ, ಜೋಗಿಮಠ ಮತ್ತು ಬಿಜೈಯಲ್ಲಿರುವ ಮ್ಯೂಸಿಯಂ ನಲ್ಲೂ ಮತ್ಸ್ಯೇಂದ್ರನ ಮೂರ್ತಿಗಳಿವೆ. ಇವೆಲ್ಲವೂ ನಾಥ ಮಠದ ಜೊತೆಗೆ ಬೆಸ್ತರನ್ನು ಬೆಸೆದಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ನಾಥ ಸಮುದಾಯದಲ್ಲಿ ಬಹಳಷ್ಟು ಜೋಗಿ ಜನರಿಗೆ ನಾವು ನಾಥ ಪಂಥೀಯರು ಎನ್ನುವ ಅರಿವಾಗಲಿ, ಅದರ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕೆಂಬ ಕಾಳಜಿಯಾಗಲಿ ಇದ್ದಂತೆ ಕಂಡು ಬರುವುದಿಲ್ಲ. ಅವರು ತಮ್ಮ ಪರಿಸರದಲ್ಲಿರುವ ಬಲಿಷ್ಠ ಸಂಸ್ಕೃತಿಗೆ ಒಗ್ಗಿಕೊಂಡು ಅದರ ಪ್ರಭಾವವನ್ನು ಸ್ವೀಕರಿಸಿಕೊಂಡು ಬದುಕುತ್ತಲಿದ್ದಾರೆ. ಈ ನಡುವೆ ನಾಥಪಂಥ ಸಮುದಾಯದಲ್ಲಿ ಒಂದು ಎಚ್ಚೆತ್ತ ವರ್ಗವು ತಮ್ಮ

ಪರಂಪರೆಯನ್ನು ಹುಡುಕಿ ಅದನ್ನು ಪಡೆದು ಕೊಳ್ಳಲಿಕ್ಕೆ ಅನೇಕ ಬಗೆಯಲ್ಲಿ ಯತ್ನಿಸುತ್ತಿರುವುದು ಧರ್ಮ ಸಂಪ್ರದಾಯಗಳು ಭಗ್ನವಾಗಿ ಹೋಗುತ್ತಿರುವ ಈ ಒಂದು ಕಾಲಘಟ್ಟದಲ್ಲಿ ಅದನ್ನು ಮರಳಿ ಪಡೆಯುವ ಹಂಬಲವು ಹುಟ್ಟಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಕದ್ರಿ ಸೀಮೆಯ ಜೋಗಿ ಸಮುದಾಯದ ಮಠವು ತಮ್ಮ ಅಶೋತ್ತರಗಳಿಗೆ ಸ್ಪಂದಿಸುವ ವೇದಿಕೆಯಾಗಬೇಕೆಂದು ಬಯಸಿದರೆ ಅದಕ್ಕೆ ತಕ್ಕಂತೆ ಮಿಡಿಯುವುದು ಬಾರಹ ಪಂಥಕ್ಕಾಗಲಿ ಅದರಿಂದಲೇ ನೇಮಕವಾಗುವ ಅರಸನಿಗಾಗಲಿ ಆಗುತ್ತಿಲ್ಲ. ಕದ್ರಿಯ ಜೋಗಿ ಸಮಾಜ ಸುಧಾರಕ ಸಂಘಕ್ಕೆ ನಾಥರು ಗೌರವಾಧ್ಯಕ್ಷರು. ಆದರೆ, ಅವರಿಗೆ ಅದರಲ್ಲಿ ಆಸಕ್ತಿ ಇಲ್ಲ. ಸ್ಥಳಿಯ ಪರಿಸರದಲ್ಲಿ ಬೆರೆತು ಭಾಷೆ ಕಲಿಯುವ ಇಚ್ಛೆಯೂ ಇವರಲ್ಲಿ ಇದ್ದಂತಿಲ್ಲ.

ಜೋಗಿಗಳಿಗೆ ಹೆಮ್ಮೆ ಪಡುವಂತಹ ಸ್ಮರಣೀಯ ಭವ್ಯವಾದ ಗತವಿದೆ. ಆದರೆ, ಉಸಿರುಗಟ್ಟಿಸುವ ವರ್ತಮಾನ. ಇವೆರಡರ ಕಂದರವನ್ನು ಕಲ್ಪಿಸಿಕೊಂಡು ಮುಜುಗರ, ವೇದನೆಯನ್ನು ಪಟ್ಟುಕೊಳ್ಳುವುದು. ಇದನ್ನೇ ಅಸ್ತ್ರವನ್ನಾಗಿ ಮಾಡಿಕೊಂಡು ಸಾಮಾಜಿಕ, ರಾಜಕೀಯ ಕಾರ್ಯಕ್ರಮಗಳನ್ನು ಮಾಡಿ ಸಂಘಟಿತರಾಗುವುದು, ಅಂಟಿರುವ ಕೀಳಿರಿಮೆಯನ್ನು ಹೋಗಲಾಡಿಸಿ ಯಾವ ಜಾತಿ ಹೆಸರಿನಿಂದ ಮುಜುಗರವಾಗುತ್ತಿತ್ತೋ ಆ ಜಾತಿಯ ಮೂಲಕವೇ ಮತ್ತೇ ಒಗ್ಗೂಡುವುದು. ಇದು ಅನೇಕ ಹಿಂದುಳಿದ ವರ್ಗಗಳು ಕಂಡಿಕೊಂಡಿರುವ ದಾರಿಗಳಾಗಿವೆ.

ನಾಥ ಪಂಥದ ಸಾಂಪ್ರದಾಯಿಕ ಪರಂಪರೆಯಲ್ಲಿ ಅಂತಃಶುದ್ಧಿ, ಚಿತ್ತಶುದ್ಧಿ, ಜ್ಞಾನನಿಷ್ಠೆ, ಕಠೋರ ಬ್ರಹ್ಮಚರ್ಯ, ವಾಕ್ ಸಂಯಮ, ಶಾರೀರಿಕ ಶೌಚ, ಮಾಂಸ, ಮದಿರೆಗಳ ವರ್ಜ್ಯ. ಮುಂತಾದುವುಗಳಿಗೆ ಮಹತ್ವ ನೀಡಿರುವುದರಿಂದಾಗಿ ಸಮಾಜದಲ್ಲಿ ನಾಥಪಂಥ ಭದ್ರ ನೆಲೆಯನ್ನು ಕಂಡಿತ್ತು ಎಂದು ಅಧ್ಯಯನದಿಂದ ತಿಳಿದು ಬರುತ್ತದೆ. ಕರಾವಳಿಯ ನಾಥಪಂಥದಲ್ಲಿ ಯಕ್ಷಗಾನ ಮತ್ತು ಭೂತಾರಾಧನೆಯು ಕಂಡು ಬರುತ್ತದೆ. ಪ್ರತಿ, ನಾಥ ಮಠದಲ್ಲಿ ಒಂದೊಂದು ಭೂತದ ಆರಾಧನೆ ಇದೆ. ಕದ್ರಿಯಲ್ಲಿ ಮರುಳು ಧೂಮಾವತಿ ಇದ್ದರೆ ವಿಟ್ಲದಲ್ಲಿ ಚಾಮುಂಡಿ ದೈವವಿದೆ.

ಕದ್ರಿ ಮತ್ತು ವಿಟ್ಲಗಳಲ್ಲಿರುವ ನಾಥಪಂಥ ಮಳಿಯಾಳಿ, ತುಳು ಮತ್ತು ಕನ್ನಡದ ಬಹುಭಾಷಿತ ಪ್ರದೇಶದಲ್ಲಿದ್ದು ಇಲ್ಲಿ ಕರಾವಳಿಯ ಸಾಂಸ್ಕೃತಿಕ ಪ್ರಭಾವವು ಮೇಳೈಸಿದೆ. ಕದ್ರಿ, ಮಂಜೇಶ್ವರ, ವಿಟ್ಲ ಭಾಗದ ನಾಥಪಂಥದಲ್ಲಿ ಕೇರಳದ ಸಂಸ್ಕೃತಿಯ ಪ್ರಭಾವ ಕಾಣುತ್ತಿದೆ. ಅಲ್ಲದೆ 'ಗೋರಖ ಮತ್ಸ್ಯೇಂದ್ರ' ಕೇರಳದಿಂದ ಮಂಗಳೂರಿಗೆ ಬಂದಿದ್ದರೆಂಬ ಐತಿಹ್ಯವಿದೆ.

ಈ ಪಂಥವು ಶುಷ್ಕವಾಗಿ ನಶಿಸಿ ಹೋಗಲು ಕಾರಣವಾಗಿರುವ ಅಂಶವೆಂದರೆ ಗ್ರಹಸ್ಥ ಜೀವನದ ಬಗೆಗಿನ ಅನಾದರ ಮತ್ತು ಭಕ್ತಿಭಾವುಕತೆಗೆ ಕೊಂಚವೂ ಇದು ಅವಕಾಶ ನೀಡದಿರುವುದು, ಇಲ್ಲ ನಡೆಯುತ್ತಿದ್ದ ಅನ್ಯಾಯ ಅನಾಚಾರಗಳಿಗೆ ದೊಡ್ಡ ಏಟು ಬಿತ್ತು.

ಆದರೆ, ಧರ್ಮವನ್ನು ಅನೈತಿಕತೆಯ ಅತೀ ಭಾವುಕತೆಯ ಬಂಧನದಿಂದ ಮೇಲೆತ್ತಿ ಶೀಲ, ಸಹನೆ, ಸಂಯಮಗಳ ಮಂತ್ರವನ್ನು ಉತ್ತರ ಭಾರತದಾದ್ಯಂತ ಪಸರಿಸಿದರ ಫಲವಾಗಿ ಇಲ್ಲಿನ ಧಾರ್ಮಿಕ ವಾತಾವರಣ ಪರಿಶುದ್ಧವಾಯಿತು ಎನ್ನಬಹುದು." ಆದರೆ, ಶುಷ್ಕತೆ ಮತ್ತು ಗ್ರಹಸ್ಥ

ಜೀವನದೆಡೆಗಿನ ನಿರ್ಲಕ್ಷದಿಂದಲೇ ಕರುನಾಡಿನಲ್ಲಿ ಇದು ವೀರಶೈವ ಮತದ ಮುಂದೆ ನಿಲ್ಲಲಾಗದೇ ಹೋಯಿತು ಎಂಬುವುದು ಗಮನಿಸತಕ್ಕ ಸಂಗತಿ.

ಒಟ್ಟಿನಲ್ಲಿ ಹಲವು ಪಂಥದ ಸಹಯೋಗದಲ್ಲಿ ಹುಟ್ಟಿತೆನ್ನಲಾದ ನಾಥ ಪಂಥವು ದಾರ್ಶನಿಕತೆಯ ಪಠ್ಯದಲ್ಲಿ ಬಂದ ಹಾಗೆ ನಾಥವು ಹೇಗೆ ಆಚರಣೆ ಪಡೆಯಿತು? ಪಠ್ಯಸ್ಥ ಚಿಂತನೆಗೂ ಅನುಪಾಲನೆಗೂ ಅಂತರ ಬಂದಿತೇ? ಬಂದರೆ ಯಾಕೆ ಬಂದಿತ್ತು? ಈ ತತ್ವಗಳು ಮೂರ್ತ ಸಮಾಜದಲ್ಲಿ ಹೇಗೆ ಅನ್ವಯಗೊಂಡವು ? ಅನ್ವಯ ಕ್ರಮದಲ್ಲಿ ಮೂಲ ತತ್ವವನ್ನು ಎಷ್ಟು ಪಾಲಿಸಿದವು? ಇಲ್ಲವೇ ಉಲ್ಲಂಘಿಸಿದವು? ಹಾಗೆ ಒಂದು ಮೂಲತತ್ವ ಎನ್ನುವುದು ಇರುತ್ತದೆಯೇ? ನಾಥ ಪಂಥವು ಭಾರತೀಯರ ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ರೂಪಗಳಲ್ಲ ನೆಲೆಸಿತ್ತು? ಈಗ ಅದರೊಳಗೆ ಸಂಭವಿಸುತ್ತಿರುವ ಫಲ್ಲಟಗಳಾವುವು? ಇವೆಲ್ಲದರ ಬಗೆಗೆ ಇನ್ನೂ ಅಧ್ಯಯನಗಳು ಆಗಬೇಕಿದೆ.

ಸಂದರ್ಭ ಸೂಚಿ

೧ ಕಡವ ಶಂಭುಶರ್ಮ, ಕದಲೀ ಮಂಜುನಾಥ ಮಹಾತ್ಮೆ, ಕಡವಶಂಭು ಶರ್ಮಸ್ಮಾರಕ ಪ್ರತಿಷ್ಠಾನ, ಪುತ್ತೂರು ೨೦೦೩ ಪುಟ-೯

೨ ರೆಹಮತ್ ತರಿಕೆರೆ, ಕರ್ನಾಟಕ ನಾಥ ಪಂಥ,ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬ ಪುಟ ೧೩೪

೩ ಮ.ಸು. ಕೃಷ್ಣಮೂರ್ತಿ, ಸಿದ್ಧಸಾಹಿತ್ಯ, ಮಾನಸ ಗಂಗೋತ್ರಿ ಮೈಸೂರು, ೧೯೮೨ ಪುಟ-೨೯೧

೪ ರಹಮಾತ್ ತರಿಕೆರೆ, ಕರ್ನಾಟಕದ ನಾಥ ಪಂಥ, ಹಂಪಿ ಕನ್ನಡ ವಿಶ್ವವಿದ್ಯಾನಿಲಯ ೨೦೦೬, ಪುಟ ೨೭೧

೫. ಅದೇ, ೨೦೦೬, ಪುಟ-೨೭೨

೬. ಮ.ಸು. ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ ಪ್ರಸಾರಾಂಗ ಮಾನಸ ಗಂಗೋತ್ರಿ ಮೈಸೂರು, ೧೯೮೨, ಪುಟ – ೨೧೧

ಗ್ರಂಥ ಸೂಚಿ

1. ಮ. ಸು. ಕೃಷ್ಣ ಮೂರ್ತಿ, ಸಿದ್ಧ ಸಾಹಿತ್ಯ, ಮಾನಸ ಗಂಗೋತ್ರಿ ಮೈಸೂರು 1982
2. ರಹಮತ್ ತರಿಕೆರೆ, ಕರ್ನಾಟಕ ನಾಥ ಪಂಥ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, 2006
3. ಶ್ರೀ ಎಂ. ಗಣಪತಿ ರಾವ್ ಐಗಳ್, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ, ಸಂಶೋಧನ ಕೇಂದ್ರ, ಉಡುಪಿ, 1923
4. ಜೋಗಿ ಆನಂದನಾಥ್, ನಾಥ ಪಂಥ ಕ್ಷೇತ್ರ ಜೋಗಿ ಮಠ, ಮಂಗಳೂರು 2003
5. ಚಂದ್ರಕಾಂತ ಪೋಕಳೆ, ನಾಥ ಸಂಪ್ರದಾಯದ ಇತಿಹಾಸ, ಬೆಳಗಾಂ, 2004
6. ಶ್ರೀ ಶ್ರೀರಂಗ ಹೆಗಡೆ, ಶ್ರೀ ನವನಾಥ ಕಥಾಸಾರ, ಶಿರಸಿ, 2010
7. ಕಡವ ಶಂಭು ಶರ್ಮ, ಕದಲೀ ಮಂಜುನಾಥ ಮಹಾತ್ಮ್ಯೆ, ಪುತ್ತೂರು 2003.
8. ಕಡವ ಶಂಭು ಶರ್ಮ, ಚರ್ಪಟನಾಥ ಶತಕರಿ ಮತ್ತು ನವನಾಥ ಕಥಾಚ, ಪುತ್ತೂರು.
9. ಡಾ. ಎ. ಸುಬ್ಬಣ್ಣ ರೈ, ಕದ್ರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, 1999
10. ಸಿದ್ಧ ಸುಂದರನಾಥಜೀ, ಸ್ಮರಣ ಸಂಚಿಕೆ, ಮಂಗಳೂರು 2007
11. ಜೋಗಿ ಪಂಚಮಿ, ಸ್ಮರಣ ಸಂಚಿಕೆ, ಉಡುಪಿ 2014
12. ತರಂಗ ವಾರ ಪತ್ರಿಕೆ, ಉಡುಪಿ 2016
13. ಶಿವಗೋರಕ್ಷ ಸ್ಮರಣ ಸಂಚಿಕೆ, ಮಂಗಳೂರು 1999

ಕದಲೀನಾಥರ ಮಠದಲ್ಲಿರುವ


ಮತ್ಸ್ಯೆಂದ್ರ ನಾಥ


ಗೋರಖ ನಾಥ


ಚೌರಂಗನಾಥ


ಕದ್ರಿ ಮಂಜುನಾಥನ ಗುಡಿಯಲ್ಲಿರುವ


ಮತ್ಸ್ಯೆಂದ್ರನಾಥ


ಗೋರಖ ನಾಥ


ಚೌರಂಗ ನಾಥ


ಪರಶುರಾಮ ಧುನಿ


ಕಾಶೀ ಕಾಳ ಭೈರವ


ಸಾಧುಗಳ ಛತ್ರ



ಯೋಗಿನಿ ಪಿಂಗಳಾದೇವಿ



ಮಂಗಳಾದೇವಿಯಾಗಿ



ರಥೋತ್ಸವದಲ್ಲಿ ಅಶ್ವರೂಢ ಜೋಗಿ ಅರಸ



ನವನಾಥ ಕುಂಡ



ಜೋಗಿ ಪುರುಷರ ಉಬ್ಬು ಶಿಲ್ಪ



ಕದ್ರಿಯಲ್ಲಿರುವ ಶಿಲಾಸನ



ಕದ್ರಿಯ ಮಂಜುನಾಥನ ಗುಡಿ



ಕದಲಿ ಕಾಶಿ ಕಾಲಭೈರವ ಮಠ



ಕದ್ರಿಯ ರಾಜ ಪಟ್ಟಾಭಿಷೇಕ ಪೀಠ



ಧ್ವಜ ಸ್ತಂಭ



ಶ್ರೀ ಸಿದ್ಧಗುರು ಯೋಗಿ ಸುಂದರನಾಥ್



ಕದ್ರಿಯಲ್ಲಿರುವ ಗೋಮುಖ ತೀರ್ಥ




ನಾಥರ ಪಟ್ಟಾಭಿಷೇಕ



ಗೋರಕ್ಷ ದಂಡ



ಕದ್ರಿಯ ಕಂಚಿನ ದೀಪಸ್ಥಂಭ



ಕದ್ರಿಯ ಅವಲೋಕಿತೇಶ್ವರ ಮೂರ್ತಿಶಿಲ್ಪ



ನವನಾಥರ ಝುಂಡಿಯ ಸ್ವಾಗತ



ಕದ್ರಿಯ ಪಿಠಾಧಿಪತಿ ಜೊತೆ ಲೇಖಕರು